

...ಚುಂಚನಗಿರಿ

(ಜನಪದ ಗೀತೆಗಳು)

ಸಂಪಾದಕ:

ಕ. ರಾ. ಕೃ.

ಶ್ರೀ ಆದಿ ಚುಂಚನಗಿರಿ




ಕ.ರಾ.ಕೃ. ಅವರ ಜನಪದ ಗೀತ ಸಂಗ್ರಹಗಳು :

ಪ್ರಕಟವಾಗಿವೆ :
ಜಾನಪದ ಕಥನ ಗೀತೆಗಳು
ಜಾನಪದ ಪ್ರೇಮಗೀತೆಗಳು
ಜೇನ ಹನಿಗಳು
ಅಂಬಿಗರ ಗಂಗ
ಆಯ್ದ ಮುತ್ತುಗಳು
ಆಯ್ದ ಜಾನಪದ ಗೀತೆಗಳು
ಮಲ್ಲಿಗೆ ನಗುತಾವೆ
ಶ್ರೀ ಆದಿ ಚುಂಚನಗಿರಿ
ಆಯ್ದ ನಾಡಹಾಡುಗಳು

ಅಚ್ಚಿನಲ್ಲಿ :
ಮೇಲುಕೋಟೆ ಚೆಲುವರಾಯ
ಸಂಪಿಗೆ ಅರಳಾವೆ
ಚಿತ್ರಕಲ್ಲು ಮದಕರಿ

ಸಿದ್ಧತೆಯಲ್ಲಿ :
ಹಣ್ಣು ಕೊಟ್ಟೇವು
ಚಿನ್ನದ ಗಿರಿಯೋನೆ !
ರಾಮಾನೆ ಗಿಣಿ ರಾಮಾನೆ !



‘ ಅಂದಚೆಂದದ ಚುಂಚನಗಿರಿ ’

ಚಿತ್ರ :

ಶ್ರೀಆದಿ ಚುಂಚನಗಿರಿ

(ಜಾನಪದ ಭಕ್ತಿಗೀತೆಗಳು)



ಸಂಪಾದಕರು:

ಕೆ. ರಾ. ಕೃ

ಕಲಾವಿದರು:

ಸಿ.ಆರ್. ತಿಪ್ಪೇಸ್ವಾಮಿ

ಸಹಕಾರ:

ಜೀ.ಶಂ. ಪರಮಶಿವಯ್ಯ.

ಮೈಸೂರು:

ಜನಪದ ಸಾಹಿತ್ಯ ಅಕಾಡೆಮಿ.



'ಅಂದಚೆಂದದ ಚುಂಚನಗಿರಿ'

ಚಿತ್ರ :

ಶ್ರೀಆದಿ ಚುಂಚನಗಿರಿ

(ಜಾನಪದ ಭಕ್ತಿಗೀತೆಗಳು)

ಸಂಪಾದಕರು :

ತ.ರಾ.ಸು

ಕಲಾವಿದರು :

ಪಿ. ಆರ್. ತಿಪ್ಪೇಸ್ವಾಮಿ.

ಸಹಕಾರ :

ಜೀ. ಶಂ. ಪರಮಶಿವಯ್ಯ.

ಮೈಸೂರು :

ಜನಪದ ಸಾಹಿತ್ಯ ಅಕಾಡೆಮಿ.

ಪ್ರಥಮ ಮುದ್ರಣ : ೧೯೬೧
ಬೆಲೆ : : ಸಾದಾ ಪ್ರತಿ : ೫-೦೦.
ಜಾಕೆಟ್ ಪ್ರತಿ : ೫-೫೦



ಮುದ್ರಕರು :
ಶ್ರೀ ವೆಂಕಟೇಶ ಪ್ರೆಸ್,
ಮೈಸೂರು.

ಸಚಿತ್ರ :

ಶ್ರೀಆದಿ ಚುಂಚನಗಿರಿ

(ಜಾನಪದ ಭಕ್ತಿಗೀತೆಗಳು)

ಸಂಪಾದಕರು :

ಕ.ರಾ.ಕೃ

ಕಲಾವಿದರು :

ಪಿ. ಆರ್. ತಿಪ್ಪೇಸ್ವಾಮಿ.

ಸಹಕಾರ :

ಜೀ. ಶಂ. ಪರಮಶಿವಯ್ಯ.

ಮೈಸೂರು :


ಜನಪದ ಸಾಹಿತ್ಯ ಅಕಾಡೆಮಿ.

ಪ್ರಥಮ ಮುದ್ರಣ : ೧೯೬೧
ಬೆಲೆ : : ಸಾದಾ ಪ್ರತಿ : ೫-೦೦.
ಜಾಕೆಟ್ ಪ್ರತಿ : ೫-೫೦



ಮುದ್ರಕರು :
ಶ್ರೀ ವೆಂಕಟೇಶ ಪ್ರೆಸ್
ಮೈಸೂರು.

ಒಳ ನೋಟ



ಚಿತ್ರಸೂಚಿ



ಹರಕೆ

ಮೈಸೂರಿನ 'ಜನಪದ ಸಾಹಿತ್ಯ ಅಕಾಡೆಮಿ'ಯವರು ಹೊರಡಿಸಿರುವ ಎಲ್ಲ ಗ್ರಂಥಗಳನ್ನೂ ನಾನು ನೋಡಿದ್ದೇನೆ. ಜಾನಪದಸಾಹಿತ್ಯ ನಮ್ಮ ಸಾಹಿತ್ಯ, ಜೀವನದ ಬೆನ್ನೆಲುಬು; ನಮ್ಮ ಜನರ ಬಾಳು, ಸಂಸ್ಕೃತಿ, ಭಗವದ್ಭಕ್ತಿ, ರಸಿಕತೆ, ಕಷ್ಟಕಾರ್ಪಣ್ಯಗಳ ದರ್ಪಣ. ಪ್ರಾಚೀನ ಕನ್ನಡ ಸಾಹಿತ್ಯವೂ ಹಳ್ಳಿಗರ ಈ ನುಡಿಮುತ್ತುಗಳನ್ನು ಬಳಸಿಕೊಂಡಿದೆ. ಅರ್ವಾಚೀನ ಕನ್ನಡ ಸಾಹಿತ್ಯಕ್ಕೆ ಜಾನಪದ ಗೀತೆಗಳು, ಕಥೆಗಳು ಹೊಸ ಬೆಳಕನ್ನು, ಹೊಸ ಉಸಿರನ್ನು, ನೀಡಬಲ್ಲವು. ಇವುಗಳ ಸಂಗ್ರಹಣ, ಪರಿಷ್ಕರಣ, ಪ್ರಕಟನಗಳಿಗೆ ನಾವು ಎಷ್ಟು ಶ್ರಮಿಸಿದರೂ ಸಾಲದು.

ಕಳೆದ ಎರಡು ದಶಕಗಳಿಂದ ಈ ರಂಗದಲ್ಲಿ ಸ್ವಲ್ಪ ಕೆಲಸ ನಡೆದಿದೆ. ಹಲಸಂಗಿ ಗೆಳೆಯರು, ಮತಿಘಟ್ಟದ ಕೃಷ್ಣಮೂರ್ತಿ, ಬಿ. ಎಕ್. ರಂಗಸ್ವಾಮಿ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್. ಕೆ. ಕರೀಂಖಾನ್, ಕೆ. ವಿ. ಸುಬ್ಬಣ್ಣ, ಯಂ. ಬಿ. ಮರಕಿಣಿ, ಎಂ. ಎಸ್. ಅನಂತಪದ್ಮನಾಭರಾಯ, ಡಾ|| ಗದ್ದಗೀಮಠ ಮೊದಲಾದ ಮಿತ್ರರು ಗಣನೀಯ ಸೇವೆ ಸಲ್ಲಿಸಿದ್ದಾರೆ.

ಶ್ರೀ ಕ.ರಾ.ಕೃ ಅವರು ತಮ್ಮ ಜೀವನವನ್ನೇ ಈ ಸಾಹಿತ್ಯ ರಕ್ಷಣೆ ಪೋಷಣೆಗಾಗಿ ಮುಡಿಪಾಗಿಟ್ಟಿದ್ದಾರೆ. ಅಪಾರ ಪರಿಶ್ರಮದಿಂದ ಕ.ರಾ.ಕೃ. ಜನಪದ ಸಾಹಿತ್ಯದ ಅನರ್ಘ್ಯರತ್ನಗಳನ್ನು ಸಂಗ್ರಹಿಸಿ ಕನ್ನಡಿಗರನ್ನು ಚಿರ ಋಣಿಗಳನ್ನಾಗಿ ಮಾಡಿದ್ದಾರೆ.

ನಮ್ಮ ಪುಣ್ಯಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಪಾರ ಸಾಹಿತ್ಯ ಬೆಳೆ

ದಿದೆ. ಭಕ್ತಜನ ತಮ್ಮ ಆರಾಧ್ಯದೇವರನ್ನು ಕುರಿತು ಹೃದಯಂಗಮ ವಾಗಿ ಹಾಡಿದ್ದಾರೆ. ತಮ್ಮ ಕಷ್ಟಸುಖದೊಂದಿಗೆ ಭಗವಂತನ ಕಷ್ಟಸುಖ ಮೇಳವಿಸಿಕೊಂಡು ಕೇವಲಾದ್ವೈತದ ರಸಸಮುದ್ರದಲ್ಲಿ ಈಜಾಡಿದ್ದಾರೆ. ಇಂಥ ಗೀತೆಗಳ ಮೊಟ್ಟಮೊದಲನೆಯ ಸಂಗ್ರಹವೇ 'ಶ್ರೀಆದಿಚುಂಚನಗಿರಿ.'

"ಅರಿತಂಗೆ ಮರೆತಂಗೆ ಮತಿಕೊಡೊ ಮಹಾದೇವ
ಸತಿಕೊಡೊ ಸಹಾದೇವ—
ವಿದ್ಯಾವ ಕಲಿಸಯ್ಯ ಹಿರಿಯರ ಕೂಡ
........ಸ್ವಾಮಿಗೆ ಶರಣೋ........!"


ಇಂಥ ನೂರಾರು ಪದ್ಯಗಳಲ್ಲಿ ಜನಪದ ಕವಿಯ ಸಹಜ ಪ್ರತಿಭೆ ಅಭಿವ್ಯಕ್ತವಾಗುತ್ತದೆ.

ಇತರ ಪುಣ್ಯಕ್ಷೇತ್ರಗಳ ಬಗ್ಗೆ ದೊರೆಯುವ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯದಲ್ಲಿ ಕ.ರಾ.ಕೃ. ಉದ್ಯುಕ್ತರಾಗಿದ್ದಾರೆ.

ಕಲಾವಿದರಾದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರ ರೇಖಾಚಿತ್ರಗಳು 'ಜನಪದ ಸಾಹಿತ್ಯ ಅಕಾಡೆಮಿ'ಯ ಪ್ರಕಟನೆಗಳ ಶೋಭೆಯನ್ನು ಹೆಚ್ಚಿಸಿವೆ.

ಶ್ರೀ ಕ. ರಾ. ಕೃ ಅವರು ಕೈಗೊಂಡಿರುವ 'ಸಾಹಿತ್ಯಯಜ್ಞ' ನಿರ್ವಿಘ್ನವಾಗಿ ನೆರವೇರಲಿ ಎಂದು ನಾನು ಹಾರೈಸುವುದಲ್ಲದೆ, ಈ ಸಾಹಿತ್ಯವನ್ನು ನಮ್ಮ ಜನ ಹೆಚ್ಚು ಹೆಚ್ಚಾಗಿ ಓದಿ, ಹಾಡಿ ಸಂತೋಷಪಡಬೇಕೆಂದು ಸೂಚಿಸದಿರಲಾರೆ.

ಅ.ನ.ಕೃ.



ಮುನ್ನುಡಿ

ನನ್ನ ತರುಣ ಮಿತ್ರರಾದ ಕ.ರಾ.ಕೃ ಅವರು 'ಶ್ರೀ ಆದಿಚುಂಚನಗಿರಿ' ಎಂಬ ಜನಪದಗೀತಾ ಸಂಕಲನವನ್ನು ಬೆಳಕಿಗೆ ತರುತ್ತಿದ್ದಾರೆ. ನಮ್ಮ ಜನಪದ ಸಾಹಿತ್ಯದ ಸಂಗ್ರಹಣ ಮತ್ತು ಪ್ರಕಾಶನ ಕಾರ್ಯದಲ್ಲಿ ಇವರಿಗಿರುವ ಶ್ರದ್ಧೆ ಆಶ್ಚರ್ಯಕರವಾಗಿದೆ. ಇದು ಎಷ್ಟು ಕಷ್ಟದ ಕೆಲಸ ಎಂಬುದನ್ನು ಬಲ್ಲವರು ಅವರು ಕವಿಗಳಾಗಿರಲಿ ಪಂಡಿತರಾಗಿರಲಿ–ಯಾರೂ ಲಘುವಾಗಿ ಮಾತಾಡುವುದು ಸಾಧ್ಯವಿಲ್ಲ, ಮುಳ್ಳಿನಿಂದ ಹೂವನ್ನು ಬಿಡಿಸಿಕೊಳ್ಳುವಷ್ಟು ತಾಳ್ಮೆ ಎಚ್ಚರಿಕೆ ಮತ್ತು ಸಾಹಸ ಪ್ರಿಯತೆ ಇಲ್ಲದವರು ಈ ಕೆಲಸವನ್ನು ಮಾಡಲಾರರು. ಇವರಿಗೆ ಚತುರ ಕಲಾವಿದರಾದ ತಿಪ್ಪೇಸ್ವಾಮಿಯವರ ಕಲಾತ್ಮಕ ಸಹಕಾರ ಲಭಿಸಿರುವುದರಿಂದ ಮಾತು ಚಿತ್ರಗಳ ಸಂಯುಕ್ತ ಪ್ರಭಾವವನ್ನು ನಾವು ಕಾಣುವಂತಾಗಿದೆ. ಈ ಪವಿತ್ರಕ್ಷೇತ್ರದ ಬಗೆಗೆ ನನ್ನ ತರುಣ ಮಿತ್ರರಾದ ಜೀ. ಶಂ. ಪರಮಶಿವಯ್ಯನವರು ಸುಂದರವಾದ ವಿವರಣೆಯನ್ನು ಕೊಟ್ಟಿರುವ ಲೇಖನ 22-6-58ರ "ಜನಪ್ರಗತಿ"ಯಲ್ಲಿದೆ.

ಕಥೆ ಆಡುವ ಮಾತಿನ ಕವಿತೆಯಲ್ಲಿರುವುದರಿಂದ ಸುಲಭವಾಗಿ ಅರ್ಥವಾಗುತ್ತದೆ. ಎರಡನೆಯದಾಗಿ ಕವಿತೆ ಕನ್ನಡದ ಹಾಡಿಕೆಗೆ ಬಹು ಚೆನ್ನಾಗಿ ಒಪ್ಪುವ ತ್ರಿಪದಿಯಲ್ಲಿದೆ. ಇಡೀ ಜನತೆಯೇ ಕೆಲವು ಪುಣ್ಯಮುಹೂರ್ತಗಳಲ್ಲಿ ಕವಿರೂಪವನ್ನು ಧರಿಸಿ ನಿರ್ಮಿಸಿದ ಕೃತಿಗಳೇ ಜನಪದ ಸಾಹಿತ್ಯ. ತಮ್ಮ ಹೆಸರನ್ನು ಡಂಗುರ ಸಾರದೆ ಜನತೆಯ ಹೃದಯ ಧ್ವನಿಗಳ ನಿರಾಡಂಬರ ಭಾವಮೂರ್ತಿಗಳನ್ನು ನಿರ್ಮಿಸಿಹೋಗಿರುವ ಆ ಅಪೂರ್ವ ಕವಿಗಳಿಗೆ ಎಲ್ಲರೂ ಕೃತಜ್ಞರು.

ನಾನಂತೂ ಇಲ್ಲಿನ ಹತ್ತಾರು ತ್ರಿಪದಿಗಳ ಅನ್ಯಾದೃಶ್ಯ ಕವಿತೆಗೆ ಬೆರಗಾಗಿದ್ದೇನೆ.

ಅರೆಯ ಬಡಿದೆದ್ದ ಆಕಾಶ ಬಡಿದೆದ್ದ
ಅರಳು ಮಲ್ಲಿಗೆಯ ಮುಡಿದೆದ್ದ। ಚುಂಚನಗಿರಿಯ
ಅರೆ ಒಳ್ಳೆದೆಂದು ನೆಲೆಗೊಂಡ....॥

*　　　*　　　*

ಊರು ಮುಂದಲ ಕೆರೆಗೆ ತಾಳೆ ಹೂವಿನ ತೂಬು
ನೋಡಾನ ಬನ್ನಿ ಜನರೆಲ್ಲಾ । ಭೈರುವನ
ಜೋಡು ಕುದುರೇಯು ಕುಣಿತಾವ....॥

ತ್ರಿಪದಿಯಷ್ಟೇ ಅಲ್ಲದೆ ಪ್ರಾರಂಭದಲ್ಲಿ ಮಿಂಚುವ 'ಎಲ್ಲವನೋ ಶಿವ ನೆಲ್ಲವನೋ' ಎಂಬ ಗೀತೆ ತುಂಬ ಮಧುರವಾಗಿದೆ. ನಮ್ಮ ಜನಪದ ಗೀತೆಗಳು ಲೌಕಿಕ ಅಲೌಕಿಕಗಳೆರಡನ್ನೂ ಬೆಳಗಿವೆ ಎನ್ನುವುದಕ್ಕೆ ಇಲ್ಲೂ ಸಾಕ್ಷಿಯಿವೆ.

ಜನಪದ ಸಾಹಿತ್ಯದ ಸ್ವಾಭಾವಿಕತೆ ಕಣ್ಮನಗಳನ್ನು ಸೆಳೆಯುತ್ತದೆ. ಇವುಗಳನ್ನು ಉಳಿಸಿಕೊಂಡು ಬಂದಿರುವ ಹಳೆಯ ಜನ ವಿರಳವಾಗುತ್ತಿದ್ದಾರೆ. ಪ್ರಾಯಶಃ ಆದಷ್ಟು ಬೇಗ ತೀವ್ರವಾಗಿ ಇವುಗಳನ್ನು ಸಂಗ್ರಹಿಸಿಕೊಳ್ಳದೆ ಹೋದರೆ ನಾಳೆಯೋ ಅದರಾಚೆಗೋ ಅಷ್ಟು ನಷ್ಟವಾಗಬಹುದು. ನಮ್ಮ ಜನತೆಯ ನಿಜವಾದ ಕವಿತೆ ಕೈಬಿಟ್ಟು ಹೋಗಬಹುದು. ಹೀಗಾಗಬಾರದು ಎನ್ನುವ ಆಲೋಚನೆ ಅನೇಕರಿಗೆ ಇರುವಂತೆ ತೋರುತ್ತದೆ. ಅಂತಹವರಲ್ಲಿ ಒಬ್ಬರಾದ ಕ. ರಾ. ಕೃ ಅವರು ಅಭಿನಂದನಾರ್ಹರು.

ಉನ್ನತ ವೃಕ್ಷವನ್ನು ಅವಲಂಬಿಸಿರುವ ಪತ್ರಪುಷ್ಪ ಶೋಭಿತಲತೆ ಗಳಂತೆ ನಮ್ಮ ಜನಪದ ಕವಿತೆ ಜನ ಜೀವನವನ್ನು ಅವಲಂಬಿಸಿ ಏರಿ ಹೋಗಿದೆ. ಆ ಕವಿತೆಗಳಲ್ಲಿನ ಸರಳ ಸುಂದರ ಪ್ರಾಚೀನ ಸಂಸ್ಕೃತಿಯ ಎಲ್ಲಾ ಎಲೆಗಳೂ ಕಾಲ ಕ್ರಮೇಣ ನಮ್ಮ ಇಂದಿನ ಜೀವನ ವಲಯದಿಂದ ಮಾಯವಾಗುತ್ತಿವೆ. ಅಂದಿಗೂ ಇಂದಿಗೂ ನಮ್ಮ ಜನಜೀವನದಲ್ಲಿ ಬದಲಾವಣೆಗಳಾಗಿ ಹೋಗಿವೆ. ಮುನ್ನಡೆಯುತ್ತಿರುವುದು ಹಿಂದಿರುಗಿ ನಿಂತು ಬಿಡುವ ಸಾಧ್ಯತೆ ಇಲ್ಲ. ಅಂಥಾ ಸಂದರ್ಭದಲ್ಲೂ ಇಂದಿನ ಪುಣ್ಯ ಕಾಲಗಳಲ್ಲಿ ಉದಯಿಸಿ ಜನ ಜೀವನವನ್ನು ಬೆಳಗಿದ ನೋಟಗಳೂ ಧ್ವನಿ ಗಳೂ ನಮ್ಮ ಮತ್ತು ಮುಂದಿನ ತಲೆಮಾರುಗಳ ಕಿವಿಗೆ ಬೀಳುತ್ತಲೇ ಇದ್ದು ಜೀವನದ ಉತ್ಸಾಹ ಪೂರ್ಣ ಸಮಷ್ಟಿ ಯಾತ್ರೆಗೆ ಎಲ್ಲೂ ಶೃತಿಗತಿ ಭಂಗವಾಗದಂತೆ ನೋಡಿಕೊಳ್ಳಿರಿ. ಕ. ರಾ. ಕೃ ಅವರಂಥ ತರುಣರ ಹೊಂಗನಸು ಮುನ್ನಾಕಾಂಕ್ಷೆಯೂ ಸಫಲವಾಗಲಿ.

ಈ ಕ್ಷೇತ್ರ ನನಗೆ ಪ್ರಿಯವಾದುದೆಂದು ಅರಿತು ಅವರು ನನ್ನನು ಮುನ್ನುಡಿ ಬರೆಯುವಂತೆ ಒತ್ತಾಯಮಾಡಿದ್ದಾರೆ, ಈ ಒತ್ತಾಯಕ್ಕೆ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರು
26-12-60.

ಕೆ. ಎಸ್. ನರಸಿಂಹಸ್ವಾಮಿ



ಕೃತಜ್ಞತೆಗಳು

ನಾಲ್ಕು ಐದು ವರ್ಷಗಳ ಹಿಂದೆಯೇ ಹೊರ ಬರಬೇಕಾಗಿದ್ದ ಈ ಸಚಿತ್ರಸಂಗ್ರಹ ಅನೇಕ ಅಡಚಣೆಗಳಿಂದ ಈಗ ಬೆಳಕು ಕಾಣುತ್ತಿದೆ. ಇದರ ಆರಂಭದ ಪುಟಗಳು—ನಮ್ಮ ಮೊದಲನೆಯ ಜಾನಪದ ಸಾಹಿತ್ಯ ಸಂಕಲನವಾದ ಜೇನ ಹನಿಗಳಿಗೂ ಮೊದಲೇ ಮುದ್ರಣವನ್ನು ಕಂಡಿದ್ದವು. ಇಲ್ಲಿನ ಅನೇಕ ಪ್ರಕೃತಿ ದೃಶ್ಯಗಳು ೧೯೫೭ರ ಸುಮಾರಿಗೆ ಅಚ್ಚಾಗಿದ್ದವು. ಆದರೆ ತುಂಬ ಕಲಾತ್ಮಕವಾಗಿ ಹಾಗೂ ವೈವಿಧ್ಯ ಪೂರ್ಣವಾಗಿ ಈ ಸಂಕಲನವನ್ನು ಹೊರತರಬೇಕೆಂಬ ಆಸೆಯಿಂದ ಇಷ್ಟು ವರ್ಷಗಳು ಇದಕ್ಕಾಗಿ ಕಾಯಬೇಕಾಯಿತು. ಎಲ್ಲಾ ಶ್ರಮಗಳನ್ನು ನೀಗಿಕೊಂಡು ಇದೀಗ ಇಂಥದೊಂದು ಸಂಕಲನವನ್ನು ಕನ್ನಡ ಜನಪದ ಸಾಹಿತ್ಯ ಪ್ರೇಮಿಗಳ ಕೈಯಲ್ಲಿ ಇಡಲು ಹರ್ಷವಾಗುತ್ತಿದೆ.

ಶ್ರೀಆದಿ ಚುಂಚನಗಿರಿ ಬಹು ಹಿಂದೆಯೆ ನನ್ನನ್ನು ಆಕರ್ಷಿಸಿದ್ದ ನೆಲೆ. ನಮ್ಮ ಕಡೆಯ ಪ್ರಸಿದ್ಧ ಕ್ಷೇತ್ರವಾಗಿರುವ ಈ ಗಿರಿಗೆ ಹಿಂದೊಮ್ಮೆ ನಮ್ಮ ಚಿಕ್ಕಮ್ಮನವರು 'ಶಿವರಾತ್ರಿ' ಸಂದರ್ಭದಲ್ಲಿ ಕರೆದೊಯ್ದಾಗ ಅಲ್ಲಿನ ನಿಸರ್ಗರಮ್ಯತೆಗೆ ಬೆರಗಾಗಿದ್ದಂತೆ, ಆ ಕ್ಷೇತ್ರವನ್ನು ಕುರಿತ ಜಾನಪದ ಸಾಹಿತ್ಯವೂ ನನ್ನ ಮನಸ್ಸನ್ನು ಆಕರ್ಷಿಸದಿರಲಿಲ್ಲ. ಶಿವರಾತ್ರಿಯ ದಿನ ನಾಡಿನ ನಾನಾ ಕಡೆಗಳಿಂದ ನಾನಾ ಕೋಮಿನ ಭಕ್ತರು ಅಪಾರ ಸಂಖ್ಯೆಯಲ್ಲಿ ತಮ್ಮ ಕುಲ ದೈವದ ನೆಲೆಯಾದ ಚುಂಚನಗಿರಿಗೆ ಬರುತ್ತಾರೆ. ಶಿವರಾತ್ರಿಯಂದು ಇರುಳೆಲ್ಲಾ ಅಲ್ಲಲ್ಲಿ ಬೆಟ್ಟದ ವಿಶಾಲವಾದ ಬಂಡೆಗಳ ಮೇಲೆ ಗುಂಪುಗುಂಪಾಗಿ ಕುಳಿತು ಹಾಡುತ್ತಿದುದ್ದನ್ನು ಕಂಡು ಕೇಳಿ ಆ ಹಾಡುಗಳನ್ನೆಲ್ಲಾ ಸಂಗ್ರಹಿಸುವ ಆಸೆ ಅಂದೇ ಉಂಟಾಯಿತು. ಅದಾದ

ನಾಲ್ಕೈದು ವರ್ಷಗಳ ಮೇಲೆ ನಾನು ಸಂಗ್ರಹವನ್ನು ಆರಂಭಿಸಲು ಮೊದಲು ಮಾಡಿ ಪ್ರಥಮತಃ ಶ್ರೀಆದಿ ಚುಂಚನಗಿರಿ ಗೀತೆಗಳೇ ವಿಶೇಷ ವಾಗಿ ಎಲ್ಲಿಂದ ಎಲ್ಲಿಯುವರೆಗೂ ದೊರೆತದ್ದನ್ನು ಕಂಡು ಆ ಕ್ಷೇತ್ರದ ಹಿರಿಮೆಗೂ ಪ್ರಭಾವಕ್ಕೂ ಸೋಜಿಗಗೊಂಡೆ! ಅದೇ ಸಂದರ್ಭದಲ್ಲಿ ಶ್ರೀ ಜೀಶಂಪ ಅವರು ತಾವು ಸಂಗ್ರಹಿಸಿರುವ **'ಚುಂಚನಗಿರಿ'** ಕ್ಷೇತ್ರದ ಕೆಲವು ಅಪೂರ್ವ ಗೀತೆಗಳ ಪರಿಚಯ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕ ಟಿಸಿ ಎಲ್ಲರ ಗಮನವನ್ನು ಮೊದಲಿಗೆ ಅತ್ತ ಸೆಳೆದರು. ಅಲ್ಲದೆ ಕನ್ನಡದ ಪ್ರಪ್ರಥಮ ಜನಪದ ಸಾಹಿತ್ಯ ಸಂಗ್ರಹಕರಲ್ಲೊಬ್ಬರಾದ ಶ್ರೀ ಅರ್ಚಕ ರಂಗಸ್ವಾಮಿಯವರು ೧೯೩೩ ರಲ್ಲಿ ಪ್ರಕಟಿಸಿದ **'ಹುಟ್ಟಿದ—ಹಳ್ಳಿ ಹಳ್ಳಿಯ ಹಾಡುಗಳು'** ಎಂಬ ಸಂಗ್ರಹದಲ್ಲಿಯೂ ಈ ಕ್ಷೇತ್ರದ ಬಗ್ಗೆ ಒಂದೆರಡು ಭಕ್ತಿ ಗೀತೆಗಳು ಆಗಲೇ ಪ್ರಕಟವಾಗಿರುವುದು ಕಂಡು ಬರು ತ್ತದೆ. ಶ್ರೀಯುತರು **'ಹೇಮಗಿರಿ'** ಪ್ರಾಂತ್ಯದ ಸುತ್ತಿನಲ್ಲಿ ಸಂಗ್ರಹಿಸಿದ ಹಾಡುಗಳ ನಡುವೆ ಚುಂಚನಗಿರಿ ಕುರಿತಾದ ಹಾಡುಗಳನ್ನು ಕಂಡಾಗ ಯಾರಾದರೂ ಸೋಜಿಗ ಪಡಬೇಕಾದುದೇ ! ಅನಂತರ ಜನಪದ ಸಾಹಿತ್ಯ ಸಂಗ್ರಹಕ್ಕಾಗಿ ನಾನು ನಾನಾ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಾಗ ಅಲ್ಲೆಲ್ಲಾ ಈ ಗೀತೆಗಳ ಪ್ರಭಾವವನ್ನು ಕಾಣಬಹುದಾಗಿತ್ತು. **ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಮತ್ತು ಚಳ್ಳಕೆರೆ** ತಾಲ್ಲೂಕುಗಳಲ್ಲೂ 'ಭೈರುವ-ಮಾಳವ್ವ' ಇವರ ಪ್ರೇಮಕ್ಕೆ ಸಂಬಂಧಿಸಿದ ಕತೆಯು ತುಸು ವ್ಯತ್ಯಾಸದೊಡನೆ ದೊರೆ ಯುತ್ತದೆ. ಅದನ್ನು ಮುಂದಿನ ಪ್ರಕಟಣೆಗಳಲ್ಲಿ ಪ್ರಕಟಿಸುತ್ತೇನೆ. ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಶ್ರಮದಿಂದ ದುಡಿದು ಅನೇಕ ಅಪೂರ್ವ ಗೀತೆ ಗಳನ್ನು ಪ್ರಕಟಿಸಿದ **ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರೂ** ಜನಪದ

ಸಾಹಿತ್ಯ ಪ್ರಚಾರದಲ್ಲಿ ತಮ್ಮದೇ ಆದ ವಿಶಿಷ್ಟ ಸೇವೆಯಿಂದ ದುಡಿಯುತ್ತಿರುವ ಜನಾಬ್ ಎಸ್. ಕೆ. ಕರೀಂಖಾನ್‌ರೂ ಸಂಗ್ರಹಿಸಿರುವ ಸಾಹಿತ್ಯದಲ್ಲೂ, ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣ ಶಾಖೆಯವರಿಂದ ಪ್ರಕಟಿಸಲ್ಪಟ್ಟಿರುವ ಶ್ರೀ ಎಂ. ಎಸ್. **ಗೋಪಾಲನ್** ಅವರ **'ಹಳ್ಳಿಯ ಹಾಡುಗಳು'** ಸಂಕಲನದಲ್ಲಿಯೂ, ಶ್ರೀಗೊರೂರು ರಾಮಸ್ವಾಮಯ್ಯಂಗಾರರ ಸಂಗ್ರಹಗಳಲ್ಲಿಯೂ ಚುಂಚನಗಿರಿಯ ಭೈರುವನನ್ನು ಕುರಿತಾದ ಅಲ್ಪಸ್ವಲ್ಪ ಗೀತೆಗಳನ್ನು ಕಾಣಬಹುದು.

ಶ್ರೀ ಜೀಶಂಪ ಅವರು ೧೯೫೩ರ ವೇಳೆಗೆ ಪ್ರಕಟಿಸಿದ ಲೇಖನಗಳಲ್ಲಿ–ತಾವು ಸಂಕಲಿಸಿದ ಸಾಹಿತ್ಯದ ವೈಶಿಷ್ಟ್ಯವನ್ನು ಕುರಿತು ಬರೆದಿದ್ದಾರೆ. ಚುಂಚನಗಿರಿಯ ಜನಪದ ಸಾಹಿತ್ಯ ಹಾಗೂ ಆ ಸ್ಥಳದ ನಿಸರ್ಗ ವೈಭವವನ್ನೂ,ಪಾವಿತ್ರ್ಯವನ್ನೂ ಒಂದು ಕ್ರಮದಲ್ಲಿ ಬರೆದು ಪ್ರಕಟಗೊಂಡದ್ದು ಇವರಿಂದಲೇ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು, ಶ್ರೀಯುತರು ಇತ್ತೀಚೆಗೆ ಪ್ರಕಟಿಸುತ್ತಿರುವ **'ಅವರ ನೆನೆದೇವು'** ಎಂಬ ವಿಶಿಷ್ಟ ಸಂಕಲನದಲ್ಲಿ ಚುಂಚನಗಿರಿಯ ಹಾಡುಗಳಿಗೆ ಒಂದು ಅಧ್ಯಾಯವೇ ಮೀಸಲಾಗಿರುವುದನ್ನು ಕಾಣಬಹುದು.

ಕಳೆದ ವರ್ಷ ಶ್ರೀಗಿರಿಯ ಸ್ವಾಮಿಜೀಯವರಾದ **ಶ್ರೀ ಶ್ರೀ ಚಂದ್ರಶೇಖರನಾಥರು 'ಚುಂಚನಗಿರಿಯ ಜನಪದಗೀತೆಗಳು'** ಎಂಬ ಒಂದು ಉತ್ತಮ ಸಾಹಿತ್ಯ ಸಂಗ್ರಹವನ್ನು, ಹೊರತಂದು ಆ ಗೀತೆಗಳ ವಿಸ್ತಾರ ವೈವಿಧ್ಯವನ್ನು ಸಾಕಷ್ಟು ಯಶಸ್ವಿಯಾಗಿ ಪರಿಚಯಿಸಿದ್ದಾರೆ. ಅಲ್ಲಿಷ್ಟು ಇಲ್ಲಿಷ್ಟು ಹೀಗೆ ಅನೇಕ ಬಗೆಯಲ್ಲಿ ಜನಪದ ಸಾಹಿತ್ಯ ಪ್ರೇಮಿಗಳ ಮೇಲೆ ಪ್ರಭಾವ ಬೀರಿರುವ ಈ ಗೀತೆಗಳ ವಿಸ್ತಾರವಾದ ಸಂಕಲನವನ್ನು

ಪ್ರಕಟಿಸುವ ಹೊಣೆ ನಮ್ಮದಾಗಿದೆ. ಇಲ್ಲಿ ನಾಡಿನ ಎಲ್ಲಾ ಕಡೆಗಳಲ್ಲೂ ಸಾಮಾನ್ಯವಾಗಿ ದೊರೆಯಬಹುದಾದ ಈ ಕ್ಷೇತ್ರವನ್ನು ಕುರಿತಾದ ಬಹು ಬಗೆಯ ಹಾಡುಗಳನ್ನು ಸಂಕಲಿಸಿ ಕೊಡುವ ಯತ್ನಮಾಡಿದ್ದೇವೆ. ಈ ಕೃತಿ ಒಂದು ಸಮಗ್ರ ರೂಪಿನಲ್ಲಿ ಹೊರಬರಲು ಇಷ್ಟು ದೀರ್ಘ ಕಾಲವೇ ಬೇಕಾಯಿತು. ಇಷ್ಟಕ್ಕೆಲ್ಲಾ ನನ್ನೊಡನೆ ಅನೇಕ ಗೆಳೆಯರು ಸಹಕರಿಸಿ ಪ್ರೋತ್ಸಾಹಿಸಿದ್ದಾರೆ. ಇಲ್ಲಿ ಎಲ್ಲರ ಹೆಸರನ್ನೂ ನೆನೆಯಲು ಆಗದಿದ್ದರೂ, ಅವರೆಲ್ಲರಿಗೂ ನಾನು ಉಪಕೃತನಾಗಿ ಪರೋಕ್ಷವಾಗಿಯೆ ಅವರನ್ನು ವಂದಿಸುತ್ತೇನೆ.

ಇಂಥ ಒಂದು ಕೃತಿ ಇಷ್ಟು ಸುಂದರವಾಗಿ ಹೊರಬರುವಲ್ಲಿ ಉತ್ಸಾಹಿ ಕಲಾವಿದರೂ, ನಮ್ಮ ಆತ್ಮೀಯರೂ ಆದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರ ಕಲಾ ಸಹಕಾರ ಇಷ್ಟೆಂದು ಹೇಳಲಾಗದು. ೧೯೫೫ರಲ್ಲಿಯೇ, ಶ್ರೀಯುತರು ಚುಂಚನಗಿರಿಗೆ ಹೋಗಿ ಅಲ್ಲಿನ ಕೆಲವು ಭವ್ಯ ದೃಶ್ಯಗಳನ್ನು ಚಿತ್ರಿಸಿಕೊಂಡು ಬಂದಿದ್ದರು. ಅಲ್ಲಿಂದ ಇಲ್ಲಿಯವರೆಗೆ ನಮಗಾಗಿ ಅನೇಕ ಬಾರಿ ಅಲ್ಲಿಗೆ ಹೋಗಿಬಂದು ಇಲ್ಲಿ ಪ್ರಕಟವಾಗಿರುವ ಅನೇಕ ಅಪೂರ್ವ ರೇಖಾಚಿತ್ರಗಳನ್ನು ಚಿತ್ರಿಸಿಕೊಂಡು ಬಂದು ನಮ್ಮೊಡನೆ ತುಂಬು ಹೃದಯದಿಂದ ಸಹಕರಿಸಿದ್ದಾರೆ. ಇಲ್ಲಿನ ಪ್ರತಿಚಿತ್ರವೂ ಆ ಕ್ಷೇತ್ರದ ಒಂದೊಂದು ವಿಶಿಷ್ಟ ದೃಶ್ಯಗಳೇ ಆಗಿವೆ. ಅಲ್ಲದೆ ರಕ್ಷಾಪತ್ರದಲ್ಲಿ ಪ್ರಕಟವಾಗಿರುವ ತ್ರಿವರ್ಣಚಿತ್ರವೂ ಅವರ ಜಲವರ್ಣ ಪ್ರಕೃತಿ ಚಿತ್ರದ ಪ್ರತಿಕೃತಿ. ಹೀಗೆ ಪುಟಪುಟಕ್ಕೂ ರಮ್ಯಚಿತ್ರಗಳನ್ನು ಒದಗಿಸಿದ ಶ್ರೀಯುತರಿಗೆ ನಾವು ಅತ್ಯಂತ ಚಿರಋಣಿಗಳು. ಮುಂದಿನ ಪ್ರಕಟಣೆಯಾಗಿ ಸಿದ್ಧವಾಗುತ್ತಿರುವ ಅನೇಕ ಕ್ಷೇತ್ರಗಳನ್ನು ಮತ್ತು ಐತಿಹಾಸಿಕ ಸ್ಥಳಗಳನ್ನು ಕುರಿತ ಜನಪದ

ಸಾಹಿತ್ಯಸಂಗ್ರಹಗಳಿಗೂ ಅವರು ಕಲಾಕೃತಿಗಳನ್ನು ಸಿದ್ಧಗೊಳಿಸುತ್ತಿದ್ದಾರೆ. ತಮ್ಮ ಅನೇಕ ಚಟುವಟಿಕೆಗಳ ನಡುವೆಯೂ ಅಭಿಮಾನದಿಂದ ಸಹಕರಿಸುತ್ತಿರುವ ಶ್ರೀಯುತರಿಗೂ, ಮತ್ತು ಕೃತಿ ಹೊರಬರುವವರೆಗೂ ಅನೇಕ ಬಗೆಯಲ್ಲಿ ಸಹಕಾರ ನೀಡಿ ಈ ಕ್ಷೇತ್ರವನ್ನು ಕುರಿತಾದ ತಮ್ಮ ಕೆಲವು ಪ್ರಬಂಧಗಳನ್ನೂ ಇಲ್ಲಿ ಸೇರಿಸಲು ಅನುಮತಿ ಇತ್ತ ಆತ್ಮೀಯ ಮಿತ್ರರಾದ ಶ್ರೀ ಜೀ. ಶಂ. ಪರಮಶಿವಯ್ಯ ಅವರಿಗೂ ನಾನೆಷ್ಟು ಋಣಿಯಾಗಿದ್ದರೂ ಸಾಲದು.

ನನ್ನ ಜನಪದ ಸಾಹಿತ್ಯಸಂಗ್ರಹ ಕಾರ್ಯವನ್ನು ಅಪಾರವಾಗಿ ಮೆಚ್ಚಿಕೊಂಡು ಪ್ರೋತ್ಸಾಹದ ನುಡಿಗಳನ್ನಾಡುತ್ತಾ ಬಂದಿರುವ ಅನೇಕ ಹಿರಿಯರನ್ನು ನಾನಿಲ್ಲಿ ಅತ್ಯಂತ ಗೌರವದಿಂದ ವಂದಿಸಬೇಕಾದುದು ನನ್ನ ಆದ್ಯ ಕರ್ತವ್ಯ. ತಮ್ಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ನನ್ನ ಬಗ್ಗೆ ತುಂಬ ಒಳ್ಳೆ ಮಾತುಗಳನ್ನಾಡಿ ಆಶೀರ್ವದಿಸಿರುವ ಆಚಾರ್ಯ ಡಿ. ಎಲ್. ಎನ್. ಅವರಿಗೂ ಸುಪ್ರಸಿದ್ಧ ಕಾದಂಬರಿಕಾರರಾದ ಅಣ್ಣ ಅ.ನ.ಕೃ. ಅವರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಪೂಜ್ಯ ತ. ಸು. ಶಾಮರಾಯರು ಮೊದಲಿನಿಂದಲೂ ನನಗೆ ತಮ್ಮ ಅಮೂಲ್ಯ ಸಲಹೆಗಳಿಂದಲೂ, ಪ್ರೋತ್ಸಾಹದ ನುಡಿಗಳಿಂದಲೂ ಹರಸುತ್ತ ಬಂದಿದ್ದಾರೆ. ಮಾನ್ಯರಾದ ದೇ. ಜವರೇಗೌಡ, ಎಸ್. ವಿ. ಪರಮೇಶ್ವರ ಭಟ್ಟ, ಜಿ. ವರದರಾಜರಾವ್, ಡಾ|| ಪ್ರಭುಶಂಕರ್, ಎಸ್. ನಾರಾಯಣ ಶೆಟ್ಟಿ, ಜಿ. ವೆಂಕಟಯ್ಯ ಮುಂತಾದ ಹಿರಿಯರು ನನ್ನಲ್ಲಿ ಉತ್ಸಾಹವನ್ನು ತುಂಬುತ್ತ ಬಂದಿದ್ದಾರೆ. ಮಾನ್ಯ ಕೆ. ಸಿ. ಚೌಡಪ್ಪರೆಡ್ಡಿಯವರೂ ಬಹಳ ಹಿಂದಿನಿಂದಲೂ ನಮ್ಮ ಉದ್ಯಮಕ್ಕೆ ಬಹು ಬಗೆಯಲ್ಲಿ ಸ್ಫೂರ್ತಿಯನ್ನು

ನೀಡಿದ್ದಾರೆ. ನನ್ನ ಕೋರಿಕೆಯನ್ನು ಮನ್ನಿಸಿ ತಮ್ಮ ಅಮೂಲ್ಯವಾದ ಮುನ್ನುಡಿಯ ಮೂರು ಮಾತುಗಳ ಮೂಲಕ ಉತ್ಸಾಹದಾಯಕ ನುಡಿಗಳನ್ನಾಡಿ ಉತ್ತೇಜಿಸಿದ್ದಾರೆ-ಹಿರಿಯರಾದ ಅ.ನ.ಕೃಷ್ಣರಾಯರು ಹಾಗೂ ಕೆ.ಎಸ್. ನರಸಿಂಹಸ್ವಾಮಿ ಅವರು ಈ ಎಲ್ಲಾ ಮಹನೀಯರಿಗೂ ವಂದನೆಗಳನ್ನು ಅರ್ಪಿಸುತ್ತಾ, ಪ್ರಿಯಮಿತ್ರರಾದ ಪೂ.ಚಂ.ತೇಜಸ್ವಿ, ಸಿ.ಪಿ.ಕೆ., ಕೆ. ಆರ್ ಶಾಮಣ್ಣ ಹಾಗೂ ಇನ್ನಿತರ ಮಿತ್ರರ ಅನೇಕ ಸಲಹೆಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇಲ್ಲಿನ ಭಕ್ತಿಗೀತೆಗಳ ಸಂಗ್ರಹಕ್ಕೆ ನಾನು ಹೋದಹೋದೆಡೆಯಲ್ಲೆಲ್ಲಾ ಹಾಡಿ, ಹಾಡಿಸಿ ಸಹಕಾರ ನೀಡಿದ ನನ್ನ ಗ್ರಾಮಬಂಧುಗಳನ್ನೂ, ಅಕ್ಕತಂಗಿಯರನ್ನೂ—ಮುಖ್ಯವಾಗಿ ಈ ಪುಣ್ಯಕ್ಷೇತ್ರದ ಜನಪದಗೀತ ಸಂಗ್ರಹಕ್ಕೆ ಪ್ರೇರಣೆನೀಡಿದ ನನ್ನ ಚಿಕ್ಕಮ್ಮನವರನ್ನೂ ನಾನು ಇಲ್ಲಿ ಸ್ಮರಿಸಿಕೊಳ್ಳದಿರಲಾರೆ.

ಈ ಸಚಿತ್ರಸಂಗ್ರಹವನ್ನು ಪೂಜ್ಯಪಾದರಾದ **ಶ್ರೀಶ್ರೀಚಂದ್ರಶೇಖರನಾಥಸ್ವಾಮೀಜೀ**, ಬಿ.ಎ. ಇವರಿಗೆ ಅರ್ಪಿಸುತ್ತಿರುವುದು ನನಗೊಂದು ಹೆಮ್ಮೆಯ ವಿಷಯವಾಗಿದೆ. ಶ್ರೀಶ್ರೀಯವರು ಆದಿಚುಂಚನಗಿರಿಯ ಜನಪದ ಸಾಹಿತ್ಯಕ್ಕಾಗಿ ಬಹಳ ಆಸಕ್ತಿಯನ್ನು ತೋರಿ ಅನೇಕ ಬಗೆಯಲ್ಲಿ ಪ್ರೇರಣೆ ನೀಡಿದ್ದಾರೆ. ಅಲ್ಲದೆ ತಾವೇ ಒಂದು ವಿಶಿಷ್ಟ ಸಂಕಲನವನ್ನು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸುವುದರ ಮೂಲಕ ಇಂತಹ ಕ್ಷೇತ್ರಗಳ ಜನಪದ ಸಾಹಿತ್ಯದ ಬಗ್ಗೆ ಎಲ್ಲರ ದೃಷ್ಟಿಯನ್ನು ಸೆಳೆದಿದ್ದಾರೆ. ಅವರ ಅಪಾರ ಸಾಹಿತ್ಯ ಪ್ರೇಮದಿಂದ ಶ್ರೀ ಆದಿಚುಂಚನಗಿರಿಯಲ್ಲಿ ಒಂದು ಗ್ರಂಥ ಪ್ರಕಟಣಾ ಶಾಖೆಯೇ ಆರಂಭವಾಗಿದೆ. ಅಲ್ಲಿನ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆ

ಶ್ರೀಯುವರ ಪಾತ್ರ ಹಿರಿಯದಾಗಿದೆ. ಈ ಸಂಕಲನವನ್ನು ತಮಗೆ ಅರ್ಪಿಸಲು ಅನುಮತಿ ನೀಡಿ ನನ್ನನ್ನು ಹರಸಿದ ಗುರುವರ್ಯರ ಅಭಿಮಾನಕ್ಕೆ ನನ್ನ ಅನಂತ ವಂದನೆಗಳನ್ನು ಸಲ್ಲಿಸಿ ಈ ನಾಲ್ಕು ಮಾತನ್ನು ಮುಗಿಸುತ್ತೇನೆ.

೧೯–೩–೧೯೬೧ —ಕ. ರಾ. ಕೃಷ್ಣಸ್ವಾಮಿ



ಉಪಯುಕ್ತ ಗ್ರಂಥಗಳು ಮತ್ತು ಲೇಖನಗಳು

ದಾಸಪ್ಪ, ಅಮೃತೂರು—"ಶ್ರೀ ಆದಿ ಚುಂಚನಗಿರಿ ಸ್ಥಲಮಹಾತ್ಮ್ಯವು" (ಬೆಂಗಳೂರು : ೧೮೯೩), ಬೆಂಗಳೂರು ಡಿಪೋ ಮುದ್ರಾಕ್ಷರಶಾಲೆ

ಲಕ್ಷ್ಮಣಗೌಡ, ಎನ್.ಟಿ.—"ಶ್ರೀ ಆದಿ ಚುಂಚನಗಿರಿ ಮಹಾಕ್ಷೇತ್ರ" (ತುಮಕೂರು : ೧೯೪೬), ಗುರುಕುಲಾಶ್ರಮ ಪ್ರಕಟಣೆ: ಶ್ರೀ ಆದಿ ಚುಂಚನಗಿರಿ

ಧರ್ಮದರ್ಶಿಗಳು—"ಶ್ರೀ ಆದಿ ಚುಂಚನಗಿರಿ ವಾರ್ಷಿಕ ವರದಿ" (ಮಂಡ್ಯ : ೧೯೫೬), ಆಶ್ರಮದ ಪ್ರಕಟಣೆ: ಶ್ರೀ ಆದಿ ಚುಂಚನಗಿರಿ.

ಪರಮಶಿವಯ್ಯ, ಜೀ.ಶಂ.—"ಭಕ್ತರು ಕಂಡ ಭೈರುವ" ಒಂದು ಲೇಖನ (ಮೈಸೂರು : ೧೯೫೪), ಪುಸ್ತಕ ಪ್ರಪಂಚ: ಸಂಪುಟ-೪ ಸಂಚಿಕೆ ೭

ಪರಮಶಿವಯ್ಯ, ಜೀ.ಶಂ.—"ಇಬ್ಬರಿಗ್ಹೂವ ಮುಡಿಸ್ಯಾನು" ಒಂದುಲೇಖನ (ಬೆಂಗಳೂರು : ೧೯೫೭), ಜನಪ್ರಗತಿ: ಸಂಪುಟ...

ಪರಮಶಿವಯ್ಯ, ಜೀ.ಶಂ.— "ಶ್ರೀ ಆದಿ ಚುಂಚನಗಿರಿ" ಒಂದು ಪ್ರಬಂಧ (ಬೆಂಗಳೂರು : ೧೯೫೫), ಪ್ರಜಾಮತ: ದೀಪಾವಳಿ ರಜತೋತ್ಸವ ಸಂಚಿಕೆ

ಚಂದ್ರಶೇಖರನಾಥಸ್ವಾಮೀಜೀ—"ಶ್ರೀ ಆದಿ ಚುಂಚನಗಿರಿ ಜನಪದ ಗೀತೆಗಳು" (ಮೈಸೂರು: ೧೯೬೯), ಶ್ರೀ ಆದಿಚುಂಚನಗಿರಿ ಗ್ರಂಥಮಾಲೆ: ಪ್ರಥಮ ಕೃತಿ

ಬಸಪ್ಪ, ಜೀರಿಗೆಕಟ್ಟಿ—"ಶ್ರೀ ಆದಿ ಚುಂಚನಗಿರಿ" ಒಂದು ಲೇಖನ
(ಬೆಂಗಳೂರು : ೧೯೫೮),ಮೈಸೂರು ವಾಣಿ: ಸಂಪುಟ–೧ ಸಂಚಿಕೆ ೧೯

Basappa Jeerigekatti—'Adi Chunchanagiri'
one Tourist Article (Bangalore : 1958)
Mysore Information Bulletion : Vo, XXII-No. 4

ಕೃಷ್ಣಸ್ವಾಮಿ, ಕ.ರಾ.—"ಜಾನಪದ ಪ್ರೇಮಗೀತೆಗಳು"
(ಮೈಸೂರು : ೧೯೫೭),ಕಾವ್ಯೋದಯ ಪ್ರಕಾಶನ : ಜನಪದ ಸಾಹಿತ್ಯ ಪ್ರಕಟಣೆ-೩

ಕೃಷ್ಣಸ್ವಾಮಿ, ಕ.ರಾ.—"ಅಂಬಿಗರ ಗಂಗ"
(ಮೈಸೂರು : ೧೯೫೭),ಕಾವ್ಯೋದಯ ಪ್ರಕಾಶನ : ಜನಪದ ಸಾಹಿತ್ಯ ಪ್ರಕಟಣೆ-೩

ಕೃಷ್ಣಸ್ವಾಮಿ, ಕ.ರಾ.—"ಜಾನಪದ ಕಥನ ಗೀತೆಗಳು"
(ಮೈಸೂರು: ೧೯೫೯),ಜನಪದ ಸಾಹಿತ್ಯ ಅಕಾಡೆಮಿ: ಜನಪದ ಸಾಹಿತ್ಯಪ್ರಕಟಣೆ-೭





ದಿವ್ಯಜ್ಞಾನಿಗಳೂ, ಕರ್ಮಯೋಗಿಗಳೂ

ವಿದ್ಯಾಪ್ರಗತಿಗಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿರುವವರೂ ಆದ—

ಪೂಜ್ಯ ಶ್ರೀ ಶ್ರೀ ಚಂದ್ರಶೇಖರನಾಥಸ್ವಾಮೀಜೀ, ಬಿ.ಎ.

ಅವರ ಸನ್ನಿಧಿಗೆ

ಭಕ್ತಿಪೂರ್ವಕವಾಗಿ ಅರ್ಪಿಸಿದ ಹೂಮಾಲೆ.

ಎದ್ದು ನೆನೆದೇವು ಸಿದ್ಧರ ಶಿವಯೋಗಿಯ
ರುದ್ರಾಕ್ಷಿ ವಿಭೂತಿ ಧರಿಸೋನ । ಗುರುವರನ
ನೆನೆಯುತ ಕಲ್ಲ ಹಿಡಿದೇವು ॥

FOLK SONGS

... They are exquisite songs sprung spontaneously from the depths of their hearts to lighten the burden of their day's dutiful task while grinding, pounding, drawing water, lulling the baby in their homes and ploughing, sowing, planting, weeding, harvesting, thrashing in the fields. They are songs inspired while doing work as worship. They depict the "Plain-living and high thinking" of the villager in all its aspects and throw ample light on their toils and turmoils, joys and sorrows, hopes and fears, likes and dislikes, fortunes and misfortunes, successes and defeats and above all, they give a vivid picture of their family ties and relations, social life, customs and manners. Those are special devotional songs sung in praise and honour of their family Goddesses. Their language is as simple, elegant, dignified and beautiful as their subjects.


—CHANDRASEKHARANATH.



'ಚೋಳರು ಕಟ್ಟಿದ ಗುಡಿಯು ಸೋಜಿಗ ನೋಡುವ ಬನ್ನಿ'........

ಶ್ರೀ ಆದಿ ಚುಂಚನಗಿರಿ

ಜನಪದ ಭಕ್ತಿಗೀತೆಗಳು....



ಕಲ್‌ಹೂ[illegible] ನೆ[illegible]ದೇವು ಕಲ್ಯಾ[illegible]ನ
ಅಲ್ಲಿ ಚು[illegible]ನ
ಸೊಲ್ಲು ಸೊಲ್ಲಿಗೆ ನೆನೆದೇವು ||

ಆದಿಚುಂಚನಗಿರಿಯ ಹೋಗಿ ನೋಡುವ ಬನ್ನಿ
ದಿಕ್ಕು ದಿಕ್ಕುಗು ಹುಲಿಮುಖ | ಬೆಟ್ಟಕ್ಕೆ
ಅಪ್ಪ ಭೈರುವನ ದೊರೆತನ ||



ನಾವೆದು ಕಯ್ಯ ಮುಗಿದೇವು ||
ಚೋಳರು ಕಟ್ಟಿದ ಗುಡಿಯ ಸೋಜಿಗ ನೋಡುವ ಬನ್ನಿ ......

ಶ್ರೀ ಆದಿ ಚುಂಚನಗಿರಿ

ಜನಪದ ಭಕ್ತಿಗೀತೆಗಳು....



ಕಲ್‌ಹೂಡಿ ನೆನೆದೇವು ಕಲ್ಯಾಣದಯ್ಯಾನ
ಅಲ್ಲಿ ಚುಂಚನಗಿರಿ ಶಿಖರದ। ಭೈರುವನ
ಸೊಲ್ಲು ಸೊಲ್ಲಿಗೆ ನೆನೆದೇವು ॥

ಆದಿಚುಂಚನಗಿರಿಯ ಹೋಗಿ ನೋಡುವ ಬನ್ನಿ
ದಿಕ್ಕು ದಿಕ್ಕಿಗು ಹುಲಿಮುಖ। ಬೆಟ್ಟಕ್ಕೆ
ಅಪ್ಪ ಭೈರುವನ ದೊರೆತನ ॥

...ಆದಿ ಚುಂಚನಗಿರಿ ಕ್ಷೇತ್ರದ ಮಹಾತ್ಮೆಯನ್ನೂ ಅಲ್ಲಿನ ಆದಿ ಭೈರುವ ಸ್ವಾಮಿಯ ಮಹಿಮಾತಿಶಯವನ್ನು ನಿರೂಪಿಸುವ ಸ್ವಾರಸ್ಯಪೂರ್ಣವಾದ ಗೀತೆಗಳಲ್ಲಿ ಸಂಕಲಿತವಾಗಿವೆ. ಭಕ್ತರ ಮನಸ್ಸಿನ ಮುಗ್ಧತೆ, ಪ್ರಾರ್ಥನೆ, ಆರ್ತತೆ, ಆನಂದ, ಶ್ರದ್ಧೆ, ಕಾತುರವಾದ ಭಾವಕಲ್ಪನೆಗಳು, ಪ್ರಾಸಾನುಪ್ರಾಸದ ಮೋಡಿ, ಲಯದ ಬೆಡಗು, ಹೃದ್ಯವಾದ ಶೈಲಿ–ಇವು ಸಹೃದಯರನ್ನು ಆಕರ್ಷಿಸಿ ಚಿತ್ತವನ್ನು ರಸದ ನೆಲೆಗೆ ಒಯ್ಯುತ್ತವೆ. ಈ ಹಾಡುಗಳು ನಿರಾಡಂಬರವಾದರೂ ಸಹಜ ಸುಂದರ.

...ಈ ಹಾಡುಗಳು ಆದಿ ಚುಂಚನಗಿರಿಯನ್ನೂ ಭೈರುವನನ್ನೂ ಕುರಿತುವಾದರೂ ವಾಸ್ತವವಾಗಿ ಸರ್ವಸಾಧಾರಣವಾದ ಭಕ್ತಿಯನ್ನು ಇವು ಪ್ರತಿನಿಧಿಸುತ್ತವೆ. ವಸ್ತುವಿನಷ್ಟೇ ನಿರೂಪಣೆಯ ಶೈಲಿಯೂ ಪರಿಣಾಮಕಾರಿಯಾಗಿದೆ. ಈ ಗೀತೆಗಳನ್ನು ಓದುವುದೇ ಒಂದು ಸಂತೋಷ......

—ಪುಸ್ತಕ ಪ್ರಪಂಚ



ಎಲ್ಲವನೋ ಶಿವನೆಲ್ಲವನೋ

ಎಲ್ಲವನೋ ಶಿವನೆಲ್ಲವನೋ—ಸ್ವಾಮಿ ಎಲ್ಲವನೋ
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
ಓ

❖

ಅಲ್ಲವ ನಿಲ್ಲವ ಎಲ್ಲೆಲ್ಲೂ ಆವನೋ
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
—ಶಿವನೆಲ್ಲವನೋ ।

❖

ಅನ್ನಧಾನಿ ಸಿದ್ದ ಎಲ್ಲವನೋ
"ಒಳ್ಳೆ ಗಿರಿಮೇಲೆ ಉರಿಗದ್ದಿಗೆಯುವನೆಲ್ಲವನೋ"
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
—ಶಿವನೆಲ್ಲವನೋ ।

❖

ಆರಿಮೇಲೆ ಅಂದಾನಿ ಎಲ್ಲವನೋ
ಒಳ್ಳೆಚುಂಚನಗಿರಿ ಬೈರುವಎಲ್ಲವನೋ
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
—ಶಿವನೆಲ್ಲವನೋ ।

"ಕೋಡುಗಲ್ಲಿನ ಒಡೆಯ ಎಲ್ಲವನೋ
ಖಂಡ್ಗ ವಿಭೂತಿ ಧರಿಸ್ಯೋನೆಲ್ಲವನೋ
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
—ಶಿವನೆಲ್ಲವನೋ ।

ಚೇಣೂರು ಕಂಬದಯ್ಯ ಎಲ್ಲವನೋ
ಮೂರು ಶೂಲದ ಒಡೆಯ ಎಲ್ಲವನೋ
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
—ಶಿವನೆಲ್ಲವನೋ ।

ಒಳ್ಳಿ ನವಿಲುಗರಿ ಶೃಂಗಾರ ಎಲ್ಲವನೋ
ಮುರುಗ ಮಲ್ಲಿಗೆ ಜಾಜಿ ಎಲ್ಲವನೋ
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
—ಶಿವನೆಲ್ಲವನೋ ।

ಮುಕ್ಕಣ್ಣ ಮೂರುತಿ ಎಲ್ಲವನೋ
ಸರ್ಪಭೂಷಣ ಶಿವನೆಲ್ಲವನೋ
ಗುರುವೆಲ್ಲವನೋ—ಸ್ವಾಮಿ ಎಲ್ಲವನೋ
—ಶಿವನೆಲ್ಲವನೋ ।



ವೇಗ ಚುಂಚನಗಿರಿಯ
ಸಿರಿಮಠ ಕಟ್ಟಲೋ....

ತಂದನೋ ತಾನಾನಾ—ತಂದನೋ ತಾನಾನಾ
ತಾನುತಂದು ತನುತಂದಿ—ತಾನುತಂದು ತನುತಂದೆ
....ಸ್ವಾಮಿಗೆ ಶರಣೋ....।

ಕಟ ಕಟ ಕಲ್ಲೂರು—ಬೆಡಗಿನ ಬೆಳ್ಳೂರು
ಹಿಂದೆ ತಾವರೆಕೆರೆ—ಮುಂದೆ ಚುಂಚನಗಿರಿ
ಕಲ್ಲೀಷ ಲಿಂಗಾಗೆ—ಆದಿ ಬೈರೂವಾಗೆ ಕಡಿದರೆ ನಮ್ಮಂಗೆ....
....ಸ್ವಾಮಿಗೆ ಶರಣೋ....।

ಒಡ್ಡ ತೆಂಗಿನಕಾಯ—ಓಟೇಯ ತೆಗೆದಾರು
ಅಂದ ಚೆಂದಕೆ ಮೂರು ಪಟ್ಟೇಯ ಬರೆದಾರು
ಚುಂಚನಗಿರಿ ಮಹಾಸ್ವಾಮಿ ಪಾದಕ್ಕೆ ಬಿದ್ದಾರು
....ಸ್ವಾಮಿಗೆ ಶರಣೋ....।

ಅರಿತಂಗೆ ಮರೆತಂಗೆ ಮತಿಕೊಡೊ ಮಹಾದೇವ
ಸತಿ ಕೊಡೊ ಸಹಾದೇವ—
ವಿದ್ಯಾವ ಕಲಿಸಯ್ಯ ಹಿರಿಯರಕೂಡ
....ಸ್ವಾಮಿಗೆ ಶರಣೋ....।

ಕೋಟಿಲಿಟ್ಟವರಲ್ಲೊ—ಬೇಟೆಯ ತೆಕ್ಕೊಂಡು
ತಂದಾರು ತಾನಾನೀ—ತಲೆಗಳು ಬಿದ್ದಾವು
ಮುಂದಕೆ ಹೋಗುವಾಗ—ನಗಾರಿ ಹೊಡೆದಾವು
....ಸ್ವಾಮಿಗೆ ಶರಣೋ....।

❖

ಬೇಗ ತಿರುಗಿ ಬೇಗ—ಬೇಗ ತಿರುಗಿ ಬೇಗ
ಬೇಗ ಚುಂಚನಗಿರಿ—ಶ್ರೀಪಟ್ಟ ಕಟ್ಯಾರು
ಕಟ್ಟು ಬಾರೋ ಶರಣು ಕಟ್ಟು ಬಾರೋ
....ಸ್ವಾಮಿಗೆ ಶರಣೋ....।

❖

ಸಿದ್ಧ ಬೈರುವನ ಶಿಕರಾದ ಮೇಲಿರುವ—
ಮುದ್ದು ಮುಖದ ಗೊಂಬೆ ಎದ್ದು ಮುಖತೋರಯ್ಯ
....ಸ್ವಾಮಿಗೆ ಶರಣೋ ...।

❖

ಗುಡು ಗುಡು ಗುಟ್ಟಾಲಿ—ಗುಡಿಲೆಂಕೆ ಕಟ್ಟಾಲಿ
ಕಾಳಿಂಗನಾಗಾಲಿ ಕೈತಾಳ ತಾಳಾಲಿ ।
ಜೀರುಂಬೆ ಮದ್ದಾನೆ ಸೆರಗ್ಹೇರಿ ಬರುವಾಗ
....ಸ್ವಾಮಿಗೆ ಶರಣೋ....।

ವಿದ್ಯಾಕೆ ಮೇಲಾದ ಇನಿಯ ಮಾವಿನಹಣ್ಣು
ಮದ್ಯವಕೆ ಮೇಲಾದೊ ಗೊನೆಯ ಬಾಳೆಯಹಣ್ಣು
ಜಗಜಡೆಯ ನುಡಿಯಾಲಿ—ಜಗದ ಪಟ್ಟೊಡಿಯಾಲಿ
....ಸ್ವಾಮಿಗೆ ಶರಣೋ....।

❈

ಅರಮನೆ ಒಳಗೊಬ್ಬ ದೊರೆಮಗ ಕುಂತವ್ನೆ
ಪನ್ನೀರ ಕೊಳದಲ್ಲಿ ತಾನವ ಮಾಡ್ಯವ್ನೆ
ನಲವತ್ತು ಹೊನ್ನಿನ ನಾಮಾವ ಇಟ್ಟವ್ನೆ
....ಸ್ವಾಮಿಗೆ ಶರಣೋ—।

❈

ಅಚ್ಚ ಕಂಬೀದೊಂದು ಹಚ್ಚಡವ ಹೊದ್ದವ್ನೆ
ಪಚ್ಚೆ ಕಂಬೀದೊಂದು ಪಾಗನೆ ಸುತ್ಯವ್ನೆ
ಹೊನ್ನುಬಂಗಾರವನ್ನೊಳಗೆ ತಾನಿಟ್ಟವ್ನೆ
....ಸ್ವಾಮಿಗೆ ಶರಣೋ....।

❈

ಮುದ್ರೆ ಉಂಗುರವನ್ನು ಬೆಳ್ಳೀಗೆ ಧರಿಸ್ಯವ್ನೆ
ಪಟ್ಟಣದ ಮಹಾಸ್ವಾಮಿ ಪಾದಕ್ಕೆ ಬಿದ್ದವ್ನೆ
....ಸ್ವಾಮಿಗೆ ಶರಣೋ....।

ವೇಗ ತಿರುಗಿತು ವೇಗ—ಭೋಗ ತಿರುಗಿತು ಭೋಗ
"ವೇಗ ಚುಂಚನಗಿರಿಯ ಸಿರಿಮಠ ಕಟ್ಟಲೋ...."
....ಸ್ವಾಮಿಗೆ ಶರಣೋ....।

ತಂದನೋ ತಾನಾನಾ—ತಂದನೋ ತಾನಾನಾ
ತಾನುತಂದು ತನುತಂದೆ—ತಾನುತಂದು ತನುತಂದೆ
—ಸ್ವಾಮಿಗೆ ಶರಣೋ....।





ಸುತ್ತಮುತ್ತ ಕೋಲುಕೊಡಿ ಆದಿಬ್ಬೈರುವಗೆ

ಸುತ್ತಮುತ್ತ ಕೋಲುಕೊಡಿ ಸೂಳೆರಾಯಾಗೆ
ಸೂಳೆಕೇರಿ ಮೇಲುಕೋಟೆ ಚೆಲುವರಾಯಾಗೆ ।

❖

ಅರಸರೆಲ್ಲಾ ಕೋಲುಕೊಡಿ ನಾಗಮಂಗಲದ ನರಸಿಂಹಾಗೆ
ಅಂದ ಚಂದದ ಚುಂಚನಗಿರಿ ಆದಿಬೈರುವಾಗೆ ।

❖

ಚಂದದಿಂದ ಕೋಲುಕೊಡಿ ಸಂದಿ ಸಂದೀಲಿ ಕೋಲುಕೊಡಿ
ಅಂದಚೆಂದದ ಮುಖದ ಗೆಣೆಯಂದಿರಾ ।

❖

ಬಿರಸುಬತ್ತಿ ಬಾಲದಂತ ಹದ್ದಿನಕಲ್ಲು ಹನುಮಯ್ಯಾಗೆ
ರಾಗದಿಂದ ಕೋಲುಕೊಡಿ ರಾಣಿ ಪುರುಷಾಗೆ ।

❖

ತೇರುಬೀದಿ ನಂಜನಗೂಡ ನಂಜುಂಡಾಗೆ
ಅಂದಚೆಂದದ ಚುಂಚನಗಿರಿ ಗಂಗಾಧರಗೆ ।

ರಾಗದಿಂದ ಕೋಲುಕೊಡಿ ರಚ್ಚದಿಂದ ಕೋಲುಕೊಡಿ
ಬಟ್ಟು ಮುಖದ ಗೆಣೆಯೆಂದಿರಾ ।

❖

ತೂಗುಮಂಚದ ತುರುವೆಕೆರೆ ಲಾಲಾದೇವಿಗೆ
ಸುತ್ತ ಮುತ್ತ ಕೋಲುಕೊಡಿ ಆದಿಬ್ಬೈರುವಗೆ ।





ಬೈರುವನ ರಥಕ್ಕೋಗಣ

ತೇರಿಗ್ಹೋಗಣ ಬನ್ನಿರೋ
ಸ್ವಾಮಿ ರಥಕ್ಹೋಗಣ ಬನ್ನಿರೋ—
ಬೈರುವನ ರಥಕ್ಹೋಗಣ ಬನ್ನಿರೋ ।

❈

ಹಾಗಲ್ವಾಡ್ಯಂತೆ ಮೇಗಲ್ಬುಗ್ವಂತೆ
ಚುಂಚನಗಿರಿಯಲ್ಲಿ ಪಂಚಕಲ್ಯಾಣಂತೆ ।
ಎದ್ದು ತೋರಿಸೋ ಮುದ್ದು ಬೈರುವನ....॥

❈

ತೇರಿಗ್ಹೋಗಣ ಬನ್ನಿರೋ
ಸ್ವಾಮಿ ರಥಕ್ಹೋಗಣ ಬನ್ನಿರೋ—
ಬೈರುವನ ರಥಕ್ಹೋಗಣ ಬನ್ನಿರೋ....।

❈

ಹಿಂದೆ ಐಗೋಳ್ಮಠ ಮುಂದೆ ಐಗೋಳ್ಮಠ
ಶೃಂಗಾರ ಪೇಟೆ ವತ್ತಿಲ್ಲಿ । ಇರುವಂಥ
ಎದ್ದು ತೋರಿಸೋ ಬೆಳ್ಳೂರ ಮಾದಪ್ಪ....॥

ತೇರಿಗ್ಹೋಗಣ ಬನ್ನಿರೋ
ಸ್ವಾಮಿ ರಥಕ್ಹೋಗಣ ಬನ್ನಿರೋ
ಬೈರುವನ ರಥಕ್ಹೋಗಣ ಬನ್ನಿರೋ....।

❖

ಐಗಳ ಮಠದಲ್ಲಿ ಏನೇನು ಅಡಿಗೆ ಪನಿವಾರ
ನೆನೆಯಕ್ಕಿನೆನೆಗಡಲೆ ಪನಿವಾರ । ನಮ್ಮ ಮುದ್ದು
ಬೈರುವನ ಗುಡಿಯಾಗೆ....॥

❖

ತೇರಿಗ್ಹೋಗಣ ಬನ್ನಿರೋ
ಸ್ವಾಮಿ ರಥಕ್ಹೋಗಣ ಬನ್ನಿರೋ
ಬೈರುವನ ರಥಕ್ಹೋಗಣ ಬನ್ನಿರೋ....।

❖

ತೇರು ಕರಿಯ ತೇರು
ಯಾರ್ಯಾರು ನೂಕಿದ್ರು ಮಲಕೊಲ್ದು । (ಮಲಕದ) ತೇರು
ಮಾವಿನ ಕೆರೆಯೋರು ಮುಟ್ಟಿದ್ರೆ । ಬಲ್ಲಾವಳ್ಳಿ
ಬಾಲಯ್ಯ ಮುಟ್ಟಿದ್ರೆ ನಡೆಯೀತು....।

ತೇರಿಗ್ಹೋಗಣ ಬನ್ನಿರೋ
ಸ್ವಾಮಿ ರಥಕ್ಹೋಗಣ ಬನ್ನಿರೋ
ಬೈರುವನ ರಥಕ್ಹೋಗಣ ಬನ್ನಿರೋ....||





ಭೈರುವ ಚುಂಚನಗಿರಿಯಲ್ಲಿ ನೆಲೆಗೊಂಡ....

ಚುಂಚನಕಟ್ಟೆ*ಯಿಂದ ಎಂಟು ಘಂಟೆಗೆ ಬಂದ
ಪಂಚ ಮುಖದ ಪರದೇಶಿ । ಭೈರುವ
ಚುಂಚನಗಿರಿಯಲ್ಲಿ ನೆಲೆಗೊಂಡ ॥

ಬಡಗಲ ಸೀಮಿಂದ ಆರೆಘಂಟೆಗೆ ಬಂದ
ಮ್ವೋರುಗೆಂಪಿನ ಪರದೇಶಿ । ಭೈರುವ
ಚುಂಚನಗಿರಿಯಲ್ಲಿ ನೆಲೆಗೊಂಡ ॥

ಕಗ್ಗಲ್ಲಾ ಹತ್ಯಾನು ಕಿಗ್ಗಣ್ಣೇಲಿ ನೋಡ್ಯಾನು
ಅಗ್ರಾರಕ್ಕಿಂತ ಇದು ಲೇಸು । ಭೈರುವ
ಅವನು ಕಗ್ಗಲ್ಲಮೇಲೆ ಹಸೆನಿಂದ ॥

ಕರಿಗಲ್ಲ ಹತ್ತಾನು ಕಿರುಗಣ್ಣೇಲಿ ನೋಡ್ಯಾನು
ಹರಿಹರಕ್ಕಿಂತ ಇದು ಲೇಸು । ಭೈರುವ
ತೇರಿಗಣ್ಣೇಲಿ ಹಸೆನಿಂದ ॥

---

*ಈ ಊರು ಕಾವೇರಿ ನದಿಯ ತೀರದಲ್ಲಿರುವ ಪೌರಾಣಿಕ ಸ್ಥಳ. ಇದು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೋಕಿಗೆ ಸೇರಿದೆ.



ಕೆನ್ನೆಮೋದಾರು ಕಡಿದಾರು....

ಅಣ್ಣ ಭೈರಣ್ಣ ಕೆನ್ನೆ ಕಡಿದರ್ಯಾರೆ
ಎಪ್ಪತ್ತು ಗಿಣ್ಣೀನ ಎಳೆಬಿದುರ । ಕಡಿಯಕ್ಹೋಗಿ
ಕೆನ್ನೆ ಮೇದಾರು ಕಡಿದಾರು ॥

❈

ಅಪ್ಪ ಭೈರಪ್ಪ ಕೆಪ್ಪೆ ಕಡಿದವರ್ಯಾರೆ
ಹನ್ನೆರಡು ಗಿಣ್ಣೀನ ಎಳೆಬಿದುರ । ಕಡಿಯಕ್ಹೋಗಿ
ಕೆಪ್ಪೆ ಮೇದಾರು ಕಡಿದಾರು ॥

❈

ಕೆಪ್ಪೆಯ ಕಡಿದ ಕೊರಮಣ್ಣ ಕಡಿದ ಕವೆ
ಲೋಕ ಲೋಕಾಕೆ ಹೆಸರಾದೊ । ಭೈರುವ
ನಿನ್ನ ಕೆನ್ನೆಯ ಕಡಿದದ್ದು....।

❈

ಮೂರುಮಂದಿ ಮೇದರು ಹಾರಾಡಿ ಬಂದರು
ಮುತ್ತಿನ ಕೊಡಲಿ ಹೆಗಲ್ಲೇರಿ । ಗೇದಾರಲ್ಲಿ
ಸ್ವಾಮಿ ಭೈರುವನ ಶಿಖರಾವ ॥

ಬೆಟ್ಟದಮೇಲೆ ಬೇಡಾರು ಇಳಿದವರೆ
ರತ್ನಾದ ಜಾಪೆ ಗುಡಿಲೊಡ್ಡಿ । ಭೈರುವ್ನ
ನೆತ್ತೀಲಿಗೇದವರೆ ಶಿಖರಾವ....।

ಬೆಟ್ಟದ ಸುತ್ತ ಬಿಟ್ಟವರೆ ಮಾಲೇಯ
ಹೊತ್ತೀಲಿ ಬಿಟ್ಟವರೆ ಹೂಮಾಲೆ । ಭೈರುವ್ನ
ನೆತ್ತೀಲಿ ಬಿಟ್ಟವರೆ ಕಿರುಜಡೆಯ ॥

ಹೊಡೆದು ಮಾಡಿದ ವಜ್ರಾದ ಕಲ್ಲಲ್ಲಿ
ಜಡೆಯ ಪಾಳ್ಯನದ ಬಾಗಿಲಲ್ಲಿ । ಭೈರುವ
ಹೊಡೆದು ಮೂಡ್ಯಾನೆ ಕಲ್ಲಲ್ಲಿ....॥

ಗುಂಡ ಒಡೆದಿದ್ದ ಗೋಪುರವ ಒಡೆದಿದ್ದ
ದುಂಡು ಮಲ್ಲಿಗೆಯ ಮುಡಿದಿದ್ದ । (ಮುಡಿದ) ಚುಂಚನ
ಗುಂಡೊಳ್ಳೈದೆಂದು ನೆಳ್ಳೆಗೊಂಡ....॥ [ಗಿರಿಯ

ಅರೆಯು ಒಡೆದೆದ್ದ ಆಕಾಶ ಒಡೆದೆದ್ದ
ಅರುಳು ಮಲ್ಲಿಗೆಯು ಮುಡಿದೆದ್ದ ! (ಮುಡಿದ) ಚುಂಚನ
ಅರೆ ಒಳ್ಳೆದೆಂದು ನೆಲೆಗೊಂಡ....॥ [ಗಿರಿಯ





ಚೋಳೂರಿಗ್ವಾಲೆ ಬರೆದಾನೊ....

ಅರೆಮೇಲಂದಾನಿ ಗಿರಿಪ್ಯಾಲಿ ಭೈರುವ
ಕೋಡುಗಲ್ಲು ಮೇಲೆ ಗವಿಸಿದ್ದ । ಕೂತುಕೊಂಡು
ಜೋಳೂರಿಗ್ವಾಲಿ ಬರೆದಾನೊ....॥

❖

ಜೋಳೂರಿಗ್ವಾಲಿ ಏನೆಂದು ಬರೆದಾನೊ
ಬಿದರೆ ಜೋಳೂರ ದೊರೆಮಗ । ಬರಲಲ್ಲವೆ
ಭೈರುವ್ನ ತೇರು ಹರಿಯಾದು ॥

❖

ಬಿದರೆ ಜೋಳೂರೋರು ಬಂದು ತೇರ ಕಣ್ಣಿಯಹಿಡಿದು
ಮಾವೀನಕೆರೆಯೋರು ಅಲುಗಾದು । ಬಲ್ಲಾವಳ್ಳಿ
ರಾಯರಾಕ್ಯವರೆ ಚವಲಾವ ॥


❖


ಹತ್ತಬಾರದ ಗಿರಿಯು ಹತ್ತೀದ ಭೈರುವ
ಹತ್ತಿ ನೋಡೀದ ಬಿದರೇಯು । ಬೆಟ್ಟದಮೇಲೆ
ಬಾವಿಲಿ ಜೋತಿ ಉರಿಯೋದ ॥

ಏರಬಾರದ ಗಿರಿಯ ಏರೀದ ಭೈರೂವ
ಏರಿ ನೋಡೀದ ಬಿಪರೀಯು । ಬೆಟ್ಟದಮೇಲಿ
ಅನರ್ಥೀರು ಮುಂದಾಗಿ ಬರುವೋದ ||

ಐದು ಘಳಿಗೆಯಾಯ್ತು ಏರೀರಿ ತೇರನು
ಏರಿ ಬಂದಾವೆ ಹಣ್ಣುಡವನ । ಗಂಗನಬಾಳಿ
ಏರಯ್ಯ ಗೊಂಬೆ ಹೊಸತೇರ ||

ಹತ್ತು ಘಳಿಗೆಯಾಯ್ತು ಹತ್ತಯ್ಯ ತೇರನು
ಹೊತ್ತು ಬಂದಾವೆ ಹಣ್ಣುದವನ । ಗಂಗನಬಾಳಿ
ಹತ್ತೀರಿ ಗೊಂಬೆ ಹೊಸತೇರ ||





ಜಗವ ತಲ್ಲಣಿಸಿ ಹರಿದಾವೆ....

ತೇರು ಬೀದೀಲಿ ಏನೇನು ಐಭೋಗ
ಬಾಯಾರಿ ಬಂದೋರಿಗೆ ಎಳೆನೀರು । ಕಬ್ಬಿನತುಂಡು
ತೇರು ಬೀದೀಲಿ ಐಭೋಗ ॥

❖

ವಾಲಗದೇರಿಮೇಲೆ ಓಲಾಡೋನಿವನ್ಯಾರೆ
ಜೋಡು ಕಿನ್ನರಿ ನುಡಿಸೋನು । (ನುಡಿಸೊ) ಭೈರುವ
ವಾಲಾಡಿ ಗಿರಿಯ ಇಳಿದಾನು ॥

❖

ಆರುಸಾವಿರ ಪರಿಸೆ ವಾರಲ್ಲಿ ಪಲ್ಲಕ್ಕಿ
ಮೆಲ್ಲಾಗೆ ಇಳಿಯೊ ಗಿರಿಗಳ । ನಿನ ತೇರು
ಕಲ್ಲೀನಮೇಲೆ ಹರಿದಾವೊ ॥

❖

ಹತ್ತು ಸಾವಿರ ಪರಿಸೆ ವತ್ತಿಲ್ಲಿ ಪಲ್ಲಕ್ಕಿ
ಮೆತ್ತಾಗೆ ಇಳಿಯೊ ಗಿರಿಗಳ । ನಿನತೇರು
ಬೆಳ್ಳೂರ ಮೂಲೆಗೆ ಹರಿದಾವು ॥

ಗಿರಿಯ ಹತ್ತೂತ ಕಿಡಿ ಬಿವರನಿಕ್ಕೂತ
ನಡೆನಡೆಗೆ ಶಂಖ ನುಡಿಸೂತ । ಭೈರುವ
ನಿನ್ನ ಗಿರಿವ್ಯಾಲೆ ದಂಡ ನಡೆಸ್ಯಾರೆ ॥

❁

ಎಲ್ಲಾರ ತೇರು ಮೆಲ್ಲಾಗೆ ಹರಿದಾರೆ
ವಳ್ಯಾಳಿಕಾರ ಭೈರುವ । ನಿನ ತೇರು
ಬೆಟ್ಟದ ಮೂಲೆಗೆ ಹರಿದಾವೆ ॥

❁

ಎಲ್ಲಾರತೇರು ಮೆಲ್ಲಾಗೆ ಹರಿದಾರೆ
ಜಾಣ ಬೈರುವ್ನ ಘನತೇರು । ಆವೂರ
ಬೆಲ್ಲದಂಗಡೀಗೆ ಹರಿದಾವೊ....॥

❁

ಹಗಲಾನೆ ತೇರು ಮುಗಿಲು ಮುಟ್ಟುವ ಕಳಸ
ಜಗದೊಡೆಯ ಕೇಳೊ ಭೈರುವ । ನಿನ ತೇರು
ಜಗವ ತಲ್ಲಣಿಸಿ ಹರಿದಾವೆ....॥

ತೇರು ಹರಿದಾವೆ ತಾಣಕೆ ನಿಂತಾವೆ
ತಾನ ಮಾಡವ್ವೆ ಮಾಳವ್ವ । ಭೈರುವನ
ಶೇರಿಗೆ ಆರತಿಯ ಬೆಳಗ್ಯಾವೆ ॥

ಆರತಿ ಬೆಳಗಿ ಅಂಗಯ್ಯ ನೊಂದಾವು
ಮುಂಗಯ್ಯ ಅವಳ ಸಡಿಲಾವೆ । ಭೈರುವ
ಮುಂದಕೆ ಮೂರ್ಛೆಜ್ಜಿ ದಯಮಾಡೊ ॥

ಮುಂದಕೆ ಮೂರ್ಛೆಜ್ಜಿ ದಯಮಾಡೊ.... ಭೈರುವ
ನಿಮ್ಮ ಮಹಾಲಿಂಗಕೆ ಆರತಿ ಬೆಳಗ್ಯಾವೆ.... ನಾವು
ನಿಮ್ಮ ಮಹಾಲಿಂಗಕೆ ಆರತಿ ಬೆಳಗ್ಯಾವೆ ॥





ಬೆಟ್ಟದಲಿ ಬಿಡಿಕೆ ಬಿಡುತಾರೇ....

ಬೆಟ್ಟದ ಭೈರುವ ಹುಟ್ಟೊಕ್ಕಲು ನಾವ್ ಬಂದೊ
ಕುಟ್ಟಕ್ಕಿಹೇರ ಹೊಡೆಕೊಂಡು । ಭೈರುವ
ಬೆಟ್ಟದಲಿ ಬಿಡಿಕೆ ಬಿಡುತೇವೆ....॥

❖

ಬೀಡಿಕೆ ಬಿಟ್ಟುತಾವ ಬಿಡದಾಲೆ ಮಳೆಹುಯ್ದು
ಗುಡಾರ ನೆನೆದು ಗುಡಿನೆನೆದು । ಭೈರುವ
ಯಾಲಕ್ಕಿ ನೆನೆದು ಗೊನೆಬಿಟ್ಟೊ....॥

❖

ಕಟ್ಟೆಯು ಹಿಂದೆ ಪುಟ್ಟಗುಡಾರ ಹೊದು
ನಮ್ಮಪ್ಪಾನ ಮನೆಗುರುವೀನ । ಗೂಡಾರಕೆ
ಮುತ್ತುತಟ್ಟಸಿ ಬಿಗಿದಾವೆ....॥

❖

ಏರಿಯು ಹಿಂದೆ ಸಾಲ್ಕು ಗುಡಾರ ಹೂದು
ಮಾವನ ಮನೆ ಗುರುವೀನ । ಗೂಡಾರಕೆ
ಹೊ ತಟ್ಟಸಿ ಬಿಗಿದಾವೆ....।

ಬಾಗಿಲು ಭೈರುವಾಗೆ ಬಲ ಒಕ್ಕಲು ನಾವೇಯು
ಸಣ್ಣಕ್ಕಿ ಹೇರ ಹೊಡೆಕೊಂಡು । ಚುಂಚನಗಿರಿಯ
ಕಲ್ಯಾಣೀಲಿ ಮಾಡ್ಸೇವು ಭುಗುತೀಯ....॥

❁

ಅಡ್ಡೇಲಿ ಜೇನುತುಪ್ಪ ಹೆಡಗೇಲಿಹಣ್ಣುಕ್ಕಾಯಿ
ಎಲ್ಲೀಗೆ ಅಣ್ಣಯ್ಯ ನಿಮಪಯಣ । ಬೆಟ್ಟಾದ
ಭೈರುವಗೆ ನಮ್ಮ ಅಭಿಷೇಕ....॥

❁

ಅರಿಯೂದೆ ನಾನು ಗಿರಿಯ ಹತ್ತಿದೆ
ಸುಂಟಾರ ಗಾಳಿ ಬೀಸಿ ಬಳುಕೀದೆ । ಭೈರೂನ್ನ
ಪಾದಾವ ಹಿಡಿದು ಬದುಕೀದೆ....॥

❁

ಸುಂಟಾರ ಗಾಳಿ ಬೀಸಿ ಬಳುಕೀದೆ ಭೈರುವನ
ಪಾದಾವ ಹಿಡಿದು ಬದುಕೀದೆ । ನಾನು
ಪಾದಾವ ಹಿಡಿದು ಬದುಕೀದೆ....॥

ಹಂತಕೆ ಬಂದು ಕಾಯ ಬಡಿಸ್ಯಾನೆ ಅಣ್ಣಯ್ಯ
ಎಳನೀರಿನ ಕೋಡಿ ಹರಿಸ್ಯಾನೆ । ಅಣ್ಣಯ್ಯ
ಎಳನೀರಲಿ ಪಾದ ತೊಳಿಸ್ಯಾನು....॥

❁

ಗಡಿಗೇಲಿ ಹಣ್ಣುತುಪ್ಪ ಕುಡಿಕೇಲಿ ಜೇನುತುಪ್ಪ
ಸ್ವಾಮಿ ಭೈರುವಗೆ ಅಭಿಷೇಕ । ಮಾಡೇವು
ಎಳನೀರಲಿ ಮಯ್ಯ ತೊಳಿಸ್ಯೇವು....॥

❁

ಕಾಯಿ ಹೊಡೆದೇನು ಕಾಯಯ್ಯ ನಮ್ಮಬವರವ
ಕಾಯಿ ತಪ್ಪಿದರೆ ಹಿಡಿಗಾಯಿ ॥ ಹೊಡಿಸೇನು
ಎಳ ನೀರಿನ ಕೋಡಿ ಹರಿಸೇನು....॥

❁

ಕಾಯೊಂದು ಕೈಯಾದೊ ಹಣ್ಣೊಂದು ಮಡಿಲಾದೊ
ಸಂಪಿಗೆ ಹೂವೊಂದು ಸೆರಗಾದೊ । ಭೈರುವ
ನಮ್ಮ ಸಂಪತ್ತುಗಾರ ದಯವಾಗೊ....॥



ಚುಂಚನಗಿರಿಯ ಸ್ವಾಮಿ ಭೈರುವ್ನ ಬನಕಾಗಿ....

ಶಿವರಾತ್ರಿಹಬ್ಬ ಸಿರಿಕಾಣೆ ನಮ್ಮನೆಯಲ್ಲಿ
ಶಿವಶಿವನೆಂಬೊ ಗಿಣಿಬಂದು । ಕೂದಾವಲ್ಲೆ
ನಮ್ಮ ಶಿವನ ಕೆಂಜಡೆಗೆ ಮುರುಗಾವ....॥

❖

ಗಂಗೆಗೌರಿ ಹಬ್ಬ ಮುಂದೆ ದೀವಳಿಗೆ ಹಬ್ಬ
ಎಂದೀಗೆ ಬಂದೀತೆ ಶಿವರಾತ್ರಿ । ಚುಂಚನಗಿರಿಯ
ಮಾಲಿಂಗ ಗೊಸ್ತ್ರವ ಧರಿಸೋದು....॥

❖

ಎಡಗೈಲಿ ಹಣ್ಣುಕಾಯಿ ಗಡಿಗೇಲಿ ಜೇನುತುಪ್ಪ
ಯಾವ ದೇವರಿಗೊ ನನಕಂದ । ಚುಂಚನಗಿರಿಯ
ಸ್ವಾಮಿ ಭೈರುವ್ನ ಬನಕಾಗಿ....॥

❖

ಹಣ್ಣೀನಗೂಡೆ ಕೈಲಿವೊಸರು ಹುಗ್ಗಿ
ಎಲ್ಲೀಗೆ ಕಂದಣ್ಣ ನಿಮುಪಯಣ । ಚುಂಚನಗಿರಿಯ
ಅಪ್ಪ ಭೈರುವ್ನ ಬನಕಾಗಿ....॥

ವಾಲಗದೇರಿಯ ಮೇಲೆ ವಾಲಾಡೊನಿವನ್ಯಾರೆ
ಓಲೆ ಪಂಚಾಂಗ ಹಿಡುಕೊಂಡು । ಭೈರುವ
ವಾಲಾಡಿ ಗಿರಿಯ ಇಳಿದಾನು....॥

❁

ಬೆಟ್ಟನಲಿ ಸಿಂಗನಾಥ ಬೆರಳಲಿ ಗೋರುಕನಾಥ
ಮೇಗಾಲ ಗುಡಿಯಲ್ಲಿ ಹರಕೇಯ । ಕೇಳೋರು
ಅವರೆ ಕಾಣೆ ನಮ್ಮ ಮನೆಸ್ವಾಮಿ....॥

❁

ಅನ್ನದಾನಯ್ಯ ಚಿನ್ನಾವ ಒರಗಿದ
ಇನ್ನುಂಟೆ ಹರನೆ ಬಡತಾನ । ಚುಂಚನಗಿರಿಯ
ಹೊನ್ನು ಗೋಪುರವ ಒರಗಿದೆ....॥

❁

ಚುಂಚನಗಿರಿ ಮೂಲೇಲಿ ನಿಮುಗ್ಯಾರು ನೆಂಟಾರು
ಜೋಳ ಮೂಲಂಗಿ ಜವಸಾವ । ಬೆಳೆಯೊ
ಭೈರುವ ನಮ್ಮ ಮನೆಸ್ವಾಮಿ....॥

ಭೈರುವ ನಮ್ಮ ಮನೆಸ್ವಾಮಿ....ಆದಾರೆ
ಪಾತರೆ ತುಂಬಿ ಕಳುಹೇವೊ । ನಾವು
ಪಾತಾರೆ ತುಂಬಿ ಕಳುಹೇವೊ....॥

❁

ಹಾಸುಗಲ್ಲಿನಮೇಲೆ ಬಾಸಿಂಗ ಬರೆಯೋರೆ
ಎಲ್ಲೆಲ್ಲು ಶಾಸನ ಬರೆಯೋರೆ । (ಬರಿಯೊ) ಭೈರುವಸ್ವಾಮಿ
ಸತ್ಯವಂತರ ಗುಡಿಮುಂದೇ....॥

❁

ಕಾಯುವು ಕಬ್ಬಿಣ ಬೇಯುವು ಇದ್ದಲು
ಗವಿಸಿದ್ದಯ್ನ ಮಠದಲ್ಲಿ । ಮಾಡ್ಯಾರು
ಸ್ವಾಮಿಟ್ಟರ್ರೈನ ತಿರುಶೂಲ....॥

❁

ಸ್ವಾಮಿಟ್ಟರ್ರೈನ ತಿರುಶೂಲ ಏನೆಂಜಲಾದೊ
ಹೂವೆಂಜಲಾದೊ ಹುಳುಮುಟ್ಟಿ । ಗಜಗಂಗೆ
ನೀರೆಂಜಲಾದೊ ಹಿಮುಬಿದ್ದು....॥



ಸ್ವಾಮಿಯ ಮಠವ
ಹೋಗಿ ನೋಡಾನ ಬನ್ನಿ

ಸ್ವಾಮಿಯ ಮಠವ ಹೋಗಿ ನೋಡಾನ ಬನ್ನಿ
ಗೋಧಿ ಹಿಟ್ಟೇನ ನೆಲಗಾರೆ । ಭೈರುವನ
ಹೋಗಿ ನೋಡುವವರಿಗೆ ಐಭೋಗ....॥

❈

ಮೊಗ್ಗೀನಪೂಜೆ ಬಗ್ಗಿನೋಡುವ ಬನ್ನಿ
ಮುದ್ದುಭೈರುವನ ಕದಲೀಯ । ಕಂಬದಮೇಲೆ
ಮೊಗ್ಗು ಕಿಲಕಿಲನೆ ನಗುತಾವೆ....॥

❈

ಹೂವಿನಪೂಜೆ ಹೋಗಿ ನೋಡುವ ಬನ್ನಿ
ಸ್ವಾಮಿ ಭೈರುವನ ಕದಲೀಯ । ಕಂಬದಮೇಲೆ
ಹೂವು ಕಿಲಕಿಲನೆ ನಗುತಾವೆ....॥

❈

ಕಪ್ಪಿನಪೂಜೆ ಒಪ್ಪುಗಾರದಯ್ಯಾಗೆ
ಮೊಗ್ಗೀನಪೂಜೆ ಕಡಿಸೀರೆ । ಭೈರುವನ
ಮೊಗ್ಗೀಗೆ ಆಳ ಕಳಿಸ್ಟೇನು....॥

ಅಪ್ಪ ಭೈರುವ್ನ ಕೆಪ್ಪೆ ತುರುಬಿನಮೇಲಿ
ತಾವು ಮಾಡ್ಯವನೆ ಎಳೆನಾಗ । ಭೈರುವನ
ಅಪರಂಜಿ ಮುಖಕೆ ಬಿಸಿಲೆಂದು....॥

❁

ಅಣ್ಣ ಭೈರುವ್ನ ಕೆನ್ನೆತುರುಬಿನಮೇಲಿ
ತಾವು ಮಾಡ್ಯವನೆ ಎಳೆನಾಗ । ಭೈರುವನ
ಚೆಂದುಳ್ಳಿ ಮುಖಕೆ ಬಿಸಿಲೆಂದು....॥

❁

ಇಪ್ಪತ್ತು ದಿನಕೆ ನೆಪ್ಪಾದೋ ನನ್ನಯ್ಯ
ಅರುಳು ಮಲ್ಲಿಗೆ ಇಸಂಪುರಿ । ವನದಲ್ಲಿ
ನೆಪ್ಪಾದೊ ನನ್ನಯ್ನ ಸಿರಿಪಾದ....॥

❁

ಅರುವತ್ತು ದಿನಕೆ ನೆಲೆಯಾದೊ ನನ್ನಯ್ಯ
ಅರುಳುಮಲ್ಲಿಗೆ ಇಸಂಪುರಿ । ಬನದಲ್ಲಿ
ನೆಲೆಯಾದೊ ನನ್ನಯ್ನ ಸಿರಿಪಾದ....॥

ಸಿರಿಕಾರ ಭೈರುವ್ನ ಸಿರಿನಮ್ಮ ಮನೆಯಲ್ಲಿ
ಶಿವದಾರ ನಮ್ಮ ಕೊರಳಲ್ಲಿ । (ಕೊರಳು) ನಾಲ್ಕುಮೂಲೆ
ವಿಭೂತಿ ನಮ್ಮ ಹಣೆಯಲ್ಲಿ....॥

❈

ಇಂಬೆಹಣ್ಣಿನಂಗೆ ತುಂಬಿತು ಚುಂಚನಗಿರಿ
ಲಿಂಗವಂತ ಬಣಜಿಗರು । (ಬಣಜಿಗರ) ಕೇರೀಲಿ
ಸ್ವಾಮಿ ಭೈರುವ ನೆರೆದಾರು....॥

❈

ತುಂಬೆ ಹೂವಾದೊ ಎಂಬತ್ತು ಎಸಳಾದೊ
ಎಂಬತ್ವರಾಕೆ ಬೆಲೆಯಾದ । ವಸ್ತ್ರಾವ
ಸ್ವಾಮಿ ಭೈರುವ್ಗೆ ಧರಿಸ್ಥೇವು....॥

❈


ಹಳ್ಳಕೊಳ್ಳದ ನೀರು ಬೆಳ್ಳೀಯ ಕೈಚೊಂಬು
ಅಲ್ಲಿ ಭೈರುವ್ಗೆ ಶಿವಪೂಜೆ । ಆಗುವಾಗ
ಬೆಳ್ಳೀಯ ಘಂಟೆ ಥಣಿರೆಂದೊ....॥

ಸ್ವಾಮಿ ಭೈರುವ ಜಡೆಯಲ್ಲಿ ಒದರ್‍ಯಾನೆ
ಮಾಯಸಂದುರದ ಮದುಗೆರೆ । (ಯ) ಏರಿಮೇಲೆ
ಹೂಕಂಡು ಜಡೆಯ ಒದಿರ್‍ಯಾನು....॥

ಹೂಕಂಡು ಜಡೆಯ ಒದಿರ್‍ಯಾನೆ ಭೈರುವ
ನೀರುಕಂಡು ಲಿಂಗ ಬೆಳಿಗ್ಯಾನೆ....॥

ಹೊತ್ತು ಮುಳುಗೀತು ಒಳಗೋಗೊ ಭೈರುವ
ಕತ್ತಲೆಮೋಡ ಸುಳಿಗಾಳಿ । ಬೀಸುವಾಗ
ಸ್ವಾಮಿ ಭೈರುವ ಒಳಗೊಂಡ....॥





ಮನೆಸ್ವಾಮಿ ಭೈರುವ ಬರುತಾನೆ....

ಊರು ಮುಂದಲ ಕೆರೆಗೆ ತಾಳೆ ಹೂವಿನ ತೂಬು
ನೋಡಾನ ಬನ್ನಿ ಜನರೆಲ್ಲಾ । ಭೈರುವ್ನ
ಜೋಡು ಕುದುರೇಯ ಕುಣಿತಾವ....॥

❈

ಸಪ್ಪಟ್ಟುಸರು ಹೊತ್ತಿನಲಿ ನಮ್ಮಟ್ಟೇಗೆ ಬಂದವರ್ಯಾರೆ
ಊಕ್ಕುಡದ ಕುದುರೆ ಊರುಗೆಜ್ಜೆ । ಭೈರುವ
ನಮ್ಮೂರೀಗೆ ಜಯುವ ಕೊಡುಬಂದ ...॥

❈

ಅಕ್ಕಿ ಬಿಕ್ಷಾವ ಕೊಟ್ಟೆನೆಂದಾರು ಒಲ್ಲ
ನೋಡೆ ಅಕ್ಕಯ್ಯ ಬಲುವಿಕೆಯ । ಜೋಗಯ್ಯ
ನಮ್ಮಟ್ಟೇಲಿ ಲಂಗ ಮಾಡುತಾನೆ....॥

❈

ರಾಗಿ ಭಿಕ್ಷಾವ ನೀಡನೆಂದಾರು ಒಲ್ಲ
ನೋಡೆ ತಾಯವ್ವ ಒಲುವಿಕೆಯ । ಜೋಗಯ್ಯ
ನಮ್ಮಾಮದೀಲಿ ಲಂಗ ಮಾಡುತಾನೆ....॥

ಬೆಳ್ಳೀಯು ಕಹಳೆ ಬೀದೀಲಿ ನುಡಿದಾವೆ
ಭೀಮು ಭೈರುವ್ನ ಬಿರುದೀನ । ಬೆಳ್ಳಿಯ ಕಹಳೆ
ನಮ್ಮಾನೆ ಬೀದೀಲಿ ಲಾಲೈಸಿ ನುಡಿದಾವೆ....॥

ವಾರದ ಜೋಗಿ ಊರಿಗೆ ಬಂದವರೆ
ವಾರಾವ ಕೇಳೆ ಹಿರಿಯಕ್ಕ । ಚುಂಚನ ಗಿರಿಯ
ತೇರು ಯಾವಾರ ಹರಿದಾವು....॥

ವಾರ ಆಯಿತ ವಾರ ತೇರು ಮಂಗಳವಾರ
ಭೂತಾನಸೇವೆ ಬುಧವಾರ । ತಂಗ್ಯಮ್ಮ
ಸಾರ್ಯಾವೆ ಭೈರುವ್ನ ಗಿರಿಮ್ಯಾಲೆ....॥

ಜೋಗಯ್ಯ ಬಂದು ಬಾಗಿಲಲ್ಲಿ ನಿಂದವರೆ
ಏನು ಇಡಲೆ ಹಿರಿಯಕ್ಕ । ನಾನು
ಏನು ಇಡಲೆ ಹಿರಿಯಕ್ಕ....॥

ತೊಳಿಸಿದ ಅಕ್ಕಿ ನೀಡು ಒಡೆದ ಬೇಳೆಯ ನೀಡು
ಸಾಂಭ್ರಾಣಿ ಹಾಕಿ ಶರಣೆನ್ನು । ತಾಯಮ್ಮ
ಆಗ ಭೈರುವ ಬರುತಾನೆ....॥

❁

ಎಂಟೆಂಟು ದಿನಕೆ ನೆಂಟ ನಮ್ಮನೆಗೆ ಬಂದ
ಎಂಟೆಮ್ಮೆ ಕರೆದ ನೊರೆಹಾಲ । (ನೊರೆಹಾಲು) ಗಿಣ್ಣಕಾಸಿ
ಬಂಟ ಭೈರುವ್ಗೆ ತಳಿಗ್ಯಾದೋ....॥

❁

ಆರಾರು ದಿನಕೆ ರಾಯ ನಮ್ಮನೆಗೆ ಬಂದ
ಆರೆಮ್ಮೆ ಕರೆದ ನೊರೆ ಹಾಲ । (ನೊರೆಹಾಲು) ಗಿಣ್ಣಕಾಸಿ
ರಾಯ ಭೈರುವ್ಗೆ ತಳಿಗ್ಯಾದೋ....॥

❁

ತಂದೆ ಬಂದವರೆಂದು ಕಾಲಿಗೆ ನೀರುತಂದೆ
ತಂದೇಯ ಹಿಂದೆ ಮನೆಸ್ವಾಮಿ । ಭೈರುವ
ಬಂದಿರುವರೆಂದು ನಾ ತಂದೆ ಎಳನೀರ....॥

ಸಾರಿಸಿದ ಮನೆಯಲ್ಲಿ ಸಾಂಭ್ರಾಣಿ ಗಮ್ಮೆಂದೊ
ಯಾರುಂಡರಮ್ಮ ಮನೆಯಲ್ಲಿ । ಚುಂಚನ ಗಿರಿಯ
ಸ್ವಾಮಿಯುಂಡ ಬಾಳೆ ಎಲೆಯಲ್ಲಿ....॥

❖

ಭಂಗಿ ಬರುತಾನೆ ಬಿಡಿರಮ್ಮ ಬೀದಿಯ
ಭಂಗೀಯ ಸಿದ್ಧ ಭೈರುವ । ಬರುತಾನೆ
ನೀವು ಬಿಡಿರಮ್ಮ ಬೀದಿ ಚೌಕಾವ....॥

❖

ಭೈರುವ ಬರುತಾನೆ ಹಾಸೀರೆ ಗುಡಿಸೀರೆ
ಕ್ಯಾಸಕ್ಕಿಮುತ್ತ ಹರವಿರೆ । ನಮ್ಮಾನೆ
ಮನೆಸ್ವಾಮಿ ಭೈರುವ ಬರುತಾನೆ....॥

❖

ಆಯಿತ್ವಾರ ನಾರಿ ನೆಲವ ತಣ್ಣಗೆ ಮಾಡೆ
ಸಣ್ಣಮಂಚವ ವದರ್ಹಾಸೆ । ಬೆಟ್ಟಾದ
ಚಿನವಾಯಿ ಭೈರುವ ಬರುತಾನೆ....॥

ನಿಲ್ಲು ನಿಲ್ಲದಂತೆ ನಿಲ್ಲಾದೆ ಹೋಯ್ತಾರೆ
ನಿಲ್ಲಾಕೆ ಮಗಳೆ ಅವಸರ । ಈವೂರ
ನಲ್ಲೇರು ಆರತಿಯ ಬೆಳಗ್ಯಾರೆ....॥

ತಾಳು ತಾಳೆಂದಾರೆ ತಾಳಾದೆ ಹೋಯ್ತಾರೆ
ತಾಳಿದೆ ಮಗನೆ ಅವಸರ । ಈವೂರ
ಬಾಲೇರು ಆರತಿಯ ಬೆಳಗ್ಯಾರೆ....॥





ಮಾತುಳ್ಳ ಜೋಗಿ ಉಣಬಾರೋ

೮೦ ಜೆಂಜಲೆಂದು ಅಂಜದೀರು ಜೋಗಯ್ಯ
ಎಂಜಲೀಗೆ ಗಂಜಲವ । ಹಾಕೀವಿ
ನೀನು ಅಂಜಾದೆ ಬಾರೋ ನಡುಮನೆಗೆ....॥

❖

ಜಡೆಯೋನು ಬರುತಾನೆ ಬಿಡಿರಮ್ಮ ಬೀದಿಯ
ಜಡೆಯ ಜಂಗಮ ಭೈರುವ । ಬರುತಾನೆಂದು
ನೀವು ಬಿಡಿರಮ್ಮ ಬೀದಿ ಚೌಕಾವ....॥

❖

ಪಾಯಿಸ ಕಾಸಿವಿನಿ ಪಾತ್ರೇಗೆ ಎರೆದಿವಿನಿ
ಮಾತುಳ್ಳಜೋಗಿ ಉಣಬಾರೊ । ನೀನು
ಮಾತುಳ್ಳಜೋಗಿ ಉಣಬಾರೊ....॥

❖

ಹಟ್ಟೇಗೆ ದನಬಂದೊ ಮುತ್ತಿನುಂಡೆ ಕೊಡಿರಮ್ಮ
ಕಟ್ಟಿದ್ದ ಕರುವ ಬಿಡಿರಮ್ಮ । ಭೈರುವ್ನ
ನೀವದ್ದಿಗೆ ಹಾಲು ಕೊಡಿರಮ್ಮ....॥

ಊರಿಗೆ ದನಬಂದೊ ಹೂವಿನುಂಡೆ ಕೊಡಿರಮ್ಮ
ಕೂಡಿದ್ದ ಕರುವ ಬಿಡಿರಮ್ಮ । ಭೈರುವ್ನ
ನೀವದ್ದಿಗೆ ಮೊಸರ ಕೊಡಿರಮ್ಮ....॥

❁

ಅಪ್ಪ ಭೈರುವ್ಗೆ ಏನೇನು ಎಂಜಾಲು
ಹಾಲೆಂಜಲಾದೊ ಕ[illegible]ುವುಂಡು । ಭೈರುವ್ನ
ತೆಂಗೀನ ಕಾಯೆಂಜಲಾದೊ ಕಪಿಮುಟ್ಟೆ....॥

❁

ಕಾಯೆಂಜಲಾದೊ ಕಪಿಮುಟ್ಟೆ....ಬಾಳೀಯ
ಹಣ್ಣೆಂಜಲಾದೊ ಗಿಣಿಮುಟ್ಟೆ....ಕಲ್ಯಾಣಿ
ನೀರೆಂಜಲಾದೊ ಹಿಮಬಿದ್ದು....ಜಲದ
ಹೂವೆಂಜಲಾದೊ ಹುಳು ಕೊತು....॥

❁

ಮಧ್ಯಾನ್ದ ಮಳೆಹೂದು ಮಜ್ಜನದ ಕೊಳ ತುಂಬಿ
ಮೊಗ್ಗುಮಲ್ಲಿಗೆ ಅರಳ್ಯಾವೆ । ಭೈರುವ್ನ
ಮಧ್ಯಾನ್ದ ಪೂಜೀಗೆ ಹದವಾದೊ....॥

ಸಂಜೆಯು ಮಳೆಹೂದು ಹೂವೀನ ಕೊಳ ತುಂಬಿ
ಹೂವು ಮಲ್ಲಿಗೆ ಅರಳ್ಯಾವೆ । ಭೈರುವ್ನ
ಸಂಜೆ ಪೂಜೀಗೆ ಹದವಾದೊ....॥





ನಮ್ಮಪ್ಪನ ಗುರುವ ನೆನೆದೇವೆ....

ಹೊತ್ತು ಹುಟ್ಟುವಾಗ ಪೊತ್ತರೆ ಪಲ್ಗೇಸುವಾಗ
ನಮ್ಮಟ್ಟೇಯ ಮಂಜು ಹರಿಹರಿದು । ಬರುವಾಗ
ನಮ್ಮಪ್ಪಾನ ಗುರುವ ನೆನೆದೇವೆ....॥

ಸ್ವಾಮ್ಹುಟ್ಟುವಾಗ ಹೂವರಳಿ ಬರುವಾಗ
ನಮ್ಮಟ್ಟೇಯ ಮಂಜು ಹರಿಹರಿದು । ಬರುವಾಗ
ನಮ್ಮ ತಂದೇಯ ಗುರುವ ನೆನೆದೇವೆ....॥

ಭೈರುವ ಬರುವಾಗ ಮನೆಯೆಲ್ಲಾ ಗಮ್ಮೆಂದೊ
ಮುಡಿದು ಬಂದವರೆ ಮುರುಗಾವ । (ಮುರುಗ) ಪಚ್ಚೆ
ಅವರಿಡಿದು ಬರುತಾರೆ ಜವನಾವ....॥ [ತೆನೆಯ

ಕಾವೀಯನುಟ್ಟವ್ರೆ ಕಾಮಾಕ್ಷಿ ಧರಿಸ್ಯವ್ರೆ
ಕೊರಳಿಗೆ ರುದ್ರಾಕ್ಷಿ ಹಾಕ್ಯವ್ರೆ । (ಹಾಕಿ) ಭೈರುವ
ಪಡಿಧಾನಕಂತ ಬರುತವ್ರೆ....॥

ಬುಧವಾರನಾರಿ ಭೂಮಿ ತಣ್ಣಗೆಮಾಡಿ
ಭೂಮಂಡಲ ಹೂಡಿ ಮಡಿಯಾಸೆ । ಚುಂಚನಗಿರಿಯ
ಶರಣಾರು ಬರುತಾರೆ ನೀ ಶರಣೆನ್ನೆ....॥

ಆಯುತ್ವಾರ ನಾರಿ ನೆಲವ ತಣ್ಣಗೆಮಾಡೆ
ಮಣೆಯ ಹಾಕಿ ಮಡಿಯಾಸೆ । ಚುಂಚನಗಿರಿಯ
ಗುರುಗಳು ಬರುತಾರೆ ನೀ ಶರಣೆನ್ನೆ....॥

ಮಲ್ಲಿಗೆ ಹೂವಿನಲ್ಲಿ ವಲ್ಲೀಯ ನೇಯಿಸಿವಿನಿ
ವಲ್ಲನಲ್ಲೆ ನಮ್ಮ ಮನೆಸ್ವಾಮಿ । ಭೈರುವ
ಅವನು ಪಲ್ಲಕ್ಕಿ ಬೇಡಿ ಮುನಿದಾನು....॥

ಸಂಪಿಗೆ ಹೂವಿನಲ್ಲಿ ಪಂಚೀಯ ನೇಯಿಸಿವಿನಿ
ವಲ್ಲನಲ್ಲೆ ನಮ್ಮ ಮನೆಸ್ವಾಮಿ । ಭೈರುವ
ಅವನು ಓನ್ನಾಮ ಬೇಡಿ ಮುನಿದಾನು....॥

ಚಿಕ್ಕಚಿಕ್ಕ ಜೋಗಿ ಚಿಕ್ಕ ಪಾತುರೆಜೋಗಿ
ಚಿಕ್ಕಮೊರದಲ್ಲಿ ಅಕ್ಕಿಪಡಿ । (ಯ) ತಂದಿವಿನಿ
ಸಿಟ್ಟುಮಾಡಬೇಡ ಹಿಡಿಜೋಗಿ....॥

❖

ದೊಡ್ಡದೊಡ್ಡ ಜೋಗಿ ದೊಡ್ಡ ಪಾತುರೆ ಜೋಗಿ
ದೊಡ್ಡಮೊರದಲ್ಲಿ ಅಕ್ಕಿಪಡಿ । (ಯ) ತಂದಿವಿನಿ
ಜಿಡ್ಡುಮಾಡಬೇಡ ಹಿಡಿಜೋಗಿ....॥

❖

ಜೋಗಿಯ ಕೈಲಿ ನಾಗಬೆತ್ತದ ಕೋಲು
ನಾಗಾರಹೆಡೆ ತ್ರಿಶೂಲ । ಜೋಗಯ್ಯ
ಅವನು ನಾಟಕವಾಡಿ ಬರುತಾನೆ....॥

❖

ಜೋಗಯ್ಯ ಬರುವೋದಕಂಡೆ ಬಾಣ ಬಿಡುವುದಕಂಡೆ
ಬಾಳೀಯ ಮರವ ಮರೆಗೊಂಡೆ । ಚುಂಚನಗಿರಿಯ
ನಮ್ಮ ದೇವಾರು ಬರುವ ರಬಸೀಗೆ....॥

ಭೈರುವ ಬರುವೋದಕಂಡೆ ಬಿರಸು ಬಾಣವಕಂಡೆ
ಹಳಸೀನಮುರವ ಮುರೆಗೊಂಡೆ । ಚುಂಚನ ಗಿರಿಯ
ನಮ್ಮ ಮನೆಸ್ವಾಮಿ ಬರುವ ರಬಸೀಗೆ....॥

❖

ಎಣ್ಣೆ ಊದೀವಿ ಸಿದ್ಧರಿಗೆ ನೀಡೀವಿ
ಎಣ್ಣೇಯಮೇಲೆ ಎರೆದುಪ್ಪ । ಎರೆದಿವಿನಿ
ಮುದ್ದು ಭೈರುವ ನೀನು ಉಣ ಬಾರೋ....॥

❖

ಹಾಲುಕಾಸಿವಿನಿ ಹರಿವಾಣ ಬೆಳಗಿವಿನಿ
ಬಾಳೇಯ ಹಣ್ಣುಸುಲಿದಿವಿನಿ । ಭೈರುವ
ಬಾಯಾರಿ ಬರುವ ರಬಸೀಗೆ....॥

❖

ತುಪ್ಪಕಾಸಿವಿನಿ ಬಟ್ಟಾಲ ಬೆಳಗಿವಿನಿ
ಕಿತ್ತಲೆ ಹಣ್ಣು ಸುಲಿದಿವಿನಿ । ಭೈರುವ್ನ
ಕಿತ್ತಾಡಿ ಬರುವ ರಬಸೀಗೆ....॥

ನಮ್ಮಪ್ಪಾನ ಗುರುವೀಗೆ ತುಪ್ಪಬಾಳೆಯಹಣ್ಣು
ಇಪ್ಪತ್ತರಹದ ಶಿವದಾರ। ಚಿನ್ನದಗೆಜ್ಜೆ
ನಮ್ಮಪ್ಪ ಮಾನ್ಯವರ ಗುರುವೀಗೆ....॥





ಭೈರುವ-ಮುದಲಿಂಗನಾಗಿ ಬರುತಾನೆ

ಆಗ ಹಾಕಿದ ಬಾಳೆ ಆಗಾಲೆ ಫಲ ಬಿಟ್ಟೊ
ಗೋರುಕನಾಥಯ್ನ ಗುಡಿ ಮುಂದೆ । (ಮುಂದ) ಬಿಟ್ಟಬಾಳೆ
ಹಗಲು ಪೂಜೀಗೆ ಹದವಾದೋ....॥

❖

ಈಗ ಹಾಕಿದ ಬಾಳೆ ಈಗಾಲೆ ಫಲ ಬಿಟ್ಟೊ
ಚಂದ್ರುನಾಥಯ್ನ ಗುಡಿಮುಂದೆ । (ಮುಂದ) ಬಿಟ್ಟಬಾಳೆ
ಸಂಜೆಪೂಜೀಗೆ ಹದವಾದೋ....॥

❖

ದೊಡ್ಡಗುಡಿಯಲ್ಲಿ ದೊಡ್ಡನದೇನಯ್ಯ
ದೊಡ್ಡನಗಾರಿ ಕೈತಾಳೆ । ಭೈರುವ
ಮದಲಿಂಗನಾಗಿ ಬರುತಾನೆ....॥

❖

ಚುಂಚನಹಳ್ಳಿ ಕನ್ಹೆಣ್ಣು ಮಕ್ಕಾಳು
ಏಲಕ್ಕಿ ಒಳಗೆ ಹಸೆ ಧರಿಸಿ । ಭೈರುನ್ನ
ತೇರಿಗೆ ಆರತಿಯ ಬೆಳಗ್ಯಾರೋ....॥

ಕಲ್ಯಾಣಿಸುತ್ತ ನಿಲ್ಲದಿರು ಭೈರುವ
ನಲ್ಲೆರು ಆಡ್ಯವರೆ ಸಿರಿಗಂಧ। (ದ) ಓಕುಳಿಯು
ಚೆಲ್ಯಾರೊ ರಾಯ ಆರುಗ್ಹೋಗೊ ॥

❖

ಬೆಟ್ಟ ಹತ್ತ್ಯಾತ ಮುತ್ತಿನ ಚೆಂಡಾಡೂತ
ಬೆಟ್ಟನಲಿ ಉಗುರಿ ತಿರುವೂತ। ಭೈರುವ
ನೆತ್ತಿಗೆ ಬಿಟ್ಟವರೆ ಕಿರುಜಡೆಯು ॥

❖

ಗಿರಿಯ ಇಳಿಯೂತ ಹೂವಿನ ಚೆಂಡಾಡೂತ
ಮುತ್ತಿನ ಮುಂಡೆ ಕೊಡುವೂತ। ಭೈರುವ
ನೆತ್ತಿಗೆ ಬಿಟ್ಟವರೆ ಕಿರುಜಡೆಯು ॥

❖

ಗಿರಿಯ ಹತ್ತಾನೆ ಅವ ತಿರುಗಿ ನೋಡ್ಯಾನೆ
ಉಗುರಲ್ಲಿ ವಿಭೂತಿ ಧರಿಸ್ಯಾನೆ। (ಧರಿಸಿದ) ಭೈರುವ
ಗಿರಿಯ ಇಳಿಯೋದೆ ಬೆಳಗಾದೊ ॥

ಬೆಟ್ಟವ ಹತ್ತ್ಯಾನೆ ಅವ ತಿಟ್ಟತ್ತಿ ನೋಡ್ಯಾನೆ
ಕೈಯಲಿ ವಿಭೂತಿ ಧರಿಸ್ಯಾನೆ । (ಧರಿಸಿದ) ಭೈರುವ
ಬೆಟ್ಟ ಇಳಿಯೋದೆ ಬೆಳಗಾದೊ ॥

ಬೆಟ್ಟದ ಸುತ್ತ ಇಟ್ಟಾಡವು ಏನಮ್ಮ
ಸಂಪಿಗೆ ಹೂವು ವನಮಾಲೆ । ಭೈರುವ
ಇಟ್ಟಾಡಿ ಗಿರಿಯ ಇಳಿದಾನು ॥

ಕಲ್ಯಾಣಿ ಸುತ್ತ ಚೆಲ್ಲಾಡವು ಏನಮ್ಮ
ಮಲ್ಲಿಗೆ ಹೂವು ವನಮಾಲೆ । ಭೈರುವ
ಚೆಲ್ಲಾಡಿ ಗಿರಿಯ ಇಳಿದಾನು ॥

ಮಾವಿನ ಮರದಡಿಯ ಮೊಗ್ಗುಕಂಬಳಿನಾಸಿ
ಸೊಗಸು ಮಾಡ್ಯವರೆ ನಮಗುರುವು । ಬೆಟ್ಟಾದ
ಮಾವಿನ ಮೊಗ್ಗು ಸುರಿದಾವು ॥

ಅಪ್ಪನ ಗಿರಿಯು ಇಪ್ಪತ್ತೆ ಗಾವುದ
ಅಪ್ಪ ನಿನ ಗಿರಿಗೆ ಬರಲಾರೆ । (ಬರುವೋರ) ಕೈಲಿ
ತುಪ್ಪಾದ ದೀವಿಗೆ ಕಳಿವೇನು ॥

❖

ಅಣ್ಣಾನ ಗಿರಿಯು ಹನ್ನೆರಡು ಗಾವುದ
ಅಣ್ಣ ನಿನ ಗಿರಿಗೆ ಬರಲಾರೆ । (ಬರುವೋರ) ಕೈಲಿ
ಎಣ್ಣೆ ದೀವಿಗೆ ಕಳಿವೇನು ॥

❖

ಅಪ್ಪನ ಗಿರಿಮೇಲೆ ತುಪ್ಪರಳಿ ಮರಹುಟ್ಟಿ
ಇಪ್ಪತ್ತುನಾಲ್ಕು ಕವಲೊಡೆದು । ಭೈರುವ್ನೆ
ತುಪ್ಪ ಮಾರೋರಿಗೆ ನೆರಳಾದೊ ॥

❖

ತುಪ್ಪದ ದೀವಿಗೆ ಇಪ್ಪತ್ತು ಉರಿದಾವಲ್ಲೆ
ಅಪ್ಪ ಭೈರುವ್ನ ಗಿರಿಯಲ್ಲಿ । ಉರಿದಾವಲ್ಲೆ
ಇಪ್ಪತ್ತೆ ಕಾಲ ಜಗಜ್ಯೋತಿ ॥

ಅಣ್ಣನ ಗಿರಿಮೇಲೆ ಎಣ್ಣೆಯ ಜಾರಿಕೆ
ಬಿತ್ತಾರಿಸೀರೆ ಬಿಗಿದುಡೆ । ಅಕ್ಕಮ್ಮ
ಮುತ್ತಿನ ಕೆಂಜಡೆ ಮಣಿರತುನ ॥

❖

ಚುಂಚನಗಿರಿಮೇಲೆ ಹೊನ್ನಿನ ಎರಡ್ಹಕ್ಕಿ
ಬಣ್ಣ ತುಂಬ್ಯವೆ ಗಿರಿಗೆಲ್ಲಾ । ಗೋಪೀರು
ಹೊನ್ನು ತುಂಬ್ಯವರೆ ಕಣಜಕೆ ॥

❖

ಎಂಟೆಂಟು ದಿನಕೆ ಹೊರಟಾನೆ ಭೈರುವ
ಎಂಟೆಮ್ಮೆ ಕರೆದ ನೊರೆಹಾಲು । ಅಚ್ಚಿನಬೆಲ್ಲ
ಅಲ್ಲಿ ಭೈರುವ್ಗೆ ತಳಿಗಾದೊ ॥

❖

ಆ ಗುಡ್ಡ ಈ ಗುಡ್ಡ ನಡುವೆ ಕತ್ತಲೆಗಿರಿ
ಅಲ್ಲವನೆ ನಮ್ಮ ಮನೆಸ್ವಾಮಿ । ಭೈರುವ
ಹೊತ್ತುಹೊತ್ತಿಗೆ ಬಿಲಪತ್ರ ಶಿವಪೂಜೆ ॥



ಚುಂಚನಗಿರಿಯಲ್ಲಿ ನಮಗ್ಯಾರು ನಂಟಾರು....

ಸಣ್ಣಕ್ಕಿ ಸಾವಿರ ಎಣ್ಣೆಮೂಗಂಡಗ
ಹಣ್ಣೀನ ಗೂಡೆ ಹದಿನಾರು । ಭೈರುವ
ನಾ ಬಡವೆ ಬರುತೀನಿ ದಯಮಾಡು ॥

ಗಂಗೆಯ ದಡದಲ್ಲಿ ಲಿಂಗವ ಪೂಜೆಯಮಾಡಿ
ಜಂಗುಮರ ನಡುವೆ ಬರುವೋನೆ । (ಬರುವೊ) ಭೈರುವ
ನಿನಲಿಂಗ ಹೊಳೆದಾವು ಬಿಸಲೀಗೆ ॥

ಕನಸಿನಲಿ ಕಂಡೆ ಮನಸಿಗೆ ದೊಡ್ಡೋನ
ತೊಳಸೀಯ ಮಾಲೆ ಒಳದಂಡೆ । ಚುಂಚನಗಿರಿ
ಭೈರುವ ಸ್ವಾಮಿ ಬಾನನ್ನ ಸೊಪುನಾಕೆ ॥

ಸಪ್ಪಟ್ಟು ಸರುವತ್ತಿನಲ್ಲಿ ನಮ್ಮಹಟ್ಟೀಲಿ ಹೋಗುವರಾರು
ಉಕ್ಕಿನ ಉರಿಗೆಜ್ಜೆ ಭೈರುವ। ಸ್ವಾಮಿಗಳೆ
ನನ್ನೂರಿಗ್ಯಾಕೆ ಬರಲಿಲ್ಲಾ ॥

ನಿಮ್ಮೂರ್ಗೆ ಬರುವೋಕೆ ಎಲೆಯಿಲ್ಲಾ ಅಡಕೆಯಿಲ್ಲಾ
ಪಟ್ಟೆಜೋತುರ ಮೊದಲಿಲ್ಲ । ಎಲೆಮಗಳೆ
ನಿಮೂರ್ಗೆ ನಾನು ಬರಲಿಲ್ಲಾ....॥

❖

ಮಕ್ಕಳಿಲ್ಲ ನಮ್ಮ ಒಕ್ಕಳಲ್ಲೆ ಚುಂಚನಗಿರಿಯ
ಕಾಲಭೈರುವ ಕೈನೋಡಿ । ಏನೆಂದ
ಪಟ್ಟೆ ಉಡುಮಗಳೆ ಫಲವುಂಟು ॥

❖

ಪಟ್ಟೆ ಉಟ್ಟರೇನು ಮುತ್ತು ಕೊಟ್ಟರೇನು
ಬಿಂದಿಗೆ ಹೊನ್ನ ಮಡಗಿದರೆ । ಏನಯ್ಯ
ಮೆಟ್ಟು ಮಾಸುವ ಮಗನಿಲ್ಲಾ ॥

❖

ಆಧಾರವಾಗೊ ಆದಿಯ ಭೈರುವ
ಆಧಾರವಿಲ್ಲಾದ ಬಡವಾರ । ಮಗಳೀಗೆ
ನೀನು ಆಧಾರವಾಗೊ ಆದಿಭೈರುವ ॥

ಮೂಡಲನಾಡಯ್ಯ ನೋಡಯ್ಯ ಬಡಸ್ತಾನ
ಮೂಡಲಗದ್ದೆ ಮುಗಿಲುದ್ದ । ಬೆಳೆದಾರೆ
ನಾನು ಮಾಡುವೆ ನಿಮ್ಮಗಿರಿಗೆ ಹರಿಸೇವೆ ॥

ಚುಂಚನಗಿರಿ ಹಾದೀಲಿ ತಿರುಚಣದ ಮರಹುಟ್ಟಿ
ಬೆಳ್ಳೂರ್ಗೆ ಬೇರು ಹರಿದಾವೊ । ಗಂಗಾಧರ
ನಿನ್ನ ಕಲ್ಯಾಣಿಗೆ ಮೊಗ್ಗು ಒಲಿದಾವೊ ॥

ಗವಿಸಿದ್ದಯ್ಯ ಇದ್ದಾರೊ ಇಲ್ಲಾವೊ
ಎಚ್ಚರಿಸಿ ನೋಡಿ ಗಿರಿಯಲ್ಲಿ । ಗಂಗಾಧರ
ಕಲ್ಯಾಣಿ ಮೊಗ್ಗಿನಲವರೆ ಮನೆಸ್ವಾಮಿ ॥

ಚುಂಚನಗಿರಿಯಲ್ಲಿ ನಮಗ್ಯಾರೆ ನಂಟಾರು
ಭೈರುವಸ್ವಾಮಿ ಹಿರಿಯಣ್ಣ । ಇದ್ದಾರೆ
ನಾನು ಮತ್ತೊಂದು ಇರುಳು ಇರುವೇನು ॥

ಖಂಡುಗ ಅಕ್ಕಿಪರ ದುಂಡುಮಲ್ಲಿಗೆ ಸರ
ಕಂಡಿರೆ ಭೈರುವನ ಒಲುಮೆಯ । ಚೇಳೂರ
ಬೀದೀಲಿ ಜ್ಯೋತಿ ಉರಿಯೋದ ॥

❖

ನಾಗವಳ್ಳಿಪರ ಅರುಳು ಮಲ್ಲಿಗೆ ಸರ
ಕಂಡಿರೆ ಭೈರುವನ ಒಲುಮೆಯ । ಚೇಳೂರ
ಬೀದೀಲಿ ಜ್ಯೋತಿ ಉರಿಯೋದ ॥

❖


ಒಕ್ಕಳಕ್ಕಿ ಬಂದೊ ತೆಗ್ಗಾಲಿ ಟಗರು ಬಂದೊ
ಪುಟ್ಟಬಾಳೆಯ ಗೊನೆಬಂದೊ । ಭೈರುವನ
ತೇರಿನೊತ್ತಿಗೆ ಮಗಬಂದ ॥

❖

ನಾಗಳಕ್ಕಿ ಬಂದೊ ಕೋಡಿನ ಟಗರು ಬಂದೊ
ರಸಬಾಳೆಯ ಗೊನೆಬಂದೊ । ಭೈರುವನ
ಪೂಜೆ ಹೊತ್ತೀಗೆ ಮಗಬಂದ ॥

ಕಾಸಿನ ಹೊಂಬಾಳೆ ಸಾಕೇನು ಭೈರುವ
ಲೋಕಾದ ಹೊಂಬಾಳೆ ಸುಖಿಬಾಳು ၊ ಜೀರಹಳ್ಳಿ
ತೋಟಗುತ್ತಿಗೆ ಹಿಡಿದಾರು ॥





ಹರಿಸೇವೆ ಚೆಂದ ಗಿರಿಮ್ಯಾಲೆ

ಒತಂಚನಗಿರಿ ಚೆಂದ ಮೇಲಂಗಡಿಚೆಂದ
ನಾಮವು ಚೆಂದ ಹಣೆಯಲ್ಲಿ । ಭೈರುವನ
ಹರಿಸೇವೆ ಚೆಂದ ಗಿರಿವ್ಯಾಲೆ ॥

ಭೈರುವನ ಜಾತ್ರೆಯ ಹೋಗಿ ನೋಡೋಣ ಬನ್ನಿ
ಮೀಯೋರು ಮಡಿಯ ಉಡುವೋರು । ಗಂಗಾಧರನ
ಜಾತ್ರೆಗ್ಹೋಗವರು ಗಡಿಯಿಲ್ಲ ॥

ಸಂಪಿಗೆ ಹೂವಿನಂಗೆ ಚೆಲ್ಲಿಕೊಂಡೊ ನಿನಪರುಷೆ
ಸಂಪತ್ತುಗಾರ ಗಂಗಾಧರ । ನಿನ್ನಪರುಷೆ
ತಂಪೊತ್ತಿ ಗಿರಿಯ ಇಳಿದಾವೊ ॥

ಜಾಲಾದ ಹೂವು ಯಾವಾಗ ಪರಿಮಳ
ಕಾವಾಳಬಿದ್ದು ಬಿಸಿಲೇರಿ । ಭೈರುವನ
ಗಿರಿವ್ಯಾಲೆಲ್ಲಾ ಪರಿಮಳ ॥

ತೇರು ಮಂಗಳವಾರ ಸಾರ್‍ಯರಲ್ಲಿ ಗಿರಿಮ್ಯಾಲೆ
ದೂರಲ ಪರುಷೆ ಬರಲೆಂದು । ಭೈರುವ
ಸಾರಿ ಡಂಗೂರ ಹೊಡೆಸಿದ ॥

❁

ಸಂಪಿಗೆ ಹೂವಿನಂಗೆ ಗುರುತಾದೊ ನಿಮ ಪರುಷೆ
ಮಂಡಾರಿ ದಳವಾಯಿ ಕೆರೆಮುಂದೆ । ಭೈರುವ
ಗುಂಪಾಗಿ ಪರುಷೆ ನಡೆಸ್ಯಾನು ॥

❁

ಮಲ್ಲಿಗೆ ಹೂವಿನಂಗೆ ಚೆಲ್ಲಿಕೊಂಡೊ ನಿಮ ಪರುಷೆ
ಅಲ್ಲಿ ದಳವಾಯಿ ಕೆರೆಮುಂದೆ । ಭೈರುವ
ಚೆಲ್ಲಾಡಿ ಪರುಷೆ ನಡೆಸ್ಯಾನು ॥

❁

ಚುಂಚನಗಿರಿಯೋರು ತುಂಬಂಚಿನ ಸೀರೆಯೋರು
ತುಂಬೆ ಹೂವಿನ ತುರುಬೋರು । (ತುರುಬಿನ) ಹೆಣ್ಣು
ಅವರು ದಂಡು ನೆಡೆದಾರೆ ಭೈರುವ್ಗೆ ॥ (ಮಕ್ಕಳು

ಚುಂಚನಗಿರಿಯೋರು ಸಾಲಂಚಿನ ಸೀರೆಯೋರು
ಜಾಲಾದ ಹೂವಿನ ಜಡೆಯೋರು । (ಜಡೆಯ) ಹೆಣ್ಣು
ಅವರು ದಾಳಿ ಹೋಯಿತಾರೆ ಭೈರುವ್ಗೆ ॥ (ಮಕ್ಕಳು

❖

ಗಂಗೆ ಗೌರಿ ಹಬ್ಬ ಮುಂದೆ ದೀವಳಿಗೆ ಹಬ್ಬ
ಎಂದಿಗೆ ಬಂದೀತೆ ಶಿವರಾತ್ರಿ । ಚುಂಚನಗಿರಿಯ
ಮಾಲಿಂಗಗೊಪ್ತ್ರ ಧರಿಸೋದು ॥

❖

ವರ್ಷಾಕೆ ಬರುವೋದು ಹರುಷದ ಶಿವರಾತ್ರಿಹಬ್ಬ
ಎಂದಿಗೆ ಬಂದೀತೆ ಅಭಿಷೇಕ । ಜೇನುತುಪ್ಪ
ಭೈರುವಗೊಪ್ತ್ರ ಧರಿಸೋದು ॥





ಸುತ್ತಿಬನ್ನಿ ನನ್ನ ಶಿಖರಾನ....

ಸ್ವಾಮಿ ಭೈರುವ ನಿನಗಿರಿ ನೋಡೇನೆಂದು
ವಚೂಪು ಕಲ್ಲುಗಳ ಎಡವೂತ । ನಾಬಂದೆ
ಗಿರಿಯ ತೋರಪ್ಪ ಮಗಳೀಗೆ ॥

❖

ಮುದ್ದು ಗಂಗಾಧರನ ಗದ್ದುಗೆ ನೋಡೇನೆಂದು
ಗುಂಡುಕಲ್ಲುಗಳ ಎಡವೂತ । ನಾಬಂದೆ
ಗುಡಿಯ ತೋರಪ್ಪ ಶಿಶುವಿಗೆ ॥

❖

ಶಾಲು ಜೋತುರ ಕಾಲಿಗೆ ಇಳಿಬಿಟ್ಟು
ಸಾಲುಗಲ್ಲು ಮ್ಯಾಲೆ ಬರುವೋರೆ । (ಬರುವೊ) ಗಂಗಾಧರ
ನಿಮ್ ಪಾದ ಸಾವಿರಕೆ ಬೆಲೆಯಾದೊ ॥

❖

ಪಟ್ಟೆಯ ಜೋತುರ ಬೆಟ್ಟಗೆ ಇಳಿಬಿಟ್ಟು
ಮೆಟ್ಟಿಲು ಕಲ್ಲುಮ್ಯಾಲೆ ಬರುವೋರೆ । (ಬರುವೊ) ಭೈರುವ
ನಿಮ್ಮ ಬೆಟ್ಟು ಸಾವಿರಕೆ ಬೆಲೆಯಾದೊ ॥

ಎಗಚಿಯ ಕಾಯಂಗೆ ಸೊಗಸು ಮುನ್ನೂರು ಜಡೆ
ಸೊಗಸು ಮಾಡ್ಯವರೆ ನಮ ಗುರುವು । ಚುಂಚನಗಿರಿಯಾ
ಎಗಚಿಯ ಮರದ ನೆರಳಾಗೆ ॥

ಅಣ್ಣಾನ ಗಿರಿಮ್ಯಾಲೆ ಇನ್ನೇನು ಬೆಳೆದಾವೆ
ಕಪ್ಪಚ್ಚಿದ ಅಡಿಕೆ ಬಿಳಿಯೆಲೆ । ಚುಂಚನಗಿರಿ ಮ್ಯಾಲೆ
ತುಪ್ಪದ ಪಾಲಾಗಿ ಬೆಳೆದಾವು ॥

ಹೆಸರಿನ ಹೂವಾದೊ ಹೆಸರಿನ ಕಾಯಾದೊ
ಹೆಸರಾದೊ ನಿಮ್ಮ ಗುರುಮಠ । ಭೈರುವ
ಹೊಸ ಮುತ್ತು ನಿಮ್ಮ ಕೊರಳಲ್ಲಿ ॥

ನಮ್ಮಯ್ಯ ಗುರುವಿಗೆ ತುಪ್ಪ ಬಾಳೆಹಣ್ಣು
ಇಪ್ಪತ್ತು ವರಹದ ಶಿವದಾರ । ಚಿನ್ನದ ಗೆಜ್ಜೆ
ನಮ್ಮಪ್ಪ ಮಾನ್ಯವರ ಗುರುವಿಗೆ ॥

ಚುಂಚನಗಿರಿಯಪ್ಪ ಲಂಚಗಾರ ಕಾಣೆ
ಮಂತ್ರಿ ಕಂದಣ್ಣನ ಎತ್ತಿಕೊಂಡು । ಹೋದಾಗ
ಅವನು ಲಂಚ ಕೇಳಿದ ಹಿಡಿಹೊನ್ನ ॥

ಹಿಡಿಹೊನ್ನು ಹಿಡಕೊಂಡು ಗುಡಿಸುತ್ತ ನಾವ್ ಬಂದೊ
ಗುಡಿಯಲಿ ಪೂಜಾರಿ ಇರಲಿಲ್ಲಾ । ಭೈರುವ
ನಾವು ಹಿಡಿಹೊನ್ನು ಇಕ್ಕೇವು ಮಡಿಲೊಡ್ಡೊ ॥

ಕಾಯೊಂದು ಕೈಯಾಯ್ತು ಹೂವೊಂದು ಮಡಿಲಾಯ್ತು
ಸಂಪಿಗೆ ಹೂವೊಂದು ಸೆರಗಾಯ್ತು । ಭೈರುವ
ಸಂಪನ್ನನೆಂದು ಮರೆಬಿದ್ದೊ ॥

ಗಿರಿಹತ್ತಿ ತೊಡೆನೊಂದೊ ವರಬೇಡಿ ಬಾಯ್ನೊಂದೊ
ಸಿರಿಪಾದಕೆ ಎರಗಿ ನಡುನೊಂದೊ । ಭೈರುವ
ಸಿರಿಮುಡಿಯ ಹೂವ ದಯಮಾಡಿ ॥

ಕಾಣಿಕೆ ತಂದಿವ್ನಿ ಕಾಣಮ್ಮ ಭೈರುವನ
ಕಾಣಿಕೆ ಮುಂದೆ ಕರೆಯೊ ಎಮ್ಮ್ರ। ತಂದಿವಿನಿ
ಕಾಣೆ ಗಂಗಾಧರನ ಗುಡಿಯಲ್ಲಿ ॥

❖

ಒಕ್ಕಲು ಬತ್ತೀವಿ ಒಡೆಯ ಬಾಗಿಲು ತೆಗಿಯೊ
ತೊಟ್ಟಿಲು ತತ್ತೀವಿ ತಳುಗಾಕೆ। ಭೈರುವ
ಸಿಸುವ ತತ್ತೀವಿ ಹೆಸರೇಳೊ ॥

❖

ಹೆಸರೇನ ಹೇಳಾಲಿ ಹಸುಳೆ ನಮು ಮಾದನಿಗೆ
ನನ್ನ ಹೆಸರು ನಿಮ್ಮ ಸಿಸುವೀಗೆ....।

❖

ಹಸುವಾಲುಗಾರನ ಹೆಸರು ನಮ್ಮನೆಯಲ್ಲಿ
ಎಸಳು ವಿಭೂತಿ ಧರಿಸೋನ। (ಧರಿಸೊ) ಭೈರುವ್ನ
ಹೆಸರು ನಮ್ಮಾನೆ ಸಿಸುವೀಗೆ ॥

ಬನ್ನ್ನಡುಗಾರನ ಬಲುವೆ ನಮ್ಮ್ಮನೆಯಲ್ಲಿ
ಬೆರಳಲಿ ವಿಭೂತಿ ಧರಿಸೋನ । (ಧರಿಸೊ) ಭೈರುವ್ನ
ಹೆಸರು ನಮ್ಮ್ಮಾನೆ ಸಿಸುವೀಗೆ ॥

❖

ಮಲ್ಲಿಗೆ ಹೂವ ಅಲ್ಲಿಟ್ಟಿ ಇಲ್ಲಿಟ್ಟಿ
ಕಲ್ಲು ವ್ಯಾಲಿಟ್ಟಿ ಕೈಬಿಟ್ಟಿ । ಭೈರುವ್ನ
ಪಾದಕೆ ಇಟ್ಟಿ ಜವನಾವ ॥

❖

ಒಪ್ಪತ್ತಿನ್ಹೊಟ ಚುಚ್ಚು ಬಾಯಿಬೀಗ
ಉಕ್ಕ್ಯೋ ಮರಳಲ್ಲಿ ಬರಲಾರೆ । ಭೈರುವ
ನೀನೊಪ್ಪಿಸಿಕೊಳ್ಳೊ ಹರಕೇಯ ॥

❖

ಒಪ್ಪೀಸಿಕೊಳ್ಳುವುದಕೆ ಚಿಕ್ಕನ್ನ ಮಗಳೀನೆ
ಸುತ್ತಿಬಾರೇ ನಿನ್ನ ಶಿಖರಾವ। (ಶಿಖರಾದ) ಬಾಗಿಲುಮುಂದೆ
ನಾ ಒಪ್ಪಿಸಿಕೊಳ್ಳುತೀನಿ ಹರಕೇಯ ॥

ಬಾಯಿ ಬೀಗದೋರು ಬಾಯಾರಿ ಬಂದವರೆ
ತಾರೋ ಭೈರುವ ಚವರಿಗೆಯ । ಚಿನ್ನಾದ
ದಾರವಾ ತಾರೋ ಸಿವಡೀಗೆ ॥

❖

ಬಾಗಿಲು ಭೈರುವ್ನ ಬೇಡಿಕೊಳ್ಳೆ ನನ ತಂಗಿ
ತೂಗಲ ಘಂಟೆ ತ್ರಿಶೂಲ । ಕೊಟ್ಟೇನು
ಬೇಡಿಕೊಳ್ಳೆ ಗಂಡು ಮಗದೀರ ॥

❖

ಮಲ್ಲಿಗೆ ಹೂವಲಿ ನಲ್ಲೆರು ಐವರು ಕೂಡಿ
ಅಲ್ಲೆ ಪಾರ್ವತಿ ಸುಳಿದಾಳು । (ಸುಳಿದು) ಮಂಡೆಯಮೇಲೆ
ಮಲ್ಲಿಗೆ ಹೂವು ನಗುತಾವೆ ॥

❖

ಮಲ್ಲಿಗೆ ಹೂವು ನಗುತಾವೆ....ತಾಯವ್ವ
ಪಾದಕೆ ಸಾವು ಶರಣೆಂದೊ । ಭೈರುವ
ನಿನ ಪಾದಕೆ ನಾವು ಶರಣೆಂದೊ ॥

ಚುಂಚನಗಿರಿಯ ಹೋಗಿನೋಡೋಣ ಬನ್ನಿ
ಗಿರಿಮ್ಯಾಲೆ ಎರಡು ಹುಲಿಕರಡಿ । ಹುಲ್ಲೆಮರಿ
ನವಿಲು ಸಾರಂಗ ಮೆರೆದಾವೆ ॥

❖

ಹಾಲು ಹರವಿಯ ಕೊಡೊ ಮೇಲೆ ಭಾಗ್ಯವಕೊಡೊ
ಮಕ್ಕಳ ಕೊಡೊ ಮನೆ ತುಂಬ । ಭೈರುವ
ನಿನ್ ಬಾಗಿಲ ರಜವ ಹೊಡೆದೇವು ॥

❖

ತುಪ್ಪದರವೀಯ ಕೊಡೊ ಮೇಲೆ ಸಂತಾನ ಕೊಡೊ
ಪುತ್ರರಕೊಡೊ ಮನೆತುಂಬ । ಭೈರುವ
ನಿನ್ ಹೊಸಲಿಗೊಜ್ಜುರುವ ಬಿಗಿಸೇವು ॥

❖

ಹೊಸಲು ಚಿಕ್ಕದೆಂದು ಕುಸಿದು ಬಾರೋ ಗಂಗಾಧರ
ದೆಸೆವಂತರಾಯ ನಿನ ಮಗ । ಕಂದಯ್ಯ
ಹೊಸಲಿಗೆ ವಜ್ಜುರುವ ಬಿಗಿಸ್ಯಾನು ॥



ನಿನ್ ಗಿರಿಮೇಲೆ ಹಾಲ ಎರೆದೇವು

ಅಪ್ಪ ಭೈರುವಗೆ ತುಪ್ಪಬಾಳೆಯ ಹಣ್ಣು
ಇಪ್ಪತ್ತು ವರಹದ ಶಿವದಾರ । ಚಿನ್ನಾದ ಗೆಜ್ಜೆ
ನಮ್ಮಪ್ಪ ಮಾನ್ಯವರ ಗುರುವಿಗೆ ॥

ಜಾಜಿಯ ಹೂವಿನಲ್ಲಿ ಜೋತುರವ ನೇಯಿಸಿವ್ನಿ
ಒಲ್ಲನಲ್ಲೆ ಸ್ವಾಮಿ ನಮ ಗುರುವು । ಭೈರುವ
ಅವ್ರು ಪಲ್ಲಕ್ಕಿ ಬೇಡಿ ಮುನಿದಾರು ॥

ಕಂಬ ಕಂಬಕೆ ನಿಂಬೆ ಹಣ್ಣಿನಪೂಜೆ
ಚೇಳೂರ ಕಂಬಕೆ ಘನಪೂಜೆ । ಚುಂಚನಗಿರಿಯ
ಗಂಗಾಧರನ ಪೂಜೆ ಶನಿವಾರ ॥

ನೆತ್ತಿಯ ಮನಿಮೇಲೆ ಹೊತ್ತುರಿದು ಬೆಳಗ್ಯಾನೆ
ನಿನಗೊಪ್ಪುವ ಹಣ್ಣು ತರುತೀವಿ ॥

ನಿನಗೊಪ್ಪುವ ಹಣ್ಣು ತರುತೀವಿ–ಭೈರುವ
ನಿನ್ ಬಾಗಿಲ ರಜವ ಹೊಡಿತೀವಿ । ಗಂಗಾಧರನೆ
ನಾವು ತೊಟ್ಟಿಲು ಸೈವಾಗಿ ಬರುತೀವಿ ॥

❖

ನಾವು ತೊಟ್ಟಿಲು ಸೈವಾಗಿ ಬರುವೇವು–ಭೈರುವ
ನಿನ್ ಗಿರಿವ್ಯಾಲೆ ಹಾಲ ಎರೆದೇವು ।

❖

ಹಸಿ ಅಡಕೆಯಂಗೆ ಎಸಳು ಜಾಜಿಯಂಗೆ
ಹಸಿದ ಭೈರುವ ತಬಸಿನ । (ತಬಸಿ) ಕುಂಡ್ರುವಾಗ
ಹಸು ಮಕ್ಕಳ ಗೋಳು ನಿಲುಬಾರ ॥

❖

ಏಳು ಭೈರುವ ಏನ ಬುದ್ಧಿಯ ಕಲಿತೊ
ಎರಡು ವರುಷಾದ ಹಸುಳೆಯ । (ಹಸುಳೆ) ಕಂದನಮೇಲೆ
ತ್ರಿಶೂಲಹೂಡಿ ಮುನಿಸಾಡಿದೆ ॥

ಯಾಸಗಾರ ಭೈರುವ ಯಾತುರಲ್ಲಿ ಉಂಬೋನೆ
ಕಾಶೀಲಿ ಬೆಳೆಯೊ ಕೈಸಾಲೆ। ಚಿನ್ನಾದ
ಪಾತ್ರೇಲಿ ಹಾಲ ಕುಡಿ ಬಂದ ||

❖

ಪಾವು ಚಿನ್ನಕ್ಕೆ ಪಾತರೆನೆ ಎಡೆಯಿಡರು
ಅದಕೆ ನಾಲ್ವರು ಒಡಗೂಡಿ । ಮಾಡಿದರೆ
ನಗದಿರಿ ಹೊಸಲ ಮರೆಯಲ್ಲಿ ||

❖

ಹೊಸಲಾಗೆ ನಗದಿರಿ ಗುರುಜು ಮಾಡಲು ಬೇಡಿ
ಸರುವರಿಗು ತಪ್ಪು ಶರಣೆನ್ನಿ । ಆ ಅಡಿಗೆ
ನಾಲ್ವರು ಉಂಡು ಮಿಗಿಲಾದೊ ||

❖

ಕಲ್ಯಾಣಿ ಎಲ್ಲೊ ನಿನ ಕಾಶಿ ತೇರುತವೆಲ್ಲೊ
ಜಾರುಗಲ್ಲೆಲ್ಲೊ ಜಪವೆಲ್ಲೊ । ಭೈರುವ
ನೀನು ತಾನ ಮಾಡೋದು ಕೊಳವೆಲ್ಲೊ ||

ಕಲ್ಯಾಣಿ ಇಲ್ಲಿ ಕಾಶಿ ತೀರುತವಿಲ್ಲಿ
ಜಾರುಗಲ್ಲಿಲ್ಲಿ ಜಪವಿಲ್ಲಿ । ಹೆಣ್ಣುಮಕ್ಕಳಿರ
ನಾನು ತಾನಮಾಡೋದು ಕೊಳವಿಲ್ಲಿ ॥

❖

ಸಣ್ಣಸಣ್ಣ ನಾವು ಸಣ್ಣ ನೀಲಿಯನಾವು
ಎಷ್ಟೊಂದು ನಾವು ಒಡೆಯ ಭೈರುವಗೆ । ಅವರು
ವ್ಯಾಸ ಕಟ್ಟ್ಯಾರೆ ಹರಿನಾವು ॥

❖

ದೊಡ್ಡದೊಡ್ಡ ನಾವು ದೊಡ್ಡ ನೀಲಿಯ ನಾವು
ಎಷ್ಟೊಂದು ನಾವು ಒಡೆಯ ಭೈರುವಗೆ । ಅವರು
ವ್ಯಾಸ ಕಟ್ಟ್ಯಾರೆ ಹರಿನಾವು ॥

❖

ಚುಂಚನಗಿರಿಯಲ್ಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೆಯು ತೊರ ಗಿಡವಿಲ್ಲ । ಭೈರುವ
ಸೋಸಿ ಬೆಳೆದವನೆ ದವನಾವ ॥

ಗುರುವೆ ನಿನ್ನ ನೆನೆದು ಉರಿಯೊ ಕೆಂಡವ ಆರಿಸಿದೆ
ಎಡಎಡವಿ ಬರುವೊ ಸರ್ಪ (ನ) । ಕಾಳಿಂಗನ
ಹಿಡಿದೆ ಸ್ವಾಮಿ ನಿಮ್ಮ ದಯದಿಂದ ॥

❁


ಸ್ವಾಮಿ ನಿನ್ನ ನೆನೆದು ಹತ್ತೊ ಕೆಂಡವ ಹಿಡಿದೆ
ಮುತ್ತಿಡಿದು ಬರುವೊ ಸರ್ಪ (ನ) । ಕಾಳಿಂಗನ
ಕಂಡೆನು ಸ್ವಾಮಿ ನಿಮ್ಮ ದಯೆದಿಂದ ॥

❁

ಎದ್ದು ಭೈರುವನ ಮಜ್ಜಣದ ಬಾವೀಲಿ
ಭದ್ರೇರು ಭಾಮೇರು ಮುಖತೊಳೆದು । ಬೇಡಿದರಲ್ಲೆ
ಗೆಜ್ಜೆ ಕಾಲೀನ ಮಗದೀರ ॥

❁

ಅಲ್ಲವನೆ ಇಲ್ಲವನೆ ಮಲ್ಲಿಗೆ ಹೂವಲ್ಲವನೆ
ಅಲ್ಲವನೆ ಮನೆಸ್ವಾಮಿ ಭೈರುವ । ಅವನೊಪ್ಪಿ
ಅವನ ಮನವೊಪ್ಪಿ ಬೇಡೂವೆ ಗಂಡು ಮಗದೀರ ॥



ನಗಾರಿ ಬಡಿದಾವೊ
ಅಯ್ಯನ ಗಿರಿಮೇಲೆ....

ನಗಾರಿ ಬಡಿದಾವೊ ಅಯ್ಯನ ಗಿರಿಮೇಲೆ
ನವಿಲು ಕುಣಿದಾವೊ ಗರಿಗೆದರಿ । ಕಮಲವ
ಕೈಯಲಿ ಹಿಡಕೊಂಡು ಗುರುಬರಲು ॥


ಬಾಳೆಯ ಹಣ್ಣು ಕಾಣೆ ಭೈರುವ್ಗೆ ಬಾನಾಕಿ ಸದ್ದು ಕಾಣೆ
ಇಂಬಿಯ ಹಣ್ಣು ಕಾಣೆ । ಚುಂಚನಗಿರಿ
ಭೈರುವ್ಗೆ ತೊಳಸಿಯ ಮಾಲೆ ಕಾಣೆ ॥

ಎಣ್ಣೇಯ ಎರೆದೇನು ತಾವು ಬಿಡೊ ಪೂಜಾರಿ
ದೀವಟಗೆ ಎಣ್ಣೆ ಹೆರೆದೇನು । ಭೈರುವ್ಗೆ
ತಾವು ಬಿಡೊ ನಿನ್ನ ಬಲದಲ್ಲಿ ॥

ಜ್ಯೋತಿ ತೋಳೆ ನೀತಿ ಸೋದನ ಬನ್ನಿ
ಜ್ಯೋತಿಗೆ ಎಣ್ಣೆ ಹೆರೆಯೋಳ । (ಎರೆಯೊ) ಮಾಳವ್ನ
ಮೇಲೆ ನೋಟಕೆ ಶಿವಬಂದ....॥

ಹೈಗುಚ್ಚಿನ ಆರತಿ ತಿರುಕುಚ್ಚಿನ ಆರತಿ
ನೈದಿಲೆ ಸುರುತಾಳೆ ನಲಗ್ಹೂವೆ । ಭೈರುವಗೆ
ರಂಭೇರು ಆರತಿಯ ಬೆಳಿಗ್ಯಾರು ॥





ಹೆಸರಿಗೆ ದೊಡ್ಡದು ಗುಡಿದೂರ



ಹೆಸರಿಗೆ ದೊಡ್ಡದು ಗುಡಿದೂರ

ಒಡೆಯ ಭೈರುವ ಜಡೆಯೆಲ್ಲಿ ಒದರ್ಯಾನು
ಮಾಯುಸಂದುರದ ಮಧುಗಾದ । ಏರಿಯಮೇಲೆ
ಹೂಕಂಡು ಜಡೆಯ ಒದರ್ಯಾನು ॥

ಹೂಕಂಡು ಜಡೆಯ ಒದರ್ಯಾನೆ–ಭೈರುವ
ನೀರು ಕಂಡು ಲಿಂಗ ಬೆಳಿಗ್ಯಾನು । ಭೈರುವ
ತೇರು ಕಂಡು ಮಾಲೆ ಬಿಡುತಾವೆ ॥

ಅಪ್ಪ ಭೈರುವ ತೆಪ್ಪಕೊಂಡಕೆ ಹೋಗುವಾಗ
ಇಪ್ಪತ್ತು ಪಂಜು ಹಿಡಿಕುದುರೆ । ಹಿಡಕೊಂಡು
ಅವರು ತೆಪ್ಪ ಆಡೋದು ಬೆಳಗಾದೊ ॥

ಅಣ್ಣ ಭೈರುವ ಎಣ್ಣೆಕೊಳಕೆ ಹೋಗುವಾಗ
ಹನ್ನೆರಡು ಪಂಜು ಹಿಡಿಕುದುರೆ । ಸಯಿವಾಗಿ
ಅವರು ಎಣ್ಣೆ ಕೊಳಕೆ ಹೋಗೊ ಸಡಗರ ॥

ರಂಗಾಕೆ ಹರೆಬಂದೊ ರಾಯರೇನು ಮಾಡ್ಯಾರೆ
ರನ್ನದೀವಿಗೆ ಬೆಳಕಲ್ಲಿ । ಭೈರುವ
ಲಿಂಗಾಕೆ ಜರಿಯ ಬಿಗಿಸ್ಯಾರು ॥

ಬೇಸಿಗೆ ಬಿಸಿಲ್ಲಲ್ಲಿ ಯಾಕೆ ಬಂದೆ ಭೈರುವ
ನೀ ಬಾಡಿ ನಿನ್ನ ಮುಖ ಬಾಡಿ । ಭೈರುವ
ಮಲ್ಲಿಗ್ಹೂವು ಬಾಡಿ ಸುರಿದಾವು ॥

ಮಲ್ಲಿಗ್ಹೂವು ಬಾಡಿ ಸುರಿದು ಭೈರುವ
ಬಿಳಿಯಾಲೆ ಬಾಡಿ ತರಗಾದೊ ।

ಹೊತ್ತು ಹುಟ್ಟಿತು ಬಿಸಿಲು ಬೆನ್ನೇರಿತು
ಹಸು ಮಕ್ಕಳಾಡಿ ನಡಿಯಾವು । ಭೈರುವ
ಹೆಸರಿಗೆ ದೊಡ್ಡದು ಗುಡಿ ದೂರ ॥

ಕೈಯ ಕಂಕಣದೋಳೆ ಮೈಯ ಭೂಷಣದೋಳೆ
ವೈಯಾರಿಸಣ್ಣ ದನಿಯೋಳೆ । (ದನಿಯ) ಭೈರುವ
ನೀನು ಉಯ್ಯಾಲೆ ಇಳೆಯೊ ದನ ಬಂದೊ ॥

❖

ಸಂಜೆಯಾದರಾಗಲಿ ದನ ಬಂದರೆ ಬರಲಿ
ಹೂವಿಗ್ಹೋದ ಮಗ ಬರಲಿಲ್ಲ ।

❖


ಒಕ್ಕಳ ಜಡೆಯು ಕತ್ತಲಿ ತಬ್ಬಿಕೊಂಡು
ಜೊತ್ತ ಕಿನ್ನೂಡಿ ನುಡಿಸೂತ । ಭೈರುವ
ಚಿತ್ತಾರದ ಮಠಕೆ ನಡೆದಾನು ॥

❖

ನಾಗಾಳೆ ಜಡೆಯು ತೋಳಲಿ ತಬ್ಬಿಕೊಂಡು
ಬಾರಿ ತಂಬೂರಿ ನುಡಿಸೂತ । ಭೈರುವ
ಸುವ್ವಾರದ ಮಠಕೆ ನಡೆದಾನು ॥

ಚುಂಚನಗಿರಿ ಎಂಬೋದು ತುಂಬಿದ ಪಟ್ಟಣವಂತೆ
ತುಂಬ ಕುಂತವರೆ ಶರಣಾರು । ಮಠದ ಅಯ್ಯನೋರು
ಅವರು ಲಿಂಗಕೆ ವಸ್ತ್ರ ಧರಿಸ್ಯಾರು ॥





ಗುಡಿಯ ಒಳಗವನೆ ಭೈರುವ

ಕಡಲೆಯ ಗಿಡಹುಟ್ಟಿ ಕೊಡಲಿಯು ಕಾವಾದೊ
ಕಡದ ಮಾಳಿಗೆ ಎರಡಾದೊ । ಭೈರುವನ
ಕಡೆದ ಬಾಗಲಿಗೆ ಕದವಾದೊ ॥

❖

ಉದ್ದಿನ ಗಿಡಹುಟ್ಟಿ ಗುದ್ದಾಲಿ ಕಾವಾದೊ
ತಿದ್ದೀದ ಎರಡು ಹಲೆಗೆಯಾ । ಭೈರುವನ
ಗುಡಿಯು ಬಾಗಿಲಿಗೆ ಕದವಾದೊ ॥

❖

ಮುದ್ದು ಭೈರುವನ ಮೊಗ್ಗಿನ ತೋಟವಮಾಡಿ
ಮೊಗ್ಗಿನ ಎರಡು ಮಣಿಗಂಬ । ತಕ್ಕೊಂಡು
ಮೊಗ್ಗಿನ ಅಗಣೀಯ ತೆಗೆದಾನು ॥

❖

ಮೂಡಲಾಗಿ ಹುಯ್ಯೋ ಮುತ್ತಿನ ಸಾತಿನಮಳೆಯೆ
ಗುಡಿಯ ಒಳಗವನೆ ಭೈರುವ । ಬೆಟ್ಟದಮೇಲೆ
ನೀ ಜಗ್ಗಿಸಿ ಹುಯ್ಯೋ ಮಳೆರಾಯ ॥

ಭೈರುವ್ನ ಗುಡಿಮುಂದೆ ಜೋಡು ತೆಂಗಿನಮರ
ಜಂಪೆ ಜಂಪೆಗು ಎಳೆನೀರು । ಗಂಗಾಧರನ
ಪೂಜೆ ಹೊತ್ತಿಗೆ ಒಡೆಗಾಯಿ ॥

❖

ಹೊಡೆಗಾಯಿ ಹೊಡೆಸ್ಸೇವು ಹಿಡಿಗಾಯಿ ಹಾಕಿಸ್ಯೇವು
ಎಳನೀರ ಕೋಡಿ ಹರಿಸೇವು । ಗಂಗಾಧರನ
ಗುಡಿಯಲ್ಲಿ ಪೂಜೆ ನಡೆಸೇವು ॥

❖

ಶಿವರಾತ್ರಿ ಎಂಬುದು ನಮ್ಮನೆಯ ಸಡಗರ
ಶಿವ ಶಿವ ಎಂಬ ಗಿಣಿಗಳು । ಕೂದವಲ್ಲೆ
ಶಿವನ ಕೆಂಜಡೆಗೆ ಮರುಗಾವ ॥





ಸ್ವಾಮಿ ಇರುವುದು ಕೈಲಾಸ

ಆದಿ ಚುಂಚನಗಿರಿಯ ಹೋಗಿ ನೋಡೊವ ಬನ್ನಿ
ದಿಕ್ಕುದಿಕ್ಕುಗು ಹುಲಿಮುಖ । ಬೆಟ್ಟಕ್ಕೆ
ಅಪ್ಪ ಭೈರುವನ ದೊರೆತನ ॥

❖

ಆಬೆಟ್ಟ ಈಬೆಟ್ಟ ನಡುವೆ ತಾವರೆ ಕೊಳ
ತಾವಾರೆ ಹೂವ ಕುಯ್ಯ ಬಂದ । ಭೈರುವ
ತಾವೊಳ್ಳೆದೆಂದು ನೆಲೆಗೊಂಡ ॥

❖

ಚುಂಚನಗಿರಿ ಹಾದೀಲಿ ಸಾಲು ತೆಂಗಿನಮರ
ಸುತ್ತ ನೋಡಿದರೆ ಸುರುಹೊನ್ನೆ । ಮರದಡಿಯ
ಭೈರುವ ಸ್ವಾಮಿ ಗುಡಿಕಟ್ಟ....॥

❖

ಬಾಳೆಯ ಎಲೆಮೇಲೆ ಭಗವಂತರ ಮುಗಬಂದ
ಏಳ ತಾಯುವ್ವ ದೊರೆಬಂದ । ಭೈರುವ
ವಿಭೂತಿ ಏರ ಒಡಗೊಂಡು ॥

ಸ್ವಾಮಿಯು ಕೈಲಿ ನಾಗಬೆತ್ತದ ಕೋಲು
ನಾಗಾರ ಜಡೆ ತಲೆತುಂಬ । ಭೈರುವ
ಸ್ವಾಮಿ ಇರುವೋದು ಕೈಲಾಸ ॥

❖

ಹೊನ್ನಾಣೆ ತಾಯಮ್ಮ ಒಳಗೇನೆ ಮಾಡೀಯೆ
ನಾಳೆ ಭೈರುವ್ಗೆ ಆಯಿತ್ವಾರ । ಒಂದೊತ್ತು
ನೀನು ಹಾಲಿಗೆ ಎಪ್ಪು ಕೊಡು ಬಾರೇ ॥

❖

ಊರು ಮುಂದಲ ತೇರಿಗೆ ರಾಮರಬಾಣ
ಬಿಟ್ಟು ನೋಡೋಣ ಬನ್ನಿ ಜನಗಳು । ಭೈರುವ
ನೀರಮೇಲೆ ಕುದುರೆ ಕುಣಿಸೋದ ॥

❖

ಬೀದಿ ಒಳಗೆಲ್ಲಾ ಕುದುರೆ ಕುಣಿಸೂತ
ಉಗುರಲ್ಲಿ ಬುಗುರಿ ತಿರುವೂತ । ಭೈರುವ
ಚುಂಚನಗಿರಿ ನೆಲ್ಲೀಯ ಮರದ ನೆರಳಾಗೆ ॥

ಹಸುವ ಕಟ್ಟಿಲ್ಲಾ ಹಸುಮಕ್ಕಳು ಹುಟ್ಟಿಲ್ಲಾ
ಹೊಸಮನೆ ಬೀಗ ತೆಗೆದಿಲ್ಲಾ । ಭೈರುವ
ಹೊಸಮನೆಗೆ ಬಂದ ಬಗೆಯೇನೊ ॥

ಹಾಲು ಕರೆದಿಲ್ಲಾ ಹರಮಕ್ಕಳು ಎದ್ದಿಲ್ಲಾ
ಅರಮನೆ ಬೀಗ ತೆಗೆದಿಲ್ಲಾ । ಭೈರುವ
ಸಂಜೇಲಿ ಬಂದ ಬಗೆಯೇನೊ ॥

ಬಡತನ ಬಂದರು ಬಡಕಾರ ಇಲ್ಲಾದ
ಹರಕೆ ಶಿವರಾಯನ ಗುಡಿಯದು । ಗಂಗಾಧರ
ಬಡತನ ಹೇಳೊ ಬೆಳಗಾಯ್ತು ॥

ಚುಂಚನಗಿರಿ ಭೈರುವ ಸೂಜಿಗಲ್ಲಿನ ಮೇಲೆ
ನಿಂತು ಕಿನ್ನರಿಯ ನುಡಿಸೋನೆ । ಗಂಗಾಧರ
ನಿನ್ನ ಸೊಲ್ಲಾದವೆಲ್ಲಾ ಅಪರಂಜಿ ॥

ಸ್ವಾಮಿಯ ಕೈಲಿ ನಾಗಬೆತ್ತದ ಕೋಲು
ನಾಗರ ಜಡೆ ತಲೆ ತುಂಬ । ಭೈರುವ
ಸ್ವಾಮಿ ಇಲ್ಲವನೆ ಗಿರಿಯಲ್ಲಿ ॥

ಕೈಲಾಸದಾಗೆ ಕಂಡೀರಿ ನಮ್ಮಯ್ಯನ
ಖಂಡುಗ ಜಡೆ ತಲೆತುಂಬ । ಭೈರುವ
ಸನ್ಯಾಸಿ ನಮ್ಮ ಕುಲಸ್ವಾಮಿ ॥

ಮಲ್ಲಿಗೆ ಹೂವಿನಂಗೆ ನೆನೆಸಿದೆ ಮನೆಸ್ವಾಮಿ
ಬಲ್ಲವರು ಕಾಣೆ ಗಂಗಾಧರ । ನಮಕಂಡು
ಪಲ್ಲಕ್ಕಿ ಬೇಡಿ ಮುನಿದಾರು ॥

ಸಾಲು ಬೆಟ್ಟದಲ್ಲಿರುವ ಲೋಲ ಭೈರುವಸ್ವಾಮಿ
ಜಾಲಾದ ಹೂ ಬಿದಿರಲ್ಲಿ । ಒರಗಿರುವ
ಜಾಣ ನೀನು ಓಲಾಡಿ ದಯಮಾಡೊ ॥

ಎದ್ದು ಬಾರೋ ಭೈರುವ ಗದ್ದುಗೆ ಮೇಲಿಂದ
ಇದ್ದಾರೆ ನೀನು ಶಿವನಾಣೆ । ರಾಜ್ಯವದ
ಹೂವ ತಂದಿವ್ನಿ ಮುಡಿಬಾರೊ ॥

❖

ಕಾವಿ ಹೊದ್ದವ್ನೆ ಕಾಮಾಕ್ಷಿ ಧರಿಸ್ಯವ್ನೆ
ಹಾವು ಸುತ್ಯವ್ನೆ ಕೊರಳಿಗೆ । ಗಂಗಾಧರ
ಚೇಳು ಮುಡಿದವನೆ ಜಡೆಯೊಳಗೆ ॥

❖

ದೂರದ ಊರಿಂದ ನೂರ್ಹೊಂದ ಹೂವು ತಂದೆ
ನಿನಗಾಗಿ ತಂದೆ ಕೆನೆಮೊಸರ । ಭೈರುವ
ಪೂಜೆಗೆ ತಂದೆ ಪಡಿದೂಪ ॥

❖

ಬೈಗಾಯ್ತು ಶಿವನೆ ಜೊತೆಗೆ ಒಬ್ಬರಿಲ್ಲಾ
ಮಾವನಮನೆ ಒಂದಿಲ್ಲಾ । ಭೈರುವ
ಒಂದಿರುಳು ವಾಲಾಡಿ ಬರುತಾನೆ ॥

ಸ್ವಾಮಿ ಭೈರುವ್ನ ಅಂಗಳ ಬಿಟ್ಟು ಹೋಗುವಾಗ
ಉಕ್ಕಿನ ಬಾಣ ಉರಿಬಾಣ । ಉಪ್ಪರಿಗೆ
ಮುಂದೆ ಐಭೋಗ ಸ್ವಾಮಿ ಭೈರುವ್ಗೆ ॥

❖

ಸ್ವಾಮಿ ಗಂಗಾಧರನ ಅರಮನೆ ಬಿಟ್ಟು ಬರುವಾಗ
ತ್ಯಾಗದ ಬಾಣ ಉರಿಬಾಣ । ಉಪ್ಪರಿಗೆ
ಮುಂದೆ ಐಭೋಗ ಸ್ವಾಮಿ ಭೈರುವ್ಗೆ ॥

❖

ದೊಡ್ಡಗುಡಿಯಲ್ಲಿ ದಡ್ಡನ್ನದೇನಮ್ಮ
ದೊಡ್ಡ ನಗಾರಿ ಕೈತಾಳೆ । ಭೈರುವ್ನ
ಕಂಚಿನ ಬಾಗಿಲು ಐಭೋಗ ॥

❖

ಹೆಗ್ಗಲ್ಲ ಹತ್ಯಾನೆ ಕಿಗ್ಗಣ್ಣಾಗೆ ನೋಡ್ಯಾನೆ
ಕಿಗ್ಗಣ್ಣಿಗಿಂತ ಅದು ಮೇಲು । ಭೈರುವ
ಕಿರು ಬಿದರಲಿ ಬಂದು ನೆಲೆಗೊಂಡ ॥

ಅಡ್ಡ ಬೆಟ್ಟದಲ್ಲಿರುವೋನೆ ದೊಡ್ಡೋನೆ ಭೈರುವ
ದಾಸವಾಳದ ಹೂವ ಬಿದಿರಲ್ಲಿ । ಒರಗಿರುವ
ಭಂಟ ನಮ್ಮೂರಿಗೆ ದಯಮಾಡೊ ॥





ಮುತ್ತುಕಂಡ ಗಂಗಾಧರ ಮನಸೋತ

ಗುಡ್ಡದ ಕೆಳಗೆ ಗೊಬ್ಬರವ ಚೆಲ್ಲೋಳೆ
ಜಿಡ್ಡುಮಯ್ಯಿನ ಕುರುಬುತಿ । ಕೊರಳೀಗೆ
ಹಾವ ಸುತ್ಯವರೆ ಹದಿನಾರ ॥

ಕುರುಬುತಿ ಕುರಿಹೋಗಿ ಮುರುಗ ಮಲ್ಲಿಗೆ ಮೇದೊ
ಕುರುಬರ ಮಾಳಿ ಬೈಯ್ದೀರ । ಭೈರುವ
ಗಿಣಿ ಹಿಂಡು ಮೇದೊ ಮುರುಗಾವ ॥

ನಾಗಮಂಗಲದ ಒಡ್ಡಿ ನಾರಿರ ತುರುಒಡ್ಡಿ
ಸೂಳೇಯ ಕೆರೆಯ ಬಯಲ ಒಡ್ಡಿ । ಮೇದಾವಲ್ಲೆ
ಜಾಣ ಭೈರುವ್ನ ಗಿಣಿಹಿಂಡು ॥

ಭಕ್ತ್ರರ ಹಟ್ಟೀಲಿ ಚಿಗಿತ ಮಲ್ಲಿಗೆ ಹೂವೆ
ಭಕ್ತರ ಹೆಣ್ಣೆ ಕುಯ್ಯಿ ಮೊಗ್ಗ । ಮಾಳವ್ನ
ಭಕ್ತಲೆ ತುಂಬ ಬಿಡಿಮುತ್ತ ॥

ನುಗ್ಗೆ ಮರದಡಿಯ ಉಜ್ಜುಕಂಬಳಿ ಹಾಸಿ
ನಿದ್ರೆ ಮಾಡ್ಯವರೆ ನಮ ಗುರುವು । ಬೆಟ್ಟದ
ನುಗ್ಗೇಯ ಮರದ ನೆರಳೀಗೆ ॥

❖

ಅಗಚೆ ಮರದಡಿಯ ಮುಗುಟ ಕಂಬಳಿ ಹಾಸಿ
ಸೊಗಸು ಮಾಡ್ಯವರೆ ನಮುಗುರುವು । ಬೆಟ್ಟದ
ಅಗಚೇಯ ಮರದ ನೆರಳೀಗೆ ॥

❖

ಜಾಜಿ ಮರದಡಿಯ ಜಾಣ ಕಂಬಳಿ ಹಾಸಿ
ಜಾಣ ಭೈರುವ ಪಗಡೇಯ । ಆಡುವಾಗ
ಜಾಜೀಯ ಹೂವು ಸುರಿದಾವು ॥

❖

ಹಂಚಿ ಹುಲ್ಲೇಲಿ ಹೊಂಚಾಡುವ ನಿವನ್ಯಾರೆ
ಕಂಚೀನ ಗುರಾಣಿ ಕೈಯಲ್ಲಿ । ಹಿಡುಕೊಂಡು
ಹೊಂಚಾಡಿ ಹುಲಿಯ ಹೊಡೆದಿಲ್ಲ....॥

ಹುಲಿಯ ಹೊಡೆದಿಲ್ಲ ಹುಲಿಚರ್ಮವೆತ್ತಿಲ್ಲ
ಕರಡೀಯ ಕಣ್ಣ ಕಳಚಿಲ್ಲ । ಗಂಗಾಧರ
ಅವಳೊಂದಿಗೆ ಹುಲ್ಲೆ ಮರಿಯಾದೆ....॥

❖

ಎಲ್ಲಿಗೆ ನಿಂಗಯ್ಯ ಮೆಲ್ಲಗೆ ನಿಮ ಪಯಣ
ಕಲ್ಲೇಲಿ ಬಂಡಿ ಹೊಡಕೊಂಡು । ಲಿಂಗಯ್ಯ
ನೆಲ್ಲೀಯಾ ಮರದ ನೆರಳೀಗೆ....॥

❖

ನೆಲ್ಲೀಯ ಮರವೆಲ್ಲೊ ನೇರಳೆ ತೋಪೆಲ್ಲೊ
ಜಾರುಗಲ್ಲೆಲ್ಲೊ ಜಪವೆಲ್ಲೊ । ಲಿಂಗಯ್ಯ
ಸ್ನಾನಮಾಡುವ ಕೊಳವೆಲ್ಲೊ....॥

❖

ಉಯ್ಯಾಲೆನಾಡವಳು ಉಯ್ಯಾಲೆ ಪಾಡುವಳು
ಒಯ್ಯಾರಿ ಸಣ್ಣ ದನಿಯೋಳು । ಮಾಳಮ್ಮ
ಉಯ್ಯಾಲೆ ಇಳಿದು ಬರುತಾಳೆ ॥

ಕುರಿಯ ಕಾಯಬೇಡಿ ಮರಿಗಳ್ನಲ್ಲ ತರಬೇಡಿ
ಕರಿಯ ಕಂಬಳಿಯ ನೇಯಬೇಡಿ । ಭೈರುವ
ನೀವು ಕುರುಬರ ಮಾಳಿ ತರಬೇಡಿ ॥

❖

ಕುರಿಯ ಕಾಯ್ದೇನು ಮರಿಗ್ಗಲ್ಲ ತಂದೇನು
ಕರಿಯ ಕಂಬಳಿಯ ನೆಯ್ದೇನು । ಪಾರ್ವತಿ
ನಾನು ಕುರುಬರ ಮಾಳಿ ಬಿಡಲಾರೆ ॥

❖

ಕುರುಬತಿ ತರುವುದಕೆ ಕುರಿಯ ತಿಂಗಳುಕಾದ
ಹಂಪೇಲಿ ಹಾಲ ಕರೆದುಂಡ । ಭೈರುವ
ಮೆಚ್ಚಿ ತಂದಾನೆ ಮಾಳವ್ನ ॥

❖

ಮೆಚ್ಚಿ ತಂದಾನೆ ಕುರುಬತಿ ಮಾಳವ್ನ
ಆವಳಾಚೆ ದಿರುಳಲಿ ಇರಿಸ್ಯಾನೆ ।

ತುಪ್ಪದರಬಿಗೆ ಸೋತ ತೆಕ್ಕೆ ತುರುಬಿಗೆ ಸೋತ
ತುಪ್ಪ ಮಾರುವ ಕುರುಬುತಿ । ಕೊರಳಲ್ಲಿ
ಮುತ್ತು ಕಂಡ ಗಂಗಾಧರ ಮನಸೋತ ॥

❖

ಹಾಲು ಹರವಿಗು ಸೋತ ಜೋಲು ತುರುಬಿಗು ಸೋತ
ಹಾಲು ಮಾರುವ ಕುರುಬುತಿ । ಕೊರಳಲ್ಲಿ
ಮಣಿಯ ದಂಡೆಗೆ ಮನಸೋತ ॥

❖

ಕೆಂಪೆಯ ತರಲ್ಹೋಗಿ ಸಂಪಿಗೆ ತಿರುಗಿದ
ಕೆಂಪೆಮಾಳಮ್ಮ ತರಲ್ಹೋಗಿ । ಗಂಗಾಧರ
ಸಂಪಿಗೆ ಮರವ ಒರಗವನೆ ॥

❖

ಆಕೆಯ ತರಲ್ಹೋಗಿ ಲೋಕವ ತಿರುಗಿದ
ಆಕೆ ಮಾಳಮ್ಮ ತರಲ್ಹೋಗಿ । ಗಂಗಾಧರ
ಸಿರಿಧೂಪದ ಮರವ ಒರಗಿದ ॥

ರಂಬೆಯ ತರಲ್ಹೋಗಿ ಭೂಮಂಡಲ ತಿರುಗಿದ
ರಂಬೆ ಮಾಳವ್ನ ತರಲ್ಹೋಗಿ । ಗಂಗಾಧರ
ಶ್ರೀಗಂಧದ ಮರವ ಒರಗಿದ ॥

❁

ಸರಸ ಆಡೇನು ಹರಿಷಣ ಬೇಡೇನು
ಸರಸದಲಿ ಕುರುಬುತಿ । ಮಾಳವ್ನ
ಗೆದ್ದು ತಂದವನೆ ಭೈರುವ ॥

❁

ಅಚ್ಚ ಕುರುಬುರ ಮಗಳ ಮೆಚ್ಚಿ ತಂದನಲ್ಲಾ
ಕುರಿಯ ಕಾಯುವ ಕುರುಬುತಿಯ । ಮಾಳವ್ನ
ಅವನು ಮೆಚ್ಚಿ ತಂದವನೆ ಭೈರುವ ॥

❁

ಮಾಳಿಗೆ ಎರಡಾದೊ ಮಂಚಾವೆ ಎರಡಾದೊ
ಮದ್ದಾನೆಯಂಥ ಮಹಾರಾಯ । ಭೈರುವ
ಕುಸುಮಾಲೆ ಮಾಳವ್ನ ತಂದು ಹಗೆಯಾದ ॥

ಅರಿಷಣದಂಗೆ ಒಡೆಯೊ ಕುರುಬುತಿಯು
ಸರಸಾಕೆ ತಂದುಕೊಂಡ । ಭೈರುವ
ಕೊರಬುತಿ ಮಾಳಮ್ನ ತಂದು ಹಗೆಯಾದ ॥

ಸೀಗೆ ಮರದಡಿಯು ಸಿರಿಗಂಧದ ಕಲ್ಲೊಳ್ಳು
ತುಂಬಿ ರಾಜಣವ ತೊಳಿಸೋಳಿ । ಮಾಳವ್ವ
ನೀನ್ಯಾರ ರಾಯರ ಅಡಿಗ್ಯೋಳಿ ॥

ಯಾವ ರಾಯರಿಗೆಂದ್ರೆ ನಾ ಏನು ಹೇಳಾಲಿ
ಸಾವಿರ್ಹೊನ್ನಿನ ಗರುಡಾನ । ಮೇಲೆ ಬರುವ್ರೊ
ಸ್ವಾಮಿ ಭೈರುವಗೆ ಎಡೆಯಿಟ್ಟಿ ॥

ಕುರುಬತಿ ಅಟ್ಟಡಿಗೆ ಕುರುಜಡ್ಡು ಮರಿಜಡ್ಡು
ಸೀರೆಯು ಜಡ್ಡು ಸಿರಿಗಂಧ । ಮಾಳವ್ವ
ಮಕ್ಕಳ ತಾಯಿ ಹಂಗೆ ಮಾಯಿ ॥

ಮಕ್ಕಳ ತಾಯಿ ಮಾಳವ್ವ ಮಾಡಿದ ಅಡಿಗೆ
ತೌರ ಬೀದಿಗೆ ಘಮ್ಮೆಂದೊ । ಅಡಿಗೇಯ
ಬೆಲ್ಲದ ಪಾನಕವೆಂದು ಧರಿಸ್ಯಾನೆ ॥

❖

ಪಾರ್ವತಿ ಮಾಡಿದ ಅಡಿಗೆ ಬೇವಿನ ವಿಷವಾದೊ
ಕುರುಬತಿ ಮಾಳಿ ಅಟ್ಟಡಿಗೆ। ಭೈರುವಗೆ
ಹೆಚ್ಚಾಳ ಉಂಟು ಮನಸೀಗೆ ॥

❖

ಅಡ್ಡ ಗುಡ್ಡವ ತಿರುಗಿ ಪುಟ್ಟಪಾದ ನೊಂದಾವು
ಕಾಲಿಗೆ ನೀರು ಕೊಡೆ ಪಾರ್ವತಿ ?

❖

ನಾನ್ ಕಾಲಿಗೆ ನೀರು ಕೊಡುವ್ರೋಕೆ
ನಾನ್ಯಾರೋ ನೀವ್ಯಾರೊ । ಭೈರುವ
ತೂಗೊ ಮಂಚಕೆ ಸುರಿಸಿ ಬನ್ನಿ ॥

ಚಿಕ್ಕ ಮಂಚ ನಿನಗಿರಲಿ ಪಟ್ಟೆಮಂಚ ನನಗಿರಲಿ
ಪಟ್ಟಣ ಬಿಟ್ಟು ಪರದೇಶ । ಹೋಗುತೀನಿ
ಒಟ್ಟಿಗೆ ರಾಣೀರ ಕರೆಕೇಳಿ ॥

ಬಂದರೆ ಭೈರುವ ನಿಂದಾನೆ ಕಂಬದ ಕೇರೀಲಿ
ಪಾದ್ರಿಮರದ ನೆರಳಾಗೆ । ನಿಂತುಕೊಂಡು
ಮಾಳವ್ಗೆ ಓಲೆ ಬರೆದಾನು ॥

ಕುರುಬರ ಹೆಣ್ಣಿಗೆ ತುರುಬ್ಹೂವು ನಡಿಗ್ಯಾವೆ
ಕಿರುಬಿದಿರೆಲೆ ಚೆಂದ-ಅದರ ಗಳ ಚೆಂದ । ಹೆಣ್ಣಿನ
ತುರುಬೀನ ಭಾವ ಬಲು ಚೆಂದ ॥





ಮಠದಲ್ಲಿ ಮುಸುಕಿಟ್ಟು ಹೊರಟಾರು

ತಂಗಾಳಿ ಬೀಸುವಾಗ ಸಿಂಗರದ ವನದಲ್ಲಿ
ಗಂಗಾಧರ ನಿದ್ದೆಗೈದವರೆ । ಕನಸಿನಲಿ
ಗಂಗೆ ಮಾಳವ್ನ ಕಂಡಾರು ॥

❖

ಕನಸ ಕಂಡೆದ್ದು ಶಿವ ಮನಸಿನಲಿ ಯೋಚಿಸಿ
ಹುಚ್ಚೇನೊ ನನಗೆ ಮರುಳೇನೊ । ಎನ್ನುತ್ತ
ಮಠದಲ್ಲಿ ಮುಸುಕಿಟ್ಟು ಹೊರಟಾರು ॥

❖

ಬೆಟ್ಟದ ಗಂಗಾಧರ ಬಿಟ್ಟನಲ್ಲೆ ಬುಗುರಿಯ
ಮೆಟ್ಟಲುಗಲ್ಲು ತಗುಲಿ ಗುರಿತಗುಲಿ । ಮಾಳವ್ನ
ಕೊಪ್ಪ ತಗುಲಿ ಕೀಲು ಸಡಿಲ್ಯಾವೊ ॥

❖

ಎಂಥವನೊ ಜೋಗಿ ಗಾನವಾಡುತ ಬಂದ
ಮಾಳಿಗೆಮೇಲೆ ಮಲಗಿರುವೊ । ಹೆಣ್ಣೀಗೆ
ಮಂತ್ರದ ವಿಭೂತಿ ಬಳಿದಾನು ॥

ಎಂಥವನೊ ಜೋಗಿ ಪಂಥನಾಡುತ ಬಂದ
ಉಪ್ಪರಿಗೆಮೇಲೆ ಮಲಗಿರುವೊ । ಮಾಳಮ್ಮೆಗೆ
ಮಂಕೀನ ಬೂದಿ ತೊಳೆದಾನೆ ॥

❖

ಯಾವೋನೊ ಜೋಗಿ ದಾಯನಾಡುತ ಬಂದ
ಮಂಚದ ಮೇಲೆ ಮಲಗಿರುವೊ । ಮಾಳಮ್ಮೆಗೆ
ಮಾಯೊದ ಬೂದಿ ತೊಳೆದಾನೆ ॥

❖

ಮುದ್ದು ಮಂಚದಮೇಲೆ ಒರಗಿರುವಳ್ಯಾರಮ್ಮ
ಮುದ್ದು ಭೈರುವನ ಮಡದೇನೆ । ಮಾಳಮ್ಮ
ನೀ ಇದ್ದ ಪಟ್ಟಣದ ಹೆಸರೇಳೆ ॥

❖

ಹೆಸರು ಹೇಳಿದರೆ ದೆಸೆಕೋಟೆ ಬೆದರ್ಯಾವು
ಹಸುವಂಗದ ಕೋಟೆ ಹಗಲೇಯ । ಕನ್ನಕೊರೆದು
ದೆಸೆವಂತ ಭೈರುವ ಸೆರೆತಂದ ॥

ಕಪ್ಪಿನ ಬಟ್ಟೆಗೆ ಪಟ್ಟೆಯ ಸೀರೆಗೆ
ಮಾಳವ್ವ ನೀನಿರುವ ಚೆಲುವೀಗೆ । ಗಂಗಾಧರ
ಕೋಟಿಯ ಕನ್ನ ಕೊರೆದಾನು ॥

❖

ಸೂಳೆ ಕರೆಕೊಂಡು ಸುಮ್ನೇಕೆ ನಿಲ್ಲದೀರಿ
ಸೂಳೆ ಮಾಳವ್ನ ಒಡಗೊಂಡು । ಭೈರುವ
ನೀನು ರಾಜ ಬೀದೀಲಿ ಬರಬಹುದೆ ?

❖

ಮೆಚ್ಚಿ ತಂದೇನೆ ಚಿಕ್ಕ ಪ್ರಾಯದೋನ
ಕಪ್ಪಚ್ಚಿ ಮೀಸೆ ಬರುವೋನ । ಭೈರುವನ
ನೀನು ಮೆಚ್ಚಿ ತಂದೇನೆ ಮಾಳವ್ವ ॥

❖

ಮೆಚ್ಚಿ ಬರಲಿಲ್ಲಾ ಚಿತ್ತ ನಾ ಬೀಳಲಿಲ್ಲಾ
ಚಿಕ್ಕಂದಿನಲ್ಲಿ ಹಣೆಯಲ್ಲಿ । ಬರೆದಂತೆ
ನಾನು ಮೆಚ್ಚಿ ಬಂದೆ ಮೇಲು ಕುಲದವರ ॥

ಓಡಿ ನಾ ಬಂದಿಲ್ಲಾ ಮೆಚ್ಚಿ ನಾ ಬರಲಿಲ್ಲಾ
ಜೀವ ಕಣ್ಣನೋಡಿ ಮೆಚ್ಚೀದೆ....।

❖

ಬೆಟ್ಟದ ಭೈರುವ್ನ ಬೆನ್ನಿಂದೆ ಇರುವೊಳ್ಯಾರೆ
ಹಸಿರು ನೀಲದ ಬಳೆಯೋಳು । ಮಾಳವ್ವ
ಹೆಸರ್ಹೇಳೆ ನಿಮ್ಮ ಪುರುಷಾರ ॥

❖

ಹೆಸರು ಹೇಳಿದರೆ ಹೆಚ್ಚಾಳ ಏನಮ್ಮ
ಹಸಿರು ಅಂಚಿನ ಕೋಟೆ ಅಲ್ಲಿ ಮೇಲುಕೋಟೆ । ಆಚೆ
ಚುಂಚನಗಿರಿ ಭೈರುವ ಸೆರೆ ತಂದ್ರು ॥

❖

ಸೊಂಟಕೆ ನ್ಯಾಯಕಟ್ಟಿ ಇಲ್ಲಿಗೇತಕೆ ಬಂದೆ
ಜಡೆಯ ಗಂಟೆನೊಳಗೆ ಗಜಗಂಗೆ । ಮಾಳವ್ವ
ಇಲ್ಲಿಂದ ಹಿಂದಕೆ ತಿರುಗಮ್ಮ ॥

ಮುದಿಯ ಎತ್ತನು ಏರಿ ಮೈಗೆ ಬೂದಿಯ ಬಳಿದು
ಯೋಗಿಯಾಗೇಕೆ ಕರೆತಂದೆ । ಮಾಳಮ್ಮ
ನೀ ಬಂದಿರುವ ಬಗೆಯ ನಾ ಬಲ್ಲೆ ॥

ಹಸಿಯನು ಭೈರುವ ಬಸವನೇರಿಕೊಂಡು
ಎಸಳು ಹೊಂಬಾಳೆ ಹಿಡಕೊಂಡು । ಬೆಟ್ಟದ
ಹಸಳೀಲಾಡ್ಯವನೆ ಪಗಡೇಯ ॥

ಅರುಳು ಮಲ್ಲಿಗೆ ಹೂವ ಇರುಳೆಲ್ಲಾ ಕುಯ್ಯೋರೆ
ಇರುಳೆಲ್ಲಾ ದಂಡೆ ಹೆಣೆಯೋರೆ । ಗಂಗಾಧರ
ಮಡದಿ ಪಾರ್ವತಿಯು ತುರುಬೀಗೆ ॥

ತೆಂಕಾಲ ಬೀದೀಲಿ ಸಂತೋಷ ಏನಿರಮ್ಮ
ಕೆಂಪೆಮಾಳವ್ನ ಅರಮನೇಲಿ । ಭೈರುವ
ಕಂಕಣವ ಧರಿಸಿ ಬರುತಾರೆ ॥

ಬಡಗಾಲ ಕೇರೀಲಿ ಸಡಗಾರ ಏನಿರವ್ವ
ಬೆಡಗಿ ಮಾಳವ್ನ ಅರಮನೇಲಿ । ಭೈರುವ
ಕಡಗಾವ ಧರಿಸಿ ಬರುತಾರೆ ॥

❖

ಭೈರುವ್ನ ಹೆಂಡತಿ ಬಿನ್ನಾಣಿ ಮಾಳವ್ವ
ಬೇವಿನ ಎಲೆಯಾಗೆ ಬೆರಣೀಯ । ಬುತ್ತಿಯ ಕಟ್ಟಿ
ಬಿಚ್ಚಿ ನೋಡಿದರೆ ಘಮ ಘಮ ॥

❖

ಭೈರುವ್ಗೆ ಬಾಸಿಂಗ ಮಾಳವ್ಗೆ ತಾರಲ
ಚುಂಚನಗಿರಿಯಪ್ಪಗೆ ಮಿಂಚಿದಂಡಿ । ಇಲ್ಲವೆಂದು
ಮಂಚಾಕೆ ಮಾಳಮ್ಮ ಬರಲಿಲ್ಲಾ ॥

❖

ಗಂಧ ಇಟ್ಟುಕೊಂಡು ಗಂಗೆಮಾಳಿ ಕರಕೊಂಡು
ತೇರ ಬೀದೀಲಿ ಬರುವಾಗ । ಭೈರುವ
ಏನು ಬೇಕೆ ಮಾಳಮ್ಮ ಪರಿಸೇಲಿ ॥

ಗಂಧದ್ದುಡಿಬೇಕು ಗಾಜಿನ ಭರಣಿಬೇಕು
ಎಳೆದವನಬೇಕು ತುರುಬೀಗೆ ||

❖

ಮೊಗ್ಗು ಬಂದೊ ಮೊಗ್ಗು ಮೊಗ್ಗಾಡಗಿತ್ತೀಗೆ
ಮೊಗ್ಗು ಬಿಟ್ಟು ಮೊಗ್ಗು ಮುಡಿಯೋಳ್ಗಿ । (ಮುಡಿಯೊ)
ಮೊಗ್ಗು ಬಂದೊ ಶಿವನ ರಥದಿಂದ || (ಮಾಳಮ್ಗ

❖

ಹೂವು ಬಂದೊ ಹೂವು ಹೂವಾಡಗಿತ್ತೀಗೆ
ಹೂವು ಬಿಟ್ಟು ಹೂವು ಮುಡಿಯೋಳ್ಗಿ । (ಮುಡಿಯೊ)
ಹೂವು ಬಂದೊ ಶಿವನ ರಥದಿಂದ || (ಮಾಳಮ್ಗ





ನಾಗಾರ ಕಲ್ಲತ್ತಿ ಹೂವು ಕುಯ್ಯುವರ್ಯಾರೊ

ಗಂಗೆ ಮಾಳವ್ವ ನಿನ್ನ ಗಂಡನೆಲ್ಲಿಗ್ಹೋದಾನೆ
ಗಂಡನುಳ್ಳೋಳ ಗರತೀಯ । ತೊಡೆಯಮ್ಯಾಲೆ
ಅವರು ಗಂಧದುಂಡೆಯಾಗಿ ಒರಗ್ಯವ್ರೆ ॥

❖

ಅರಸಿ ಮಾಳವ್ವ ನಿನ್ನ ಪುರುಷನೆಲ್ಲಿಗ್ಹೋದಾನೆ
ಅರಿಸಿಣದ ಭರಣಿ ಒಳಗಿಲ್ಲ । ಗಂಗೆಮಾಳಿ
ಅವರು ಅರಿಸಿಣದ ಉಂಡೆಯಾಗಿ ಮಲಿಗ್ಯವ್ರೆ ॥

❖

ಗಂಗೆ ಮಾಳವ್ವ ನಿನ್ನ ಗಂಡಗೆ ಬುದ್ಧಿ ಹೇಳೆ
ಗಂಡನುಳ್ಳೋಳ ತೊಡೆಯಮ್ಯಾಲೆ । ಕೂತುಕೊಂಡು
ಚೆಂಡಾಡಿ ಬಳೆಯ ಹೊಡೆದಾನು ॥

❖

ಅರಸಿ ಮಾಳವ್ವ ನಿನ್ನ ಪುರುಷಾಗೆ ಬುದ್ಧಿ ಹೇಳೆ
ಪುರುಷನುಳ್ಳೋಳ ತೊಡೆಯಮ್ಯಾಲೆ । ಕೂತುಕೊಂಡು
ಸರಸಾಡಿ ಬಳೆಯ ಹೊಡೆದಾನು ॥

ಸರಸಾಡಿ ಬಳಿಯ ಹೊಡೆದು–ಭೈರುವ
ದಂಡ ಕೊಟ್ವಾನು ಧರೆಯಲ್ಲಿ ॥


❖

ದಂಡ ತೆಗಿಯೋಕೆ ಬಿಲ್ಲೆ ಚಿನ್ನವೇನೆ
ದಂಡವ ತೆಗಿಯೊ ದೊರೆಯಾರೆ.... ಈ ಧರೆಯಲ್ಲಿ
ದಂಡವ ಕೊಡುವ ಜನರ್‍ಯಾರೆ ॥

❖

ನಾಗರಕಲ್ಲುತ್ತಿ ಹೂವು ಕುಯ್ಯುವರ್‍ಯಾರೋ
ನಾಗೇಂದ್ರನ ಅಳಿಯ ಭೈರುವ । ಕುಯ್ದು ಹೂವು
ನಾಗತಿ ಮಾಳಮ್ನ ತುರುಬೀಗೆ ॥





ಗಂಡಾನ ತೇರ ನಡೆಸ್ಯಾಳೆ

ಎಲ್ಲವಳೆ ಇಲ್ಲವಳೆ ಗೊಲ್ಲರ ಕೇರಿಲವಳೆ
ಪಲ್ಲಕ್ಕೀಲವಳೆ ಕುಸುಮಾಲೆ । ಮಾಳವ್ವ
ನೀ ಉಯ್ಯಾಲೆ ಇಳಿಯೆ ದನ ಬಂದೊ ॥

❖

ಮೂಗೂತಿ ಮುಂಭಾರ ಹೆಣೆಗಂಟು ಹಿಂಭಾರ
ಜಗಜಂಪಿನೋಲೆ ಕಿವಿಭಾರ । ಮಾಳವ್ವ
ನಿನ ದೊಡ್ಡ ಗುಂಡಿನ ಸರ ಎದೆಭಾರ ॥

❖

ಜಾಣ ಭೈರುನ್ನ ಜಾರುಗುಪ್ಪೆಯಮೇಲೆ
ಜಾರಿ ಬಿದ್ದಾವೆ ಬಿಳಿಯಾಲೆ । ಮಾಳವ್ವ
ಜಾಲದ್ಹೂವೆಂದು ಮುಡಿದಾಳು ॥

❖

ಮೈಸೂರ ಸಣ್ಣ ಹುಣಿಸೆ ಹೂವಿನ ಬಣ್ಣ
ಮಾಗುಡಿ ಬಣ್ಣ ಎಳೆಸಣ್ಣ । ಮಾಳವ್ವ
ನಡುಸಣ್ಣ ಬಣ್ಣ ಉಡು ಬಾರೇ ॥

ದಾರಿ ಮನೆಯೋಳೆ ದಾರಿಗರಿಗಾಗದ್ಹೋಳೆ
ದಾರಕು ಸಣ್ಣ ದನಿಯೋಳೆ । ಮಾಳವ್ವ
ದಾರ ಬಂದಾವೆ ನೀ ಬೆಲೆಮಾಡೆ ॥

❖

ಬೀದಿ ಮನೆಯೋಳೆ ಬೀಸಣಿಗೆ ನೆರಿಗೋಳೆ
ಜಾಲದ್ಹೂವಿನ ಜಡೆಯೋಳೆ । ಮಾಳವ್ವ
ನೀ ಜಾಣೆ ತೇರುತವ ಕೊಡುಬಾರೇ ॥

❖

ಪಿಲ್ಲಿಕಾಲಿನೋಳೆ ಚೆಲ್ಲಿದ ನೆರಿಗೋಳೆ
ಕಲ್‌ಮೇಲೆ ಕಾಲು ತೊಳೆಯೋಳೆ । ಮಾಳವ್ವ
ನಿನ್‌ಪಿಲ್ಲಿ ಸಾವಿರಕೆ ಬೆಲೆಯಾದೊ ॥

❖

ತೇರು ಮೇಗಲ ಜೋಗಿ ಯಾರ ಮೇಲೆ ಮನಸಿಟ್ಟ
ಕುರಿಯ ಕಾಯುವ ಕುರುಬುತಿ । ಕೊರಳಲ್ಲಿರುವ
ಕುರಿಯ ದಂಡೆಗೆ ಮನಸಿಟ್ಟ....॥

ಕುರುಬುತ್ತಿ ಕುಟ್ಟ್ಯಾಡಿ ಕುರಿಯ ತಿಂಗಳು ಕಾದ
ಹಂಪೇಲಿ ಹಾಲು ಕರೆದುಂಡ । ಭೈರುವ
ಕೆಂಪೆ ಮಾಳವ್ಗೆ ಮನಸೋತ ॥

ಚುಂಚನಹಳ್ಳಿತನಕ ಚುಂಚನಗಿರಿತನಕ
ಕೆಂಪೆಮಾಳವ್ನ ಗುಡಿತನಕ । ಭೈರುವ
ಸಂಪಿಗೆ ಹೂವ ಕಡೆಸ್ಯಾನೊ ॥

ಚುಂಚನಹಳ್ಳಿತನಕ ಚುಂಚನಗಿರಿತನಕ
ತಾಯಿ ಪಾರ್ವತಿಗುಡಿತನಕ । ಭೈರುವ
ಮಲ್ಲಿಗೆ ಹೂವ ಕಡೆಸ್ಯಾನೊ ॥

ಹೊನ್ನಾಣೆ ಮಾಳವ್ವ ಒಳಗೇನೆ ಮಾಡೀಯೆ
ನಾಳೆ ಭೈರುವ್ಗೆ ಆಯಿತ್ವಾರ । ಒಂದ್ಹೊತ್ತು
ನೀನು ಹಾಲಿಗೆ ಎಪ್ಪು ಕೊಡು ಬಾರೇ....॥

ಗಂಗೆ ಪಾರ್ವತಿ ಗಂಡಯ್ನ ನೋಡ್ಯಾಳಲ್ಲೆ
ಸಿರಿಗಂಧಾದ ಮರವ ಒರಿಗ್ಯಾಳೆ । (ಒರಗಿ) ನೋಡ್ಯಾಳಲ್ಲೆ
ಗಂಡಾಗೆ ಬರುವ ಪರುಸೇಯು....॥

❈


ಅರಸಿ ಪಾರ್ವತಿ ಪುರುಷಾನ ನೋಡ್ಯಾಳಲ್ಲೆ
ತಂಪಿನ ಮರವ ಒರಿಗ್ಯಾಳೆ । (ಒರಗಿ) ನೋಡ್ಯಾಳಲ್ಲೆ
ಪುರುಷಾಗೆ ಬರುವ ಪರುಸೇಯ ॥

❈

ಗಂಧ ಕುಟ್ಟೂತ ಗಂಧ ಚೆಲ್ಲಾಡೂತ
ತಿಂಗಳ ಮಗನ ನಡೆಸೂತ । ಪಾರ್ವತಿ
ಅವಳು ಗಂಡನ ತೇರ ನಡೆಸ್ಯಾಳೆ....॥

❈

ಅರಿಸಿನದ ಉಂಡೇಯ ಸರಸಕೆ ಈಡಾಡುತ್ತಾ
ವರುಷದ ಮಗನ ನಡೆಸೂತ । ಮಾಳಮ್ಮ
ಪುರುಷರ ತೇರ ಹರಿಸ್ಯಾಳು ॥



ಗದ್ದುಗೆಮೇಲೆ ಕೂತಾರು ಗಂಗಾಧರ

ವಲ್ಲಿಯ ಹೊದ್ದುಕೊಂಡು ಎಲ್ಲಿಗೆ ಹೊರಟೆ ಭೈರುವ
ಗಜಗಂಗೆ ಕಲ್ಯಾಣಿ ದಡಕೇನೊ । ಗುರುವರನೆ
ತಣ್ಣೀರಲಿ ಮಿಂದು ಬರುವೋಕೆ ॥

ಕೋಗಿಲೆ ಕೂಗುವ ಮುಂಚೆ ನಾಗಭೂಷಣ ಎದ್ದು
ಮುಂಜಾನೆ ಕೊಳಕೆ ನಡೆದಾರೆ । ಗಂಗಾಧರ
ನಿತ್ಯಕರ್ಮವ ನಡೆಸ್ಯಾರೇ ॥

ನಿತ್ಯಕರ್ಮವ ಮತ್ತೆ ತೀರಿಸಿಕೊಂಡು
ನಿತ್ಯಮೂರುತಿ ಗುರುರಾಯ । ಭಕ್ತರಿಗೆ
ಬೇಡೀದ ಸ್ವಾರ್ಥವ ಕೊಡುತಾರೆ ॥

ಪೂಜೆಗೆ ಬರುವಾಗ ಮಜ್ಜನಕೆ ಹೋಗುವಾಗ
ಮೊಗ್ಗೆಲ್ಲಾ ಅರಳಿ ನಿಂತಾವು । ಭೈರುವನ
ವಜ್ಜುರದ ಕಡಗ ಘಣಿರೆಂದೊ ॥

ಚುಂಚನಗಿರಿಯಪ್ಪ ಮಜ್ಜನಕೆ ಹೋಗುವಾಗ
ಐಭೋಗ ಶಿವಪೂಜೆಗೆ ಹೋಗುವಾಗ । ಭೈರುವನ
ಶ್ರೀಗಂಧದ ಘಂಟೆ ಢಣಿರೆಂದೊ ॥





ತಾರೋ ತಮ್ಮಯ್ಯ ಜವನಾವ

ಎಡಗಡೆ ಮಾಳಮ್ಮ ಬಲಗಡೆ ಪಾರ್ವತಿದೇವಿ
ಇಬ್ಬರ ನಡುವೆ ಘನಲಿಂಗು । ಕೊತುಕೊಂಡು
ಇಬ್ಬರಿಗ್ಹೂವ ಮುಡಿಸ್ಯಾನೆ ॥

❖

ಮುಂಗೋಳಿ ಕೂಗ್ಯಾವೊ ಮೂಡು ಕೆಂಪೇರ್ಯಾವೊ
ಭೈರುವಸ್ವಾಮಿ ರಥವೇರಿ । ಬರುವಾಗ
ನಾವೆದ್ದು ಕೈಯ ಮುಗಿದೇವು ॥

❖

ತಾಕು ತಾಕಿನ ತೇರು ನೂಕಾಡಿ ಹರಿದರೆ
ಗಾತಾಳಕಾರ ಗಂಗಾಧರ । ನಿನ ತೇರು
ದೂಪದ ಅಂಗಡಿಗೆ ಹರಿದಾವೊ ॥

❖

ಎಲ್ಲರ ತೇರು ಮೆಲ್ಲಾಗೆ ಹರಿದರೆ
ಬಲವಳ್ಳಿಕಾರ ಭೈರುವ । ನಿನತೇರು
ಬೆಳ್ಳೂರ ಮೂಲೆಗೆ ಹರಿದಾವೊ ॥

ಆಯವಾದವು ಬಂಡಿ ಜಾಯವಾದವು ಕುರುಜು
ಭೈರುವನ ತೇರು ಹೊಸತೇರು । ಗೊಂಬೆತೇರು
ರಾಣೇರ ಅಂಗಡಿಗೆ ಹರಿದಾವೊ ॥

❖

ತೇರು ಹರಿದಾವು ತಾನಾಕೆ ನಿಂದಾವು
ತಾರೋ ತಮ್ಮಯ್ಯ ಜವನಾವ । ಬಾಳೆಹಣ್ಣ
ನಾ ಬೇಡಿಕೊಂಡೇನು ಸೆರಗೊಡ್ಡಿ ॥

❖

ಉಂಡೆ ಮೆರೆದಾವು ವಿಭೂತಿ ಮೆರೆದಾವು
ದಂಡೆ ಮೆರೆದಾವು ಕೊರಳಲ್ಲಿ। ಗಂಗೆಮಾಳಿ
ನಿನ ಪುರುಷ ಮೆರೆದಾನೆ ಪರುಸೇಲಿ ॥

❖

ಅಂಗಡಿ ಬೀದೀಲಿ ಹಾಸು ಜಮುಕಾನವ
ತುಂಬ ಕುಳಿತವರೆ ಭಕ್ತಾರು । ಮಾಳವ್ವ
ನಿನ ಗಂಡ ಕುಳಿತವನೆ ಘನಪುರುಷ ॥

ತೇರು ತಿಂಗಳಾದೊ ಸಾರ್‍ಯಾನೆ ಭೈರುವ
ದೂರಲ ಪರುಸೆ ಬರಲೆಂದು । ಭೈರುವ
ಸಾರ್‍ಯಾನೆ ಸಣ್ಣ ಧ್ವನಿಯೊಳಗೆ ॥





ಸ್ವಾಮಿ ಬಂದವರೆ ಮಠಕಾಗಿ

ಕೆರೆಯ ಮಾಳದಲ್ಲಿ ಮಡಿಮಾಡೊನಿವನ್ಯಾರೆ
ಮಡಿವಾಳಲ್ಲ ಕಾಣೆ ಮನೆಸ್ವಾಮಿ । ಭೈರುವ
ಮಡಿ ಮಾಡುತಾನೆ ಜಡೆಗಳ ॥

ಅಣ್ಣ ಭೈರುವ ಜಡೆಯೆಲ್ಲಿ ಒದರ್ಯಾನೆ
ಮಾಯಸಂದರದ ಮುದುಗೆರೆ । ಏರಿಮ್ಯೇಲೆ
ಮಡಿಯುಟ್ಟು ಜಡೆಯ ಒದರ್ಯಾನೆ ॥

ಕಾವೀ ನೇತೂರ ಕಾವೀಯ ಜೋತೂರ
ಕಾವೇರ್ಹೊಳೆಯಿಂದ ಬರುವೋನೆ । ಗಂಗಾಧರ
ನಿನ್ ಕಾವಿ ಹೊಳೆದಾವೆ ಬಿಸಲೀಗೆ ॥

ಕಟ್ಟೆ ನೀರಿಗೆ ಬಟ್ಟನ್ನ ಕಲ್ಲೀಗೆ
ಜುಳ ಜುಳನೆ ಬರುವೊ ಬಿಸಲೀಗೆ । ಗಂಗಾಧರನ
ಪಟ್ಟೆ ಜೋತುರ ಮುಡಿಯಾದೊ ॥

ಹಳ್ಳಾದ ನೀರಿಗೆ ತೆಳ್ಳಾನೆ ಕಲ್ಲೀಗೆ
ದಬ ದಬನೆ ಬರುವೊ ಬಿಸಲೀಗೆ । ಗಂಗಾಧರನ
ಪಟ್ಟೆ ಜೋತುರ ಮುಡಿಯಾದೊ ॥

❖

ಪಟ್ಟೆ ಜೋತೂರ ಪಟ್ಟೇಯ ನೇತೂರ
ಪಟ್ಟದಾನೆ ಮೇಲೆ ಬರುವೋನೆ । ಗಂಗಾಧರ
ನಿನ್ ಪಟ್ಟೆ ಹೊಳೆದಾವು ಬಿಸಲೀಗೆ ॥

❖

ನಂಜುಗೊರಳೋನ ಚೆಂದವ ನೋಡಿರೇ
ಶ್ರೀಗಂಧ ಇಟ್ಟವನೆ ಹಣೆತುಂಬ । ಭೈರುವ
ಬಲಗೈಲಿ ಹಿಡಿದವನೆ ತ್ರಿಶೂಲ ॥

❖

ಗುರುಗಳು ಬಂದವರೆ ಗುಲಗಂಜಿ ಮೈನವಳೆ
ಸೆರಗು ಪಲ್ಲಕ್ಕಿ ನೆರಿಯವಳೆ । ತಾಯಮ್ಮ
ಭೈರುವ ಸ್ವಾಮಿ ಬಂದವರೆ ಶರಣೆನ್ನು ॥

ನಾಗಬೆತ್ತವ ಹಿಡಿದ ಗುರುದೇವರ ಕಂಡೆ
ಗುರುಗಳ ಕಂಡು ಶರಣೆಂಬೆ । ಭೈರುವ
ಶೀಘ್ರದಲಿ ಶಿವಪೂಜೆಗೆ ದಯಮಾಡಿ ॥

❖

ಭೈರುವ ಜೋಗಿದೇವ ಕಾವೇರಿ ಸ್ನಾನವಮಾಡಿ
ಕಾವಿಕಾದಂಬ್ರ ಮಡಿನುಟ್ಟು । ಬಂದವರೆ
ಕೊಡಿರಕೆ ಹಾಕಮ್ಮ ಸಣ್ಣ ಮಂಚ ॥

❖

ಗದ್ದುಗೆ ಮೇಲೆ ಕೂತರು ಗಂಗಾಧರ
ಎದ್ದು ಬಾರಮ್ಮ ಹೆಣ್ಣುಮಗಳೆ । ಭೈರುವದೇವರ
ಮುದ್ದು ಪಾದವ ತೊಳೆಯಮ್ಮ ॥

❖

ಮುದ್ದು ಪಾದವ ತೊಳೆದು ವಿಭೂತಿ ಧರಿಸಿ
ಮಲ್ಲಿಗೆ ಹೂವ ಮುಡಿಸಮ್ಮ । ಮಹಾದೇವಿ
ಮಗಳೆ ಗುರುವಿನ ಪಾದಾಕೆ ಶರಣೆನ್ನೆ ॥

ಬಂಗಾರದ ಗುಡಿಮೇಲೆ ಜಂಗಮರ ಮಠದಾಗೆ
ಸಂಭ್ರಮವೇನೆ ಹಿರಿಯಕ್ಕ । ಮಹಾದೇವಿ
ಶಂಭು ಗವಿಸಿದ್ದೇಶನ ಶಿವಪೂಜೆ ॥

❖

ಗವಿಸಿದ್ದೇಶ್ವರನ ಗುಡಿಯಲ್ಲಿ ಏನೇನು ಐಭೋಗ
ಜೇನುತುಪ್ಪದ ಅಭಿಷೇಕ । ಗಂಗಾಧರಗೆ
ಹಾಲು ಅನ್ನದ ನೇವೇದ್ಯ ॥

❖

ಗಾಳಿಗೋಪುರದಯ್ಯ ಗಳಿಗೆಗಲ್ಲಿನಯ್ಯ
ಶ್ರೀಗಂಧ ತಂದಿವಿನಿ ಬಾರಯ್ಯ । ಗುರುದೇವ
ಚಂದ ಚಂದಾಕೆ ಧರಿಸಯ್ಯ ॥

❖

ಚುಂಚನಗಿರಿಯ ಮಠದಲ್ಲಿ ಇರುವ ಶರಣರಿಗೆಲ್ಲಾ
ಮಂಗಳಾರತಿ ಬೆಳಗೂವೆ । ಶರಣರ
ಪಾದವ ಹಿಡಿದು ನಮಿಸುವೆ ॥

ನೊಸಲಿಗೆ ವಿಭೂತಿ ಇಟ್ಟು ಕೊರಳಿಗೆ ರುದ್ರಾಕ್ಷಿ ಹಾಕಿ
ತಾವು ಜರತಾರಿ ಮಡಿಯನುಟ್ಟು । ಭೈರುವ
ಸ್ವಾಮಿ ಬಂದವನೆ ಮಠಕಾಗಿ ॥





ನಾವೆದ್ದು ಕಯ್ಯ ಮುಗಿದೇವು

ಬೆಳಗು ಆದವೇಳೆ ಬೆಳ್ಳಿ ಮೂಡ್ಯಾವೇಳು
ಗಂಗಾಧರಸ್ವಾಮಿ ರಥವೇರಿ । ಬರುವಾಗ
ನಾವೆದ್ದು ಕಯ್ಯ ಮುಗಿದೇವು ॥

❋

ತೇರ ಮುಂದವನೆ ತೇರ ಹಿಂದವನೆ
ತೇರ ಒಳಗವನೆ ಪಟ್ಟದಯ್ಯ । ಭೈರುವ
ಸಂತವಿಟ್ಟು ತೇರ ನಡೆಸ್ಯಾರೆ ॥

❋

ತೇರು ಹರಿದಾವು ತಾಣಕ್ಕೆ ನಿಂದಾವು
ತಾರೋ ಅಣ್ಣಯ್ಯ ಜವನಾವ । ಬಾಳೆಹಣ್ಣ
ಬೇಡಿಕೊಂಡೇನು ಸೆರಗೊಡ್ಡಿ ॥

❋

ಬೆಟ್ಟದ ಬೇಲದಕೆರೆ ಮತ್ತೆ ಚುಂಚನಗಿರಿ
ಪಟ್ಟಕ್ಕೆ ಓಲೆ ಬರೆದಾರೊ । ಬೇಲದಕೆರೆಯ
ಬೆಳಗೀನ ತೇರಿಗೆ ಬರಹೇಳಿ ॥

ಗೊಂಬೆಯ ತೇರಗೇದವರಾರಮ್ಮ
ಚಂದಾಕೆ ಇಬ್ಬರು ತಿಗುಳರು । ಗೊಂಬೆತೇರ
ಗೇದುಗಿರಿಯಲ್ಲಿ ನಿಲಿಸ್ಯವರೆ ॥

❖


ಅಲ್ಲಿ ನೀರು ಮಜ್ಜಿಗೆ ಬೆಲ್ಲದರವಂಟಿಗೆ
ಚೆಲ್ಲಾಡಿ ಧೂಪ ನಡೆವುಡಿ । ಸಿದ್ಧನಸೇವೆ
ಅಲ್ಲಿ ಗವಿ ಸೋಮೇಶ್ವರ ನೆಲೆಗೊಂಡ ॥

❖

ಅತ್ತಲಾಗೆ ಹರಿ ಬೆಟ್ಟ ಇತ್ತಲಾಗೆ ಗಿರಿಬೆಟ್ಟ
ಸುತ್ತಾ ಹಬ್ಬೀದೆ ಸುರಹೊನ್ನೆ । ಮರದಡಿಯ
ಅಲ್ಲಿ ಗವಿಸಿದ್ದೇಶ್ವರ ನೆಲೆಗೊಂಡ ॥

❖

ಕೊಂಗನೂರಿಂದ ಕೊಂಬಿನ ತಮಟೆ ಬಂದೋ
ಮೂಡಲನಾಡಿನಿಂದ ಮುಡಿಬಂದೋ । ಗಂಗಾಧರ
ನಿನ್ ಹೂವಿನ ತೇರಿಗೆ ಹುಲಿ ಬಂದೊ ॥



ಗುರುವು ಭೈರುನ್ನ ನೆನೆದೇವು

ಮೊದಲು ನೆನೆದೇವು ಮದನಸುವಾರಿಯ
ಮದಗದಿಂದಾಚೆ ಮನೆಯೊಳ | ಕಂಬದಮ್ಮ
ಮುಂಚೆ ಸೊಲ್ಲಲ್ಲೆ ನೆನೆದೇವು ||

❖

ಮುಂಚೆ ನೆನೆದೇವು ಕಂಚಿ ಕಾಳೇಶ್ವರಿಯ
ಚುಂಚನಗಿರಿಯ ಮನೆಯೊಳ | ಕಂಬದಮ್ಮ
ಮೊದಲ ಸೊಲ್ಲಲ್ಲೆ ನೆನೆದೇವು ||

❖

ತಣ್ಣನೆ ಹೊತ್ತಿನಲ್ಲಿ ತಾಯಮ್ಮ ನೆನೆದೇವು
ಪನ್ನಂಗದಾಗೆ ಚಪಲಾಪ | ಹಾಕಿಸಿಕೊಳುವ
ಕನ್ನೆ ಕಂಬದಮ್ಮ ನೆನೆದೇವು ||

❖

ತಂಪನೆ ಹೊತ್ತಿನಲ್ಲಿ ಕೆಂಪೆಯ ನೆನೆದೇವು
ಸಂಪತ್ತಿನಲ್ಲಿ ಚವಲಾವ | ಹಾಕಿಸಿಕೊಳುವ
ಕೆಂಪೆ ಕಂಬದಮ್ಮ ನೆನೆದೇವು ||

ಮಧ್ಯಾಹ್ನ ಹೊತ್ತಿನಾಗ ದೊಡ್ಡೋಳ ನೆನೆದೇವು
ಒಡ್ಡೋಲಗದೊಳಗೆ ಚವಲಾವ । ಹಾಕಿಸಿಕೊಳುವ
ದೊಡ್ಡ ಕಂಬದವ್ನ ನೆನೆದೇವು ॥

❖

ದೇವಿಯ ನೆನೆದೇವು ದೇವಾರ ನೆನೆದೇವು
ದೇವಿ ದೇವಾರ ನೆನೆದೇವು । ಚುಂಚನಗಿರಿಯ
ಕಂಬದವ್ನ ನೆನೆದಾರೆ ಪಾಪ ಪರಿಹಾರ ॥

❖

ತಾಯಿ ತಂದೆ ಪಾದ ಅತ್ತೆ ಮಾವರ ಪಾದ
ತಾಯಿ ಕಂಬದವ್ನ ಸಿರಿಪಾದ । ನೆನೆದಾರೆ
ನಮಗೆ ಬಂದೋಟು ಪಾಪ ಪರಿಹಾರ ॥

❖

ನಿದ್ದೆಗಣ್ಣಲಿ ಕಂಡೆ ಸದ್ದು ದೇವಿಯ ಪಾದ
ಎದ್ದು ನೋಡಿದರೆ ಬಟಬೈಲು । ಕಂಬದವ್ನ
ನಿನ್ನ ಮಹಿಮೆ ನಮಗೆ ತಿಳಿಯಾದೊ ॥



ತಾಯಿ ಕಂಬದನ್ನು ನೆನೆದೇವು

ಏಳುತಲೆ ನೆನೆದೇವು ಭಾಳಲೋಚನ ಶಿವನ
ಜೋಳಿಗೆ ಹೊನ್ನ ಮಳೆಗರೆದ । ಚುಂಚನಗಿರಿಯ
ಗುರುವು ಭೈರುವ್ನ ನೆನೆದೇವು ॥

ಎದ್ದು ನೆನೆದೇವು ಸಿದ್ಧರ ಶಿವಯೋಗಿಯ
ರುದ್ರಾಕ್ಷಿ ವಿಭೂತಿ ಧರಿಸೋನ । ಭೈರುವನ
ನೆನೆಯುತ ಕಲ್ಲು ಹಿಡಿದೇವು ॥

ಲಿಂಗವ ನೆನೆದೇವು ಜಂಗುಮರ ನೆನೆದೇವು
ಲಿಂಗಜಂಗಮರ ನೆನೆದೇವೊ । ಕೈಲಾಸದ
ಶ್ರೀಪಾರ್ವತಿ ತಂದವನ ನೆನೆದೇವು ॥

ದೊಡ್ಡ ಕಲ್‌ಹೂಡಿ ದೊಡ್ಡೋರ ನೆನೆದೇವು
ದೊಡ್ಡಬೆಟ್ಟದ ಒಡೆಯನ । (ಒಡೆಯ) ಭೈರುವನ
ದೊಡ್ಡ ಕಲ್‌ಹೂಡಿ ನೆನೆದೇವು ॥

ಕಲ್ ಹೂಡಿ ನೆನೆದೇವು ಕಲ್ಯಾಣದಯ್ಯಾನ
ಅಲ್ಲಿ ಚುಂಚನಗಿರಿ ಶಿಖರಾದ। ಭೈರುವನ
ಸೊಲ್ಲು ಸೊಲ್ಲಿಗೆ ನೆನೆದೇವು ॥

❖


ಆರು ತೂಕದ ಬಂದಿ ಸೇರು ತೂಕದ ವಾಲೆ
ಸೇದುವ ಹಗ್ಗ ಬಲಗೈಲಿ। ಹಿಡಕೊಂಡು
ಸೇದುತ್ತ ಗುರುವ ನೆನೆದೇವು ॥

❖

ಗುರುವೆ ನಿನ್ನ ನೆನೆದು ಬರುವೆವು ಕಲ್ಯಾಣಿಗೆ
ಶರಣರಿಗೆ ಮೂರು ಕಿರುಜಡೆ। ಬಳಸಿರುವ
ಗಂಗಾಧರನ ನಾವು ನೆನೆದೇವು ॥

❖

ಅತ್ತೆಮಾವರ ಪಾದ ಮತ್ತೆ ಭೈರುವನ ಪಾದ
ಸ್ವಾಮಿ ಗಂಗಾಧರನ ಸಿರಿಪಾದ। ನೆನೆದಾರೆ
ಇದ್ದಷ್ಟು ಪಾಪ ಪರಿಹಾರ ॥



ಪ್ರಬಂಧ ಸಂಚಯ

ಜಾನಪದಗೀತೆಗಳು, ನೃತ್ಯಗಳು ಮತ್ತು ಕಥೆಗಳೆಲ್ಲ ಭೂಮಿಯಂತೆ ಫಲವತ್ತಾಗಿವೆ. ನೃತ್ಯೋತ್ಸವಗಳು ನಡೆಯುವಾಗ ಜನತೆಯ ಧಮನಿಗಳಲ್ಲಿ ಹೊಸ ರಕ್ತ ಹರಿಯುತ್ತದೆ. ಅವರು ತಮ್ಮ ಸ್ವಾತಂತ್ರ್ಯವನ್ನು ಸಾರುವಂತೆ ನರ್ತಿಸುತ್ತಾರೆ. ಕೃಷಿಕರ ಪ್ರತಿನೃತ್ಯದಲ್ಲೂ ಭೂಮಿಯ ಹೃದಯ ಜಾನಪದಗೀತೆಯ ತಾಳಕ್ಕೆ ಮಿಡಿಯುತ್ತದೆ. ಹಾಡುಗಾರ ಮತ್ತು ಕಥಾನಿರೂಪಕ ಎಲ್ಲರನ್ನೂ ವಶಪಡಿಸಿಕೊಳ್ಳುತ್ತಾರೆ.

—ದೇವೇಂದ್ರ ಸತ್ಯಾರ್ಥಿ

('Meet My People'—ಪುಟ : ೨೮)

ಜಾನಪದಸಾಹಿತ್ಯ ಜನತೆಯ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತದೆ; ಏಕೆಂದರೆ ಅದು ನೇರವಾಗಿ ಜನರ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವುದಲ್ಲದೆ, ಅವರ ದೈನಂದಿನ ಜೀವನಕ್ಕೆ ಹತ್ತಿರವಾದ ಹಬ್ಬಹರಿದಿನಗಳೊಡನೆ ಅದು ಹಾಸುಹೊಕ್ಕಾಗಿದೆ.

—ಪ್ರಫುಲ್ಲದತ್ತಗೋಸ್ವಾಮಿ

('Assam Folk Literature': ಪುಟ–೪)

ಪ್ರಸ್ತಾವನೆ

ಕನ್ನಡ ಜನಪದಸಾಹಿತ್ಯ ನಾನಾಮುಖಗಳಲ್ಲಿ ಬೆಳೆದಿದೆ; ಅನೇಕ ಪ್ರಕಾರಗಳಲ್ಲಿ ವಿಸ್ತರಿಸಿದೆ. ತಮ್ಮ ಬಾಳಿನ ಸುಖದುಃಖ, ಭಾವಭಕ್ತಿ, ನೀತಿ ಧರ್ಮಗಳನ್ನು ಕುರಿತು ಹಾಡಿ ತಣಿದ ಅಜ್ಞಾತ ಕವಿಗಳು ನಮ್ಮ ಕಣ್ಣೆದುರು ಇಲ್ಲವಾದರೂ, ಅವರು ಹಾಡಿಹೋದ ಅಮರ ಸಾಹಿತ್ಯ ಮಾತ್ರ ಇಂದಿಗೂ ಅಚ್ಚಳಿಯದೆ ಇದೆ. ಜನಪದಜೀವನದ ಹಿರಿಮೆಯನ್ನೂ, ಸಂಸ್ಕೃತಿಯನ್ನೂ ಪ್ರತಿಬಿಂಬಿಸುವ ದರ್ಪಣವಾಗಿ ನಿಂತಿದೆ. ಈ ಸಾಹಿತ್ಯದ ಒಂದು ಬಹು ಮುಖ್ಯಪ್ರಕಾರದಲ್ಲಿ ಭಕ್ತಿಗೀತೆಗಳು ಬರುತ್ತವೆ. ಒಂದು ವಚನ ಸಾಹಿತ್ಯದಂತೆ, ಒಂದು ದಾಸಸಾಹಿತ್ಯದಂತೆ ಸಾಮಾನ್ಯ ಮಣ್ಣಿನ ಮಕ್ಕಳೂ ತಮ್ಮ ಹೃದಯದ ಭಕ್ತಿಯನ್ನು ತೋಡಿಕೊಂಡ ಜನಪದ ಭಕ್ತಿಸಾಹಿತ್ಯ ವಿಶಿಷ್ಟವಾಗಿ ಬೆಳೆದಿದೆ. ತಮ್ಮ ಕುಲದೈವವನ್ನೂ, ಸ್ಥಳದೇವತೆಗಳನ್ನೂ ಕುರಿತು ನಾನಾ ಬಗೆಯಲ್ಲಿ ಹಾಡಿದ ಗೀತೆಗಳು ಅಸಂಖ್ಯಾತವಾಗಿವೆ. ಕನ್ನಡ ನಾಡಿನ ಯಾವ ಕಡೆಗೆ ಹೋದರೂ ಈ ಭಕ್ತಿಗೀತೆಗಳಿಗೆ ಕೊರತೆಯಿಲ್ಲ. ಅಲ್ಲಿನ ಸರಳಭಕ್ತಿ, ಸುಂದರ ಭಾವನೆಗಳು, ಅಪೂರ್ವಕಲ್ಪನೆಗಳು ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತವೆ. ಅಲ್ಲಿನ ಭಕ್ತಿ ಭಾವತನ್ಮಯತೆಗೆ ಬೆರಗಾಗುತ್ತೇವೆ. ಅಂಥ ವಿಶಿಷ್ಟಗುಣಗಳಿಂದ ಕೂಡಿದ ಕೆಲವು ಜನಪದ ಗೀತೆಗಳನ್ನು ಈ ಸಂಗ್ರಹದಲ್ಲಿ ಕೂಡಿಸಿಕೊಡಲಾಗಿದೆ.

ಶ್ರೀ ಆದಿಚುಂಚನಗಿರಿ ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಬೆಳ್ಳೂರು ಮತ್ತು ಪಾಯಸಂದ್ರಗಳ ನಡುವೆಯಿದೆ. ರಸ್ತೆಯ ಬಲಬದಿಯಲ್ಲಿ ವಿಸ್ತಾರವಾಗಿ ಹಬ್ಬಿರುವ ಗಿರಿಶ್ರೇಣಿಗಳ ನಡುವೆ ಮುಗಿಲು

ಮುಟ್ಟುವಂತೆ ಬೃಹದಾಕಾರದಲ್ಲಿ ಬೆಳೆದು ನಿಂತ ಈ ಗಿರಿ ಔನ್ನತ್ಯದಿಂದ, ಪ್ರಶಾಂತಿಯಿಂದ ಆಕರ್ಷಣೀಯವಾಗಿದೆ. ಅತಿ ಪುರಾತನವೂ, ಪವಿತ್ರವೂ, ಪುರಾಣೇತಿಹಾಸ ಪ್ರಸಿದ್ಧವೂ ಆಗಿ ಈ ಶಿವಕ್ಷೇತ್ರ ಪ್ರಸಿದ್ಧಿ ಪಡೆದಿದೆ. ಇಲ್ಲಿನ ನಿಸರ್ಗವೈಭವವಂತೂ ಅನುಪಮವಾದುದು. ಮೂರು ದಿಕ್ಕಿನಿಂದಲೂ ಚಾಚಿಕೊಂಡಿರುವ ಗಿರಿಗಳು, ಸುಂದರವಾದ ಹಸಿರು ತುಂಬಿದ ಕಣಿವೆಗಳು, ಅಲ್ಲಲ್ಲಿ ತಟಾಕಗಳು, ಗಿರಿ ಹತ್ತಿರವಾದಂತೆಲ್ಲ ದಟ್ಟದಟ್ಟವಾಗಿ ಬೆಳದು ಸೊಂಪಡರುವ ವನರಾಜಿ, ಗಿರಿಯ ತಪ್ಪಲು-ಅತ್ಯಂತ ರಮಣೀಯವೂ, ಆಹ್ಲಾದಕಾರಿಯೂ, ಆಗಿವೆ.

ಚುಂಚನಹಳ್ಳಿಯ ಬಳಿ ಮೋಟಾರಿನಿಂದ ಇಳಿದು ಪೂರ್ವಾಭಿಮುಖವಾಗಿ, ಎದುರಿಗೆ ಕೈಲಾಸದ ಪರ್ವತದೋಪಾದಿಯಲ್ಲಿ ನಿಂತ ಗಿರಿಯನ್ನು ನೋಡುತ್ತಾ ಕೌತುಕದಿಂದ ಮುಂದೆ ಹೋಗುವವರಿಗೆ-ಬಲಬದಿಯಲ್ಲಿ ಕರಿಯ ಕಲ್ಲುಗುಡ್ಡವೊಂದು ದಾರಿ ತೋರಿಸುತ್ತದೆ. ಆ ಗಿರಿಯ ಪಾದದಲ್ಲಿಯೇ ಸಾಗುವ ಬಂಡಿಯ ಹಾದಿಯಲ್ಲಿ ನಡೆದರೆ ಮೊದಲು ನಮ್ಮನ್ನು ಆಕರ್ಷಿಸುವುದು ಗಿರಿಯ ತಪ್ಪಲಿನ ಸುಂದರ ಕಮಲಸರೋವರ. ಸರುವಿನ ತೀರದಲ್ಲಿ ನೆಟ್ಟಿರುವ ಶಾಸನಗಳನ್ನೂ, ವೀರಗಲ್ಲುಗಳನ್ನೂ ನೋಡಿ ನಿಲ್ಲುವ ಮನವಾಗದೆ ಅರಳಿನಿಂತ ನೂರಾರು ಕೆಂದಾವರೆಗಳತ್ತಲೇ ನಮ್ಮ ದೃಷ್ಟಿ ಹೊರಳುತ್ತದೆ. ಅಲ್ಲಿಂದಾಚೆಗೆ ದಾರಿ ಸಾಗುವವರಿಗೆ ಅಪೂರ್ವಸುಖವುಂಟಾಗತೊಡಗುತ್ತದೆ. ದಾರಿಯ ಇಕ್ಕೆಲದಲ್ಲಿ ಹಬ್ಬಿ ಹೋದ ವೃಕ್ಷರಾಜಿಯ ಪ್ರಶಾಂತ ನೆರಳು ಮುದವನ್ನು ತರುತ್ತಿದ್ದಂತೆಯೇ ತಂಡತಂಡವಾಗಿ ಕೇಕೆ ಹಾಕುತ್ತ ಬರುವ ನವಿಲ ಹಿಂಡುಗಳನ್ನು ನೋಡಿ ಬೆರಗಾಗಿ ನಿಲ್ಲುತ್ತೇವೆ. ಎಷ್ಟು ನಿರ್ಭಯವಾಗಿ, ಎಷ್ಟು ನಿರಾ

ತಂಕವಾಗಿ ಈ ನವಿಲುಗಳು ವಿಹರಿಸುತ್ತವೆ! ಈ ದಿವ್ಯನೆಲೆಯ ಮಹಿಮೆಗೆ ಬೆರಗಾಗದವರಾದರೂ ಯಾರು?

'ನವಿಲು ಕುಣಿದಾವೊ ಅಯ್ಯನ ಗಿರಿಮೇಲೆ
ನಗಾರಿ ಬಡಿದಾವೊ'........(ಪುಟ ೯೪)

ಎಂಬ ಗೀತೆಯ ಮಾತು ನೆನಪಿಗೆ ಬರುತ್ತದೆ. ಜನಪದ ಕವಿಗಳ ಸೌಂದರ್ಯ ದೃಷ್ಟಿ ಸೋಜಿಗವನ್ನು ತರುತ್ತದೆ.

ನವಿಲಮಾತು ಇಂತಾದರೆ ಇನ್ನು ಮರಮರದ ಮಡಿಲಿನಲ್ಲಿಯೂ ಮೈಮರೆತು ಹಾಡುವ ಪಕ್ಷಿಸಂಕುಲದ ಕೊರಳ ಸರವನ್ನು ಕೇಳದಿರಲಾದೀತೆ! ಶಿವನ ಮಹಿಮೆಯನ್ನು ಕೊಂಡಾಡುತ್ತಿರುವಂತೆ ಸಹಸ್ರಸ್ವರಗಳಲ್ಲಿ ಹಕ್ಕಿಗಳು ಹಾಡುತ್ತವೆ. ಈ ಸ್ಥಳದ ಸನ್ನಿವೇಶ ಮಹತ್ವವನ್ನು ಈ ಹಕ್ಕಿಗಳೇ ಇಷ್ಟು ಬಣ್ಣಿಸುವಾಗ ಜನಪದ ಕವಿಗಳು ಹಾಡಿ ತಣಿಸುವುದರಲ್ಲಿ ಅಚ್ಚರಿಯೇನು?

ಕೆಳಗೆ ಸೊಂಪಾದ ಹುಲ್ಲುಹಾಸು, ತಟಾಕಗಳಮೇಲೆ ಬೀಸಿ ತಣ್ಣನೆ ಅಲೆಗಳಲ್ಲಿ ಮುತ್ತಿಡುವ ತಂಗಾಳಿ, ಮಂದಮಂದವಾಗಿ, ಗುಂಪುಗುಂಪಾಗಿ ಕವಿದುಕೊಂಡು ಮರಗಳ ಬುಡಗಳನ್ನೂ, ಬಂಡೆಗಳ ಪಾದಗಳನ್ನೂ, ತಟಾಕಗಳ ಏರಿಗಳನ್ನೂ ಆಶ್ರಯಿಸಿ ಬೆಳೆದು ನಿಂತ ಗಿಡ ಬಳ್ಳಿಗಳು— ಅಲ್ಲಲ್ಲಿ ಸಣ್ಣ ಸಣ್ಣ ಕೊಳಗಳು, ಮಂಟಪಗಳು, ಹೊಸತೇರು, ನೈದಿಲೆ ಕೊಳ, ಮತ್ತೊಂದು ತಾವರೆಕೊಳ, ಇನ್ನೂ ಮುಂದೆ ಹೋದಂತೆ ಬೆಟ್ಟದ ಪಾದಕ್ಕೆ ಮಣಿದು ಬೆಳೆದ ಮರಗಳ ಗುಂಪು! ಈ ಬಯಲುನಾಡಿನಲ್ಲಿ ಇಂಥ ಪ್ರಶಾಂತವಾದ, ಇಂಥ ರಮ್ಯವಾದ, ಇಂಥ ಆಕರ್ಷಕವಾದ ಸ್ಥಳವಾದರೂ ಆವುದು?

ಗಿರಿಯ ಸಮೀಪಕ್ಕೆ ಬರುತ್ತಿದ್ದಂತೆಯೇ ಅದರ ಧೀರ ನಿಲುವಿಗೆ, ವಿಸ್ತಾರಕ್ಕೆ, ಔನ್ನತ್ಯಕ್ಕೆ ಮನಸ್ಸು ಮೂಕವಾಗುತ್ತದೆ. ಮೇಲೆ ಗುರುಕುಲ ದಲ್ಲಿ ವಿದ್ಯಾರ್ಥಿಗಳು ಪಠಿಸುವ ಗೀತಾಶ್ಲೋಕದ ಇಂಪಾದವಾಣಿ ಮೇಲಕ್ಕೆ ಕರೆಯುತ್ತದೆ; ಸ್ಥಳದ ಪಾವಿತ್ರ್ಯವನ್ನು ಸಾರುತ್ತದೆ. ನಡುಗಿರಿಯಲ್ಲಿ ಗಂಗಾಧರನ ದೇವಾಲಯದಿಂದ ಮಧ್ಯಾಹ್ನ ಪೂಜೆಯ ಘಂಟಾನಾದ, ಓಲ ಗದ ಸದ್ದು ಕೇಳಿಬಂದು ಯಾತ್ರಿಕರಲ್ಲಿ ಭಕ್ತಿಭಾವವನ್ನು ತರುತ್ತದೆ. ಬೇಗ ಬೇಗ ಬೆಟ್ಟವನ್ನು ಹತ್ತಬೇಕೆಂಬ ಕುತೂಹಲವನ್ನುಂಟುಮಾಡುತ್ತದೆ.

ಗಂಗಾಧರೇಶ್ವರ, ಗವಿಸಿದ್ಧೇಶ್ವರ, ಸೋಮೇಶ್ವರ, ಮಲ್ಲೇಶ್ವರ, ಭೈರವೇಶ್ವರ ಎಂಬ ಪಂಚಲಿಂಗರೂಪಿಯಾಗಿ ಪರಶಿವಮೂರ್ತಿ ಇಲ್ಲಿ ನೆಲೆ ಗೊಂಡಿದ್ದಾನೆ. ಆ ನೆಲೆಗೊಂಡ ಒಂದೊಂದು ಸ್ಥಳವನ್ನೂ ನೋಡಲು ಗಿರಿಯ ಎತ್ತರದಲ್ಲಿ ಒಂದೊಂದು ದಿಕ್ಕಿಗೆ ಹೋಗಬೇಕು. ಒಂದೊಂದು ಪಾರಿಯಲ್ಲಿ ಬಂಡೆಗಳ ಮೇಲೆ ಸುಳಿದಾಡಬೇಕು. ಕಂಬದಮ್ಮ ಇಲ್ಲಿನ ಶಕ್ತಿ ದೇವತೆ–ಮೊದಲೇ ಸಿಗುವ ನಂದಿದ್ವಾರದ ಬಳಿಯೇ ನಂದೀಶ್ವರನನ್ನು ಕಂಡು ಆನಂದಿಸಿ ಹೆಬ್ಬಂಡೆಯ ಮೇಲೆ ನಡೆದು ಹೋದರೆ ಕಂಬದಮ್ಮನ ಕ್ಷೇತ್ರ ಸಿಗುತ್ತದೆ. ಅಲ್ಲಿಂದ ಮುಂದೆ ಭೈರವೇಶ್ವರದೇವಾಲಯ ದೊರೆಯು ತ್ತದೆ. ಹೆಬ್ಬಾಗಿಲ ಬಳಿಯೇ ಈ ಗುಡಿ ಇರುವುದರಿಂದ 'ಬಾಗಿಲು ಭೈರುವ'ನೆಂದೇ ಜನಪದಕವಿಗಳು ಕರೆಯುತ್ತಾರೆ. ಇಲ್ಲಿಂದ ದಕ್ಷಿಣಕ್ಕೆ ತುಸು ದೂರ ನಡೆದುಹೋದರೆ ಬಿಂದುಸರೋವರ ಸಿಗುತ್ತದೆ. ಇದನ್ನೇ ಜನಪದ ಸಾಹಿತ್ಯದಲ್ಲಿ 'ಕಲ್ಯಾಣಿ ತಾಯಿ' ಎಂದು ಕರೆದು ಹಾಡಿರುವುದು. ನಡುಗಿರಿಯಲ್ಲಿ ಆಳ ಸಿಗದಂತೆ ತುಂಬಿನಿಂತ ಈ ಸರೋವರದ ಹಿರಿಮೆಯೂ ಅಪಾರವಾದುದೆ! ಇಲ್ಲಿಂದ ಬಹು ಎತ್ತರದಲ್ಲಿಯೇ ಶ್ರೀ ಗಂಗಾಧರೇಶ್ವರ

ದೇವಾಲಯವಿದೆ. ಶ್ರೀ ಗಂಗಾಧರಲಿಂಗಕ್ಕೆ ಅಭಿಷೇಕ ಮಾಡಿದರೆ ಅಲ್ಲಿನ ಅಭಿಷೇಕ ಯಾವುದೋ ಗುಪ್ತದ್ವಾರದ ಮೂಲಕ ಹರಿದು ಬಂದು ಈ ಕಲ್ಯಾಣಿಯನ್ನು ಸೇರುತ್ತದೆಯೆಂದು ಹೇಳುತ್ತಾರೆ.

ಕಲ್ಯಾಣಿಯಿಂದ ಹಿಂದೆ ಬಂದರೆ ಗುರುಮಠದ ಕಟ್ಟಡಗಳು ಕಾಣುತ್ತವೆ. ಪ್ರಾಚೀನ ಓಲಗಶಾಲೆ, ಉರಿಗದ್ದುಗೆ, ಪಾಕಶಾಲೆ ಮುಂತಾದ ಕಟ್ಟಡಗಳನ್ನು ನೋಡುತ್ತ ನೋಡುತ್ತ ಮನಸ್ಸು ಅನೇಕ ಶತಮಾನಗಳ ಹಿಂದೆ ಓಡುತ್ತದೆ. ಅಲ್ಲಿನ ಪವಿತ್ರ ವಾತಾವರಣಕ್ಕೆ ಮನಸ್ಸು ಭಕ್ತಿಭಾವವನ್ನು ತಳೆಯುತ್ತದೆ. ಶ್ರೀಮಠದವರು ಪ್ರಾಚೀನ ಕಟ್ಟಡಗಳನ್ನೂ, ಅಂದಿನ ಆವರಣವನ್ನೂ, ವಾತಾರಣವನ್ನೂ ಇಲ್ಲಿ ಉಳಿಸಿರುವುದು ಅಭಿಮಾನದ ವಿಷಯ. ತ್ರೇತಾಯುಗದಲ್ಲಿ ಗಜಾರಣ್ಯಕ್ಷೇತ್ರದಿಂದ ಈಶ್ವರನು ಇಲ್ಲಿಗೆ ಬಂದನೆಂದು ಹೇಳುತ್ತಾರೆ. ವನವಾಸದಲ್ಲಿದ್ದ ಈಶ್ವರನು ದಕ್ಷಿಣದಲ್ಲಿ ಸಂಚರಿಸುತ್ತ ಆಗ್ಗೆ ಗಜಾರಣ್ಯವೆಂದು ಪ್ರಸಿದ್ಧವಾಗಿದ್ದ 'ಚುಂಚನಕಟ್ಟೆ' ಕ್ಷೇತ್ರಕ್ಕೆ ಬಂದನೆಂದೂ, ಅವನಿಗೆ ಆ ಕ್ಷೇತ್ರವನ್ನು ಬಿಟ್ಟುಕೊಟ್ಟು ಈಶ್ವರನು ನಿಸರ್ಗಸೌಂದರ್ಯದಿಂದಲೂ, ಪ್ರಶಾಂತ ವಾತಾವರಣದಿಂದಲೂ ಶೋಭಾಯಮಾನವಾಗಿದ್ದ ಈ ಚುಂಚನಗಿರಿಕ್ಷೇತ್ರಕ್ಕೆ ಬಂದನೆಂದು ದಂತಕಥೆಗಳು ಹೇಳುತ್ತವೆ. ಕಾವೇರೀತೀರದ ಆ ಕ್ಷೇತ್ರದಿಂದ ಈ ಗಿರಿಗೆ ಬಂದು ಇಲ್ಲಿದ್ದುಕೊಂಡು ಜನರಿಗೆ ನಾನಾ ತರದ ಹಿಂಸೆಯನ್ನು ಕೊಡುತ್ತಿದ್ದ ಚುಂಚನೆಂಬ ರಾಕ್ಷಸನನ್ನು ಕೊಂದು ನೆಲೆಗೊಂಡನೆಂದು ಕೆಲವರು ಹೇಳುತ್ತಾರೆ. ಈಶ್ವರನ ಈ ಆಗಮನವನ್ನು ಕುರಿತ ಒಂದು ಸುಂದರ ಗೀತೆಯನ್ನು ನೋಡಿ :

ಕಾವಿಯು ನೇತೂರ ಕಾವಿಯು ದೋತುರ
ಕಾವೇರ್ಹೊಳೆಯಿಂದ ಬರುವೋನೆ। ಗಂಗಾಧರ
ನಿನ್ ಕಾವಿ ಹೊಳೆದಾವು ಬಿಸಲಿಗೆ॥ (ಪುಟ ೧೫೨)

ಎಂಥ ರಮ್ಯವಾದ ಕಲ್ಪನೆ! ಹೀಗೆ ಬಂದ ಈಶ್ವರ ನೆಲೆಗೊಂಡ. ಜನಪದಭಕ್ತರು ಗುರುವನ್ನೇ ಹರನೆಂದು ನಂಬಿ ಪೂಜಿಸಿದರು. ಚುಂಚನಗಿರಿಯು ತಮ್ಮ ಕುಲಗುರುವನ್ನು ಕುರಿತು ನೂರಾರು ಬಗೆಯಲ್ಲಿ ಅವರು ಹಾಡಿದ್ದಾರೆ. ಧರ್ಮಗುರುವನ್ನು ಕೊಂಡಾಡಿದ್ದಾರೆ, ಬಣ್ಣಿಸಿದ್ದಾರೆ, ಭಯಭಕ್ತಿಗಳಿಂದ ನೆನೆದಿದ್ದಾರೆ. ಸುಮಾರು ಅರುವತ್ತಾರು ತಲೆಮಾರುಗಳ ಗುರುಪರಂಪರೆಯ ಉಜ್ವಲಇತಿಹಾಸವನ್ನುಳ್ಳ ಇಲ್ಲಿನ ಶ್ರೀಮಠ ಬಹು ಪ್ರಾಚೀನವಾದುದು. ಈಶ್ವರನಿಂದಲೇ ಸ್ಥಾಪಿಸಲ್ಪಟ್ಟ ಪೀಠಗಳಲ್ಲಿ ಇದು ಮೊದಲನೆಯದಾದುದರಿಂದ ಇದಕ್ಕೆ ಆದಿಪೀಠವೆಂದು ಹೆಸರಾಯಿತು. ಚುಂಚನಗಿರಿಯನ್ನು 'ಆದಿ ಚುಂಚನಗಿರಿ'ಯೆಂದೇ ಮೊದಲಿನಿಂದಲೂ ಕರೆಯಲಾಗಿದೆ. 'ಆದಿ ಚುಂಚನಗಿರಿಯು ವೇದಗೋಚರ ಗಿರಿಯು' ಎಂದು ಜಾನಪದಕವಿಗಳು ಕರೆಯುತ್ತಾರೆ.

ಗುರುವಿನ ಮೂಲಕ ಹರನನ್ನು ಸಾಧಿಸುವಂತೆ ಮೊದಲು ಗುರುವಿನ ದರ್ಶನ ಪಡೆದು, ಆಶೀರ್ವಾದವನ್ನು ಕೊಂಡು ಅಲ್ಲಿಂದ ಮೇಲೆ ಅನೇಕ ಮೆಟ್ಟಿಲುಗಳನ್ನು ಹತ್ತಿಹೋದರೆ ಈ ಎಲ್ಲಾ ವಾತಾವರಣಗಳಿಂದಲೂ ದೂರವಾಗಿ, ಏಕಾಂತವಾಗಿ ಭವ್ಯವೂ, ಉನ್ನತವೂ, ಮನೋಹರವೂ ಆದ ಶ್ರೀ ಗಂಗಾಧರೇಶ್ವರ ದೇವಾಲಯ ದೊರೆಯುತ್ತದೆ. ಶ್ರೀಮಠಾದಿಗಳು ಚುಂಚನಗಿರಿಯ ಮೊದಲ ಘಟ್ಟವಾದರೆ, ಅಲ್ಲಿಂದ ಮೇಲೆ ಶ್ರೀ ಗಂಗಾಧರೇಶ್ವರ ಕ್ಷೇತ್ರವು ಎರಡನೆಯ ಘಟ್ಟ. ಇಲ್ಲಿಂದ ಮೇಲೆ ಗುಡಿ

ಗಳಾವುವೂ ಇಲ್ಲ. ಇನ್ನು ಏನಿದ್ದರೂ ಹೆಬ್ಬಂಡೆ ಗುಂಡುಗಳು, ಕಂದರಾಳಿ ಗಳು........ಗವಿಸಿದ್ಧೇಶ್ವರ, ಕತ್ತಲ ಸೋಮೇಶ್ವರ ಮುಂತಾದವರ ದರ್ಶನ ಪಡೆಯಲು ಗಿರಿಯನ್ನು ಇಲ್ಲಿಂದಾಚೆಗೆ ಹತ್ತಿಹೋಗಲು ಸಾಹಸಿಗರೇ ಆಗ ಬೇಕು. ಮೇಲೆ ಹೋದಂತೆಲ್ಲ ಗಿರಿಯಲ್ಲಿ ಕೌತುಕಗಳೂ ಹೆಚ್ಚುತ್ತವೆ. ಬಂಡೆಗಳೊಡನೆ ನಮ್ಮ ಸೆಣಸಾಟವೂ ಸಾಗುತ್ತದೆ. ಬೆಟ್ಟದ ಒಂದು ತುದಿ ಯಲ್ಲಿ 'ಗಳಿಗೆಗಲ್ಲು' ಎಂದು ಹೆಸರಾಗಿರುವ ಆಕಾಶಭೈರವ ಕ್ಷೇತ್ರವಿದೆ. ಅತ್ಯಂತ ಎತ್ತರವಾದ, ಕಡಿದಾದ ಕೋಡುಗಲ್ಲೊಂದರ ಮೇಲೆ ಈ ಕ್ಷೇತ್ರ ವಿದೆ. ಸರಪಳಿಯ ನೆರವಿನಿಂದ ಮಾತ್ರ ಈ ಕೋಡುಗಲ್ಲನ್ನು ಹತ್ತಲು ಸಾಧ್ಯ. 'ಆಕಾಶ ಭೈರವ'ನಿಗೆ ಹರಸಿಕೊಂಡ ವನಿತೆಯರು ಕೂಡ ಬೆನ್ನಿಗೆ ಮಕ್ಕಳನ್ನು ಕಟ್ಟಿಕೊಂಡು ಸರಪಳಿಯನ್ನು ಹಿಡಿದು ಬೆಟ್ಟವನ್ನು ಹತ್ತಿಬಿಡುತ್ತಾರೆ. ತುಸು ಕೈ ಜಾರಿದರೆ, ಕಾಲು ಜಿವಕರೆ ಕೆಳಗೆ ಬೆಟ್ಟದ ತಳದವರೆಗೂ ಹೋಗಿರುವ ಆಳವಾದ ಕಂದಕಗಳು....ಕತ್ತಲಗವಿಗಳು.... ಆಕಾಶಕ್ಕೆ ಏರುವಂತೆಯೇ ಹೆಬ್ಬಂಡೆಯನ್ನು ಏರಬೇಕು....ಅದಕ್ಕೆ ಧೈರ್ಯ ಬೇಕು ; ಭಕ್ತಿಯ ನಿಶ್ಚಲತೆಬೇಕು ; ಕೆಚ್ಚುಬೇಕು. ಸಹಸ್ರಾರು ವರ್ಷ ಗಳಿಂದ ಈ ಬಂಡೆಯನ್ನು ಏರಿರುವವರುಂಟು; ಆದರೆ ಯಾರಿಗೂ ಯಾವ ವಿಧವಾದ ತೊಂದರೆ ಇದುವರೆಗೆ ಆಗಿಲ್ಲವೆಂದು ಹೇಳುತ್ತಾರೆ.

ಬೆಟ್ಟದ ನೆತ್ತಿ ಚೂಪಾಗಿಲ್ಲದೆ ವಿಸ್ತಾರವಾಗಿದೆ. ನಂದಿಯ ಎರಡು ಕೋಡಿನಂತೆ ಎರಡು ತುದಿಗಳು. ಒಂದು ತುದಿಯಲ್ಲಿ ಗಳಿಗೆಗಲ್ಲಾದರೆ ಮತ್ತೊಂದು ತುದಿಯಲ್ಲಿ ಜೋಳೂರುಕಂಬ. ಬಹುಶಃ ಚೋಳರ ಕಾಲ ದಲ್ಲಿ ತುಂಬ ಪ್ರಸಿದ್ಧವಾದ ಶಿವಕ್ಷೇತ್ರವಿದಾಗಿದ್ದಿತೆಂಬು ಊಹಿಸಬಹುದು. ಚೋಳರು ಸ್ಥಾಪಿಸಿರಬಹುದಾದ ಈ ನೆತ್ತಿಯ ಕಂಬದ ಮೇಲೆ ಜಾತ್ರೆಯ

ಕಾಲದಲ್ಲಿ ಇಲ್ಲಿಗೆ ಅನೇಕ ಮೈಲಿಗಳಿರುವ ಜೋಳೂರಿನವರು ಬಂದು ದೀಪ ಹಚ್ಚಿ ಹೋಗುತ್ತಾರೆ. ರಾತ್ರಿಯ ಕಾಲದಲ್ಲಿ ಈ ಕಡಿದಾದ ಕಲ್ಲುಗಳನ್ನು ಹತ್ತಿ ಬರುವುದೇ ಒಂದು ದೊಡ್ಡ ಸಾಹಸ. ಹಾಗೆ ಆ ಭಕ್ತರು ಹತ್ತಿ ಬಂದು ಕಂಬದ ತುದಿಯಲ್ಲಿರುವ ದೊಡ್ಡ ಕಲ್ಲುಹಣತೆಗೆ ಎಣ್ಣೆ ಹೊಯ್ದು ದೀಪ ಹಚ್ಚಿಹೋಗುತ್ತಾರೆ. ಗಳಿಗೆಗಲ್ಲಿನ ಮೇಲಿರುವ ದೀಪವನ್ನೂ ಇದೇ ಸಮಯದಲ್ಲಿ ಹಚ್ಚುತ್ತಾರೆ. ರಾತ್ರಿಯ ಪ್ರಶಾಂತತೆಯಲ್ಲಿ ದೂರ ದೂರದ ವರೆಗೂ ಈ ಗಿರಿ ನೆತ್ತಿಯ ಎರಡು ಉಜ್ವಲ ದೀಪಗಳು ತೋರ ತೊಡಗಿ ನೋಡುವ ಕಣ್ಣಿಗೆ ನಕ್ಷತ್ರಗಳ ಭ್ರಾಂತಿಯನ್ನು ತರುತ್ತವೆ. ಈ ಜೋಳೂರು ಸ್ತಂಭದ ಮೇಲಿನ ದೀಪವ ಬೆಳಕು ನಾವು ದೂರದ ಜೋಳೂ ರಿನ ಬಾವಿಯಲ್ಲಿ ಕಾಣಬಹುದೆಂದು ಹೇಳುತ್ತಾರೆ.

ಕತ್ತಲ ಸೋಮೇಶ್ವರನ ಗುಡಿ ಈ ಗಿರಿಯ ನೆತ್ತಿಯ ನಡುವಿನಲ್ಲಿದೆ. ಒಂದೇ ಬೆಟ್ಟದ ನೆತ್ತಿಯಾದರೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವಾಗ ಸ್ವಲ್ಪ ಎಚ್ಚರಿಕೆ ತಪ್ಪಿದರೂ ಬಟ್ಟೆಗೆಟ್ಟು ಸುತ್ತಾಡಬೇಕಾಗು ತ್ತದೆ. ಕತ್ತಲ ಸೋಮೇಶ್ವರ ಕ್ಷೇತ್ರ ಕಗ್ಗತ್ತಲ ಗವಿಯೊಂದರಲ್ಲಿ—ಇದನ್ನು ಹೊಕ್ಕು ಬರಲೂ ಅಂಜಿಕೆಯಾಗುತ್ತದೆ; ಬೆಳಕಿನ ನೆರವಿಲ್ಲದೆ ಇಲ್ಲಿ ಕೆಲ ಸವೇ ನಡೆಯದು.

ಬೆಟ್ಟದ ಸುತ್ತಲೂ ಕೂಗುಬಂಡೆಗಳ ವೈಭವೇ ವೈಭವ. ಯಾವು ದಾದರೂ ಗೊತ್ತಾದ ನೆಲೆಯಲ್ಲಿ ನಿಂತು 'ಹರೇರಾಮ್' 'ಹರಓಂ' ಎಂದು ಕೂಗಿದರೆ ಎಷ್ಟು ಸ್ಪಷ್ಟವಾಗಿ, ಎಷ್ಟು ತೀವ್ರವಾಗಿ ಬೆಟ್ಟ ಉತ್ತರ ಕೊಡುತ್ತದೆ! ಒಂದು ಕಡೆ ಮೂರು ಪ್ರತಿ ಧ್ವನಿಗಳು ಒಂದಾದ ಮೇಲೊಂದು ಬರುತ್ತವೆ. ಇಲ್ಲಿನ 'ನಾಗರಕಲ್ಲು' ಮೇದರಗುಡ್ಡ,


ಹನುಮನ ಕಣಿವೆ,ಗುಂಡಿನ ಬಸವ, ಉಂಗುಟಗಲ್ಲು (ಈ ಹೆಬ್ಬಂಡೆಯು ತಳ ಒಂದೇ ಅಂಗುಲದಷ್ಟು ಆಧಾರದ ಮೇಲೆ ಮಾತ್ರ ಬೆಟ್ಟದ ನೆತ್ತಿಯಲ್ಲಿ ನಿಂತಿದೆ) ಪಾತಾಳಗವಿ ಮುಂತಾದ ಅದ್ಭುತಗಳನ್ನು ಇಲ್ಲಿಗೆ ಬಂದೇ ನೋಡಿ ತಣಿಯಬೇಕು.

ಹೀಗೆ ಅನೇಕ ಅದ್ಭುತಗಳಿಂದಲೂ, ಮಹತ್ವಗಳಿಂದಲೂ ಪ್ರಸಿದ್ಧ ವಾಗಿರುವ ಈ ಕ್ಷೇತ್ರದ ಭಕ್ತರು ಭರತಖಂಡದ ನಾನಾ ಕಡೆಗಳಲ್ಲಿದ್ದಾರೆ. ಕನ್ನಡ ನಾಡಿನ ಯಾವ ಯಾವ ಕಡೆಗಳಲ್ಲೋ ಈ ಗಿರಿಯನ್ನು ಕುರಿತಾದ ಹಾಡುಗಳು ದೊರೆಯುವುದನ್ನು ನೋಡಿದರೆ ಇದರ ಪಾವಿತ್ರ್ಯ, ಪ್ರಖ್ಯಾತಿ ಗಳು ವೇದ್ಯವಾಗುತ್ತವೆ. ಬಹುಶಃ ಈ ಚುಂಚನಗಿರಿಯನ್ನು ಕುರಿತಾದ ಜನಪದಗೀತೆಗಳಿರುವಷ್ಟು ಸಂಖ್ಯೆಯಲ್ಲಿ ಇನ್ನಾವ ಸ್ಥಳಗಳನ್ನು ಕುರಿತ ಹಾಡುಗಳು ಇಲ್ಲವೇನೊ, ಎನ್ನುವಷ್ಟು ವಿಪುಲಸಂಖ್ಯೆಯ ಹಾಡುಗಳು ದೊರೆಯುತ್ತವೆ. ಈ ಸ್ಥಳಗೀತೆಗಳ ವೈವಿಧ್ಯವೂ, ವೈಪುಲ್ಯವೂ ತಮ್ಮವೇ ಆದ ವೈಶಿಷ್ಟ್ಯದಿಂದ ಕೂಡಿದೆ.

ಇಂಥ ಅನೇಕ ಪುಣ್ಯಕ್ಷೇತ್ರಗಳನ್ನೂ, ಸ್ಥಳದೇವತೆಗಳನ್ನೂ ಕುರಿ ತಾದ ಜನಪದಗೀತೆಗಳ ಸಂಗ್ರಹದಲ್ಲಿ ಈಗಾಗಲೇ 'ಮಲ್ಲಿಗೆ ನಗುತಾವೆ' ಸಂಕಲನದಲ್ಲಿ ಕೆಲವನ್ನು ಪ್ರಕಟಿಸಿದ್ದೇವೆ. ಅಧಿಕ ಸಂಖ್ಯೆಯ ಹಾಡುಗಳು ದೊರೆತ ಕೆಲವು ಕ್ಷೇತ್ರಗಳನ್ನು ಕುರಿತು ಮಾತ್ರ ಸ್ವತಂತ್ರ ಕೃತಿಗಳನ್ನು ಹೊರತರುವ ಉದ್ದೇಶದಿಂದ ಕೇವಲ ದೈವಸ್ತುತಿಯೇ ಪ್ರಧಾನವಾದ ಈ ಸಂಕಲನವನ್ನು ಹೊರತರುತ್ತಿದ್ದೇವೆ. ಹೀಗೆಯೇ ಪ್ರಸಿದ್ಧ ವೈಷ್ಣವಕ್ಷೇತ್ರ ವಾದ 'ಮೇಲುಕೋಟೆ'ಯ ಮೇಲೂ ಈಗಾಗಲೇ ಒಂದು ಸಂಕಲನ ಅಚ್ಚಿ ನಲ್ಲಿದೆ. 'ಶಿವಗಂಗೆ', 'ಬಿಳಿಗಿರಿ ರಂಗನಬೆಟ್ಟ', 'ಮಲೆಯ ಮಾದೇಶ್ವರ'

.ಬಿಳಿಕಲ್ಲು ಬೆಟ್ಟ' (ಕನಕಪುರ ತಾಲ್ಲೂಕಿನಲ್ಲಿದೆ) 'ತಿರುಪತಿ' ಮುಂತಾದ ಕ್ಷೇತ್ರಗಳ ಬಗ್ಗೆಯೂ ನಮ್ಮಲ್ಲಿ ಉತ್ತಮ ಸಂಗ್ರಹಗಳಿದ್ದು ಅವನ್ನು ಕ್ರಮೇಣ ಪ್ರಕಟಿಸಬೇಕೆಂದು ನಿರ್ಧರಿಸಲಾಗಿದೆ. ತಕ್ಕ ಪ್ರೋತ್ಸಾಹ ದೊರೆತರೆ ಈ ಕೃತಿಗಳನ್ನೂ ಆದಷ್ಟು ಬೇಗ ಹೊರತರುವ ಉದ್ದೇಶ ನಮ್ಮದಾಗಿದೆ. ಜನತೆಯಲ್ಲಿ ದೈವಭಕ್ತಿ, ನೈಜಸಂಸ್ಕೃತಿ ಹರಡಲು ಈ ಹಾಡುಗಳು ಎಷ್ಟು ಮುಖ್ಯವಾಗಿವೆ ಎಂಬುದನ್ನು ಈ ಸಂಕಲನದಿಂದಲೇ ಅರಿಯಬಹುದು. ಈ ಗೀತೆಗಳ ಸಾಹಿತ್ಯಗುಣವನ್ನು ಗಮನಕ್ಕೆ ತೆಗೆದುಕೊಂಡರೆ ಅಪೂರ್ವ ಕಲ್ಪನೆಗಳಿಗೂ, ಭಾವೋಜ್ವಲತೆಗೂ, ನಿಚ್ಚಳಭಕ್ತಿಸಮರ್ಪಣೆಗಳಿಗೂ ಕೊರತೆಯಿಲ್ಲ. ಸಾಮಾನ್ಯಜನತೆಯ ಬದುಕನ್ನು ಈ ಭಕ್ತಿಯ ಬಳ್ಳಿ ಯಾವ ರೀತಿ ಅಡರಿ ಅವರಿಗೊಂದು ದಾರಿದೀಪವಾಗಿದೆಯೆಂಬುದೂ ಮುಖ್ಯ. ಹಾಡುಗಳಿಗೆ ಹಿನ್ನೆಲೆಯಾಗಿ ಸ್ಥಳಪರಿಚಯ ಅವಶ್ಯಕವಾದುದರಿಂದ ಪ್ರಸ್ತಾವನೆಯನ್ನು ಇಷ್ಟು ವಿಸ್ತಾರವಾಗಿ ಬೆಳಸುವ ಅನಿವಾರ್ಯತೆಯುಂಟಾದುದಕ್ಕೆ ಓದುಗರ ಕ್ಷಮೆಯನ್ನು ಕೋರುತ್ತೇನೆ.

ಶ್ರೀ ಆದಿ ಚುಂಚನಗಿರಿ



ಭಕ್ತರು ಕಂಡ ಭೈರುವ

ಜಾನಪದ ಕಲೆ ಯಾವಾಗಲೂ ಪ್ರಾಮಾಣಿಕವೂ, ಸ್ವಭಾವಜನ್ಯವೂ ಆಗಿರುತ್ತದೆ; ಅದು ಇಡೀ ಜನಪದದ ಸಮಷ್ಟಿಕಲೆ, ಒಂದು ಜನಾಂಗದ ತತ್ತ್ವದ ಕೆನೆ, ಅದರ ಅತ್ಯಂತ ನಿಕಟವಾದ ಸುಖದುಃಖಗಳ ಅಭಿವ್ಯಕ್ತಿ. ಜನತೆಯು ನೂಲುವ ಚರಕ, ಖಡ್ಗ, ನೇಗಿಲು, ಕೈಮಗ್ಗ, ದೈವೀ ಮತ್ತು ಅಸುರೀಶಕ್ತಿಗಳು—ಇವುಗಳೊಡನೆ ಪಡೆದಿರುವ ಜೀವಂತ ಸಂಪರ್ಕದಿಂದ ಜನ್ಯವಾದ ಕಲ್ಪನೆಗಳು, ಪ್ರಾಚೀನ ರೂಪಗಳು, ಶಕ್ತಿಯುತವಾದ ದೇಸಿನುಡಿಗಳು, ಧ್ವನಿ ಹಾಗೂ ಲಯಗಳನ್ನು ಅದು ಅಳವಡಿಸಿಕೊಳ್ಳುತ್ತದೆ.

—ಮುಲ್ಕ್‌ರಾಜ್‌ಆನಂದ್

('Meet My People' ಎಂಬ ಗ್ರಂಥದ ಪೀಠಿಕೆಯಲ್ಲಿ)

ಜಾನಪದಸಾಹಿತ್ಯವು ಅತ್ಯಂತ ವರ್ಣಮಯವೂ, ವೈವಿಧ್ಯಪೂರ್ಣವೂ ಆಗಿದೆ; ಜನತೆಯ ಶೀಲಕ್ಕೆ, ಮತ್ತು ಯುಗ ಯುಗಗಳಿಂದ ಬಂದಿರುವ ಅವರ ಜೀವನಕ್ರಮ ಹಾಗೂ ಭಾವನೆಗಳಿಗೆ ಕನ್ನಡಿಯಾಗಿರುವ ಅದನ್ನು ಅಭ್ಯಸಿಸುವುದು ಆವಶ್ಯಕ.

—ಸೂರ್ಯಕುಮಾರ್‌ಭೂಯನ್

['Assam Folk Literature' ಮುನ್ನುಡಿಯಲ್ಲಿ]

ಶ್ರೀ ಆದಿಚುಂಚನಗಿರಿ ಪವಿತ್ರವಾದ ಒಂದು ಯಾತ್ರಾಸ್ಥಳ. ವರ್ಷಂ ಪ್ರತಿ ಸಾವಿರಾರು ಜನ ಯಾತ್ರಾರ್ಥಿಗಳು ದೇಶದಾದ್ಯಂತ ಇಲ್ಲಿಗೆ ಬರುತ್ತಾರೆ. ಬೆಳ್ಳೂರಿಗೆ ಎರಡು ಮೈಲಿಗಳ ದೂರದಲ್ಲಿ ಉನ್ನತಗಿರಿಗಳ ನಡುವೆ, ಶ್ರೀ ಆದಿಚುಂಚನಗಿರಿ ಮುಗಿಲನ್ನು ಮುಟ್ಟುವಂತೆ ಭವ್ಯವಾಗಿ ತೋರುತ್ತದೆ. ಈ ಗಿರಿಯಲ್ಲಿ ಬಹು ಪುರಾತನವಾದ ಶ್ರೀ ಗಂಗಾಧರೇಶ್ವರ ದೇವಾಲಯ ಬಹಳ ಸುಂದರವಾಗಿದೆ. ಇಲ್ಲಿನ ಶ್ರೀಮಠ, ಕಲ್ಯಾಣಿ, ಗುಡಿ ಗೋಪುರಗಳು, ಗಳಿಗೆಗಲ್ಲು, ಚೋಳೂರು ಕಂಬ, ಗವಿಸಿದ್ಧನಗುಡಿ, ಕತ್ತಲು ಸೋಮೇಶ್ವರಗುಡಿ, ಬಾಗಿಲು ಭೈರವನಗುಡಿ ಮುಂತಾದುವುಗಳನ್ನು ಕುರಿತು ಭಕ್ತಾದಿಗಳು ನಾನಾವಿಧವಾಗಿ ಹಾಡಿದ್ದಾರೆ. ಶ್ರೀಗಿರಿಯ ಸುತ್ತಣ ಹಳ್ಳಿಗರು ಹಾಡಿಕೊಳ್ಳುವ ಹಲಕೆಲವು ಗೀತೆಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ.

ಗಂಗಾಧರನಿಗೆ ಅಸಂಖ್ಯಾತ ಭಕ್ತರು. ಆಗಾಗ ಬಂದು ದೇವರನ್ನು ದರ್ಶನಮಾಡಿ ಹೋಗುತ್ತಾರೆ. ಮನೆ ದೇವರಾದ ಇವನ ಬಳಿ ಬಂದು ಅವರು ಹೇಳುವರು—

ಹಿಡಿಹೊನ್ನ ಹಿಡುಕೊಂಡು,
ಗುಡಿಸುತ್ತ ನಾವ್ ಬಂದೊ
ಗುಡೀಲಿ ಪೂಜಾರಿ ಇರಲಿಲ್ಲಾ ।
ಗುಡೀಲಿ ಪೂಜಾರಿ ಇರಲಿಲ್ಲ ಲಿಂಗಯ್ಯ
ಹಿಡಿಹೊನ್ನ ಇಕ್ಕೇವು ಮಡಿಲೊಡ್ಡೊ ।

ಕಾಯೊಂದು ಕೈಯಾಯ್ತು
ಹೂವೊಂದು ಮಡಿಲಾಯ್ತು
ಸಂಪಿಗೆ ಹೂವೊಂದು ಸೆರಗಾಯ್ತು ।
ಸಂಪಿಗೆ ಹೂವೊಂದು ಸೆರಗಾಯ್ತು ಭೈರುವಾ
ಸಂಪನ್ನನೆಂದು ಮರೆಬಿದ್ದೊ ।

ಬಾಗಿಲು ಮುಚ್ಚಿರುತ್ತದೆ. ದೂರದಿಂದ ಬಂದ ಅವರು ವಿಶಾಧದಿಂದ—

ಒಕ್ಕಲು ಬತ್ತೀವಿ ಒಡೆಯ ಬಾಕಲು ತೆಗಿಯೋ,
ತೊಟ್ಟಿಲು ತತ್ತೀವಿ ತೊಳುಗಾಕೆ।
ತೊಟ್ಟಿಲು ತತ್ತೀವಿ ತೊಳುಗಾಕೆ ಭೈರುವ
ಶಿಶುವ ತತ್ತೀವಿ ಹೆಸರ್ಹೇಳೊ !

ತಮ್ಮ ಮಗುವಿಗೆ ಹೆಸರನ್ನು ಕೇಳಲು ದೇವರ ಬಳಿ ಬಂದಾಗ ಅವನ ಉತ್ತರ

ಹೆಸರೇನ ಹೇಳಲಿ ಹಸುಳೆ ನಮ ಮಾದನಿಗೆ
ನನ್ನಾ ಹೆಸರು ನಿಮ್ಮ ಶಿಶುವೀಗೇ ।

ಪೂಜೆ ಮುಗಿದು ಈಶ್ವರ ತನ್ನ ಹೆಸರನ್ನೇ ಆ ಮಗುವಿಗೆ ಹೇಳಿದ ಮೇಲೆ ಆ ಮಗುವಿನ ತಾಯಿ—

ಮಲ್ಲಿಗೇ ಹೂವ ಅಲ್ಲಿಟ್ಟೆ ಇಲ್ಲಿಟ್ಟೆ
ಕಲ್ಲು ವ್ಯಾಲಿಟ್ಟೆ ಕೈಬಿಟ್ಟೆ
ಕಲ್ಲುವ್ಯಾಲಿಟ್ಟೆ ಕೈಬಿಟ್ಟೆ ಗಂಗಾಧರುನ
ಪಾದಕೇ ಇಟ್ಟೆ ಜವನಾವ ।

ಹೀಗೆ ಹೇಳಿಕೊಂಡು ಹೋಗುತ್ತಾರೆ.

ಶಿವರಾತ್ರಿ ಮುಂತಾದ ಹಬ್ಬಹರಿದಿನಗಳಲ್ಲಿ ಬಾಯಿಬೀಗದವರು ಬರುತ್ತಾರೆ. ಆ ಬಾಲೆಯರು ಅಗಾಧ ಗಿರಿಯನ್ನೇರಲಾರದೆ ಹೇಳುವರು:

ಒಪ್ಪೊತ್ತಿನೂಟ ಚುಚ್ಚು ಬಾಯಿ ಬೀಗ
ಉಕ್ಕೊ ಮರಳಲ್ಲಿ ಬರಲಾರೆ।
ಉಕ್ಕೊ ಮರಳಲ್ಲಿ ಬರಲಾರೆ ಭೈರುವ
ನೀನೊಪ್ಪಿಸಿಕೊಳ್ಳೊ ಹರಕೇಯ

ದೇವರಾದವನು ಅದನ್ನು ಒಪ್ಪಿಯಾನೆ? ತನ್ನ ದೇಗುಲದವರೆಗೂ ಅವರು ಬಂದೇ ತೀರಬೇಕೆಂದು ಅವನ ಛಲ—

ಒಪ್ಪೀಸಿಕೊಳುವುದಕೆ ಚಿಕ್ಕೋಳು ಮಗಳೇನೇ ?
ಸುತ್ತಿ ಬಾರೆ ನನ್ನ ಶಿಖರಾವ !
ಸುತ್ತಿ ಬಾರೆ ನನ್ನ ಶಿಖರಾವ ಬಾಗಿಲು ಮುಂದೆ,
ನಾ ಒಪ್ಪಿಸಿ ಕೊಳುತೀನಿ ಹರಕೇಯ ‖

ಹಾಗೆ ಬಾಯಿಬೀಗ ಹಾಕಿಕೊಂಡು ಬಂದ ಹೆಣ್ಣು ಮಕ್ಕಳನ್ನು ಕಂಡು ಅನುಕಂಪದಿಂದ ಶಿವನ ಮಡದಿ ಸಡಗರದಿಂದ ಎದುರುಗೊಳ್ಳುತ್ತಾಳೆ.

ಬಾಯಿ ಬೀಗದೋರು ಬಾಯಾರಿ ಬಂದವರೆ
ತಾರೊ ಭೈರೂವ ಚವರಿಗೆಯ।
ತಾರೋ ಭೈರೂವ ಚವರಿಗೆಯ ಚಿನ್ನದಾ
ದಾರವಾ ತಾರೊ ಸಿವಡಿಗೆ।

ಆ ರೀತಿ ಸ್ವಾಗತಿಸಲು ಪಾರ್ವತಿಯನ್ನು ಅವರು ಪ್ರಾರ್ಥಿಸುತ್ತಾರೆ

ಮಲ್ಲಿಗೇ ಹೂವ ನಲ್ಲೇರೈವರು ಕೂಡಿ,
ನಲ್ಲೇ ಪಾರ್ವತಿ ಸುಳಿದಾಳು ।
ನಲ್ಲೇ ಪಾರ್ವತಿ ಸುಳಿದಾಳು ಮುಂಡೆಯು ಮೇಲೆ
ಮಲ್ಲಿಗೇ ಹೂವು ನಗುತಾವೆ।
ಮಲ್ಲಿಗೇ ಹೂವು ನಗುತಾವೆ ತಾಯವ್ವ
ನಿನ ಪಾದುಕೆ ನಾವು ಶರಣೆಂದೊ।

ಭಕ್ತಾದಿಗಳು ಆಗಾಗ ಈ ಗಿರಿಗೆ ಬಂದು ಕಾಣುವುದು—

ಅರಿಮ್ಯಾಲೆ ಅಂದಾನಿ ಗಿರಿಮ್ಯಾಲೆ ಭೈರುವಾ
ಕೋಡುಗಲ್ಲ ಮೇಲೆ ಗವಿಸಿದ್ಧ ।

ಗವಿಸಿದ್ಧ ಪ್ರಚಂಡ ಬುದ್ಧಿಯುಸನಂತೆ—

ಕೋಡುಗಲ್ಲ ಮ್ಯಾಲೆ ಗವಿಸಿದ್ಧ ಕೂತುಕೊಂಡು
ಚೋಳೂರೀಗ್ವಾಲೆ ಬರೆದಾನು ।
ಚೋಳೂರಿಗ್ವಾಲೆ ಏನೆಂದು ಬರೆದಾನೋ
ಬಿದರೆ ಚೋಳೂರ ದೊರೆಗೋಳು ।
ಬಿದರೆ ಚೋಳೂರ ದೊರೆಗಳು ಬಂದಲದೆ
ಮಾವೀನ ಕೆರೆಯೋರು ಅಲುಗಾರು ।
ಮಾವಿನ ಕೆರೆಯೋರು ಅಲುಗಾರು ಬಲ್ಲಾವಳ್ಳಿ
ರಾಯರಾ ಖಾತ್ರಿ ಚವರಾವ
ರಾಯರಾ ಖಾತ್ರಿ ಚವರಾವ ಜೀರಹಳ್ಳಿ ಮಾಲಿಂಗಾ—
ಗೊಸ್ತ್ರ ಧರಿಸಾರು ।

ಭಕ್ತಾದಿಗಳು ಚುಂಚನಗಿರಿಯಲ್ಲಿ ನಡೆಯುವ ಶಿವಪೂಜೆಯ ವಿಧಾನವನ್ನು ಹೇಳುವ ಬಗೆ :—

" ಚುಂಚನ ಗಿರಿಯೋರು ತುಂಬಂಚಿನ ಸೀರೆಯೋರು
ತುಂಬೆ ಹೂವಿನ ತುರುಬೋರು।
ತುಂಬೇ ಹೂವಿನ ತುರುಬೋರು ಚುಂಚನಗಿರಿಯ
ತುಂಬ ಕುಂತವರೆ ದೊರೆಗಾಳು।"

" ಚುಂಚನಗಿರಿಯ ಕಂಚಿನ ಕಲ್ಯಾಣಿ
ಪಂಚಮುಖದೈಗೆ ಶಿವಪೂಜೆ ।
ಪಂಚಮುಖದೈಗೆ ಶಿವಪೂಜೆ ಯಾವಾಗ
ಕಂಚಿನಾ ಕಹಳೆ ನುಡಿದಾವು।"

" ಹಳ್ಳ ಕೊಳ್ಳದ ನೀರು ಬೆಳ್ಳಿಯ ಕೈಚೊಂಬು
ಅಲ್ಲಿ ಲಿಂಗೈಗೆ ಶಿವಪೂಜೆ।
ಅಲ್ಲಿ ಲಿಂಗೈಗೆ ಶಿವಪೂಜೆ ಆಗುವಾಗ
ಬೆಳ್ಳಿಯಾ ಗಂಟೆ ಘಣಿರೆಂದೊ।"

" ಸ್ವಾಮಿ ಭೈರುವ ಜಡೆಯೆಲ್ಲಿ ಒದಿರ್‍ಯಾನೆ,
ಮಾಯ ಸಂದುರದ ಮುದಗೆರೆಯ ।
ಮಾಯ ಸಂದುರದ ಮುದಗೆರೆಯೇರಿಯ ಮೇಲೆ,
ಹೂಕಂಡು ಜಡೆಯಾ ಒದಿರಾನೆ ।
ಒದಿರಾನೆ ಭೈರುವ ನೀರಕಂಡು ಲಿಂಗ ಬೆಳಿಗ್ಯಾನೆ "

ಪೂಜೆಗೆ ಶಿವ ಬರುವ ರೀತಿಯನ್ನು ನೋಡಿ—

" ಕಾವಿಯ ಜೋತುರ-ಕಾವಿಯ ನೇತುರ
ಕಾವೇರ್‍ಹೊಳೆಯಿಂದ ಬರುವೋನೆ!
ಕಾವೇರ್‍ಹೊಳೆಯಿಂದ ಬರುವೋನೆ ಗಂಗಾಧರ
ಕಾವಿ ಹೊಳೆದಾವೊ ಬಿಸಿಲೀಗೆ " ।

ಪೂಜೆ ವೇಳೆಗೆ ಭಕ್ತಾದಿಗಳು ಬರುವ ರೀತಿಯಿದು—

" ನೆತ್ತಿಯ ಮನಿಮೇಲೆ ಹೊತ್ತುರಿದು ಬೆಳಗ್ಯಾನೆ
ಸಾವ್ಥತ್ತೂ ಪ್ಯೈಲಿಂದ ಬರುತೀವಿ ।
ಸಾವ್ಥತ್ತೂ ಪ್ಯೈಲಿಂದ ಬರುತೀವಿ ಗಂಗಾಧರನೆ
ನಿನಗೊಪ್ಪುವಾ ಹಣ್ಣ ತರತೀವಿ "।

ಶ್ರೀ ಚುಂಚನಗಿರಿಯ ಶ್ರೀ ಗಂಗಾಧರೇಶ್ವರನಿಗೆ ಇಬ್ಬರು ಮಡದಿಯರು. ಒಬ್ಬಳು ಪಾರ್ವತಿ ಮತ್ತೊಬ್ಬಳು ಮಾಳವ್ವ ; ಕುರುಬರ ಹುಡುಗಿ.

ಗಂಡಹೆಂಡಿರ ಜಗಳ ಸವತಿಮಾತ್ಸರ್ಯ ಮುಂತಾದುವನ್ನು ಮನ ಮುಟ್ಟುವಂತೆ ಸ್ವಾರಸ್ಯಪೂರ್ಣವಾಗಿ, ತಿಳಿಯಾದ ಹಾಸ್ಯದ ಹಿನ್ನೆಲೆಯಲ್ಲಿ, ಚಿನ್ನದ ಚಾಟಿಯ ಏಟಿನಂಥ ಮಾತುಗಳ ಮಾಲೆಯಲ್ಲಿ ಹಾಡಿದ್ದಾರೆ. ಮಾಳಮ್ಮ ಪಾರ್ವತಿಗೆ ಸವತಿ ಎನಿಸಿದಳು. ಒಬ್ಬರ ಮುಖವನ್ನು ಕಂಡರೆ ಒಬ್ಬರಿಗಾಗದು. ಈಗಲೂ ದೇವಾಲಯದಲ್ಲಿ ಈ ದೇವತೆಯರ ವಿಗ್ರಹ ಗಳನ್ನು ಒಂದರ ಎದುರಿಗೆ ಒಂದನ್ನು ತರುವುದಿಲ್ಲವಂತೆ ! ಅಂತು ಪಾರ್ವತಿ

ಗಿಂತಲೂ ಜನರಿಗೆ ಮಾಳಮ್ಮನ ಮೇಲೆಯೇ ಪ್ರೀತಿ ಹೆಚ್ಚೆಂದು ಈ ಕೆಳಗಿನ ಹಲವು ಸಾಲುಗಳಿಂದ ವ್ಯಕ್ತವಾಗುತ್ತದೆ. ಜನ ಮಾಳಮ್ಮನನ್ನು ನೆನೆಯುವ ರೀತಿ—

ಪಿಲ್ಲಿ ಕಾಲಿನೋಳೆ
ಚೆಲ್ಲಿದ ನೆರಿಗೋಳೆ
ಕಲ್ಲುಮ್ಯಾಲೆ ಕಾಲ ತೊಳಿಯೋಳೆ।
ಕಲ್ಲುಮ್ಯಾಲೆ ಕಾಲ ತೊಳಿಯೋಳೆ ಮಾಳವ್ವ
ನಿನ್ನ ಪಿಲ್ಲಿ ಸಾವಿರಕೆ ಬೆಲಿಯಾದೊ ॥

ದಾರಿಮನಿಯೋಳೆ ದಾರಿಗರಿಗಾದೋಳೆ
ದಾರಕೂ ಸಣ್ಣ ದನಿಯೋಳೆ।
ದಾರಕೂ ಸಣ್ಣದನಿಯೋಳೆ ಮಾಳವ್ವ
ದಾರ ಬಂದಾವೆ ಬೆಲೆ ಮಾಡೆ ॥

ಬೀದಿ ಮನೆಯೋಳೆ
ಬೀಸಣಿಗೆ ನೆರಿಗೋಳೆ
ಜಾಲದ್ಹೂವಿನ ಜಡೆಯೋಳೆ।
ಜಾಲದ್ಹೂವಿನ ಜಡೆಯೋಳೆ ಮಾಳವ್ವ
ಜಾಣೆ ತೇರುತವ ಕೊಡುಬಾರೆ ॥

ಹರಿಶಿನದುಂಡೆಯು ಸರಸಕೇಡಾಡುತ್ತ
ವರುಷದ ಮಗನ ನಡೆಸ್ತೂತ।

ವರುಷದ ಮಗನ ನಡೆಸೂತ ಮಾಳವ್ವ
ಪುರುಷರ ತೇರ ಹರಿಸೇಳಿ ||

ಗಂಧದುಂಡೇಯು ಚಂದಕ್ಕೀಡಾಡುತ್ತ
ತಿಂಗಳಾಽ ಮಗನ ನಡೆಸೂತ |
ತಿಂಗಳಾಽ ಮಗನ ನಡೆಸೂತ ಮಾಳವ್ವ
(ಶ್ರೀ) ಗಂಡನಾ ತೇರ ಹರಿಸೇಳಿ ||

ಅಲ್ಲವಳಿ ಇಲ್ಲವಳಿ ಗೊಲ್ಲರ ಕೇರೀಲವಳಿ
ಪಲ್ಲಕ್ಕೀಲವಳಿ ಕುಸುಮಾಲೆ ಮಾಳವ್ವ |
ಉಯ್ಯಾಲೆ ಇಳಿಯೆ ಡನ ಬಂದೊ|
ಉಯ್ಯಾಲೆ ಇಳಿಯೆ ಡನ ಬಂದೊ ಮಾಳವ್ವ
ಉಯ್ಯಾಲೆಗ್ಹೂವ ಬಿಡಿಸೇವ್ರು ||

ಮೂಗುತಿ ಮುಂಭಾರ
ಹೆಣೆಗಂಟು ಹಿಂಭಾರ
ಜಗಜಂತೀನೋಲೆ ಕಿವಿಭಾರ |
ಜಗಜಂತೀನೋಲೆ ಕಿವಿಭಾರ ಮಾಳವ್ವ
ದೊಡ(ಡ್ಡ) ಗುಂಡಿನ ಸರ ಎದಿಭಾರ |
ದೊಡ್ಡ ಗುಂಡಿನ ಸರ ಎದೆಭಾರ ಮಾಳವ್ವ
ಗೇಣಂಚಿನ ಸೀರೆ ನಡುಭಾರ ||

ಹುಣಸೂರು ಬಣ್ಣ
ಹುಣಿಸೆ ಹೂವಿನ ಬಣ್ಣ
ಮಾಗಡೀ ಬಣ್ಣ
ಎಳೆಸಣ್ಣ ಮಾಳವ್ವ
ನಡುಸಣ್ಣ ಬಣ್ಣ ಉಡುಬಾರೆ ।

ಆದರೆ ತ್ರಿಶೂಲಿಗೆ ಪಾರ್ವತಿಯ ಮೇಲೆ ತಿರಸ್ಕಾರವಿಲ್ಲ. ಅವನಿಗೆ ಇಬ್ಬರೂ ಮಮತೆಯ ಮಣಿಗಳು, ಪ್ರೀತಿಯ ಪುತ್ಥಳಿಗಳು. ಇಬ್ಬರೊಡನೆಯೂ ಅವನು ಆಡಬೇಕು; ಹಾಡಬೇಕು, ಒಲಿಯಬೇಕು; ಉಲಿಯಬೇಕು, ನಲಿಯಬೇಕು; ಕಲಿಯಬೇಕು.

ಅಪ್ಪನಾಗಿರಿಮ್ಯಾಲೆ ಏನೇನು ಮಾರ್‍ಯಾವೆ ?
ಬಾಯಾರೀ ಬಂದೋರಿಗೆ ಎಳೆನೀರು ।
ಬಾಯಾರೀ ಬಂದೋರಿಗೆ ಎಳೆನೀರು ಇಂಬೀಹಣ್ಣು
ಸಾರಿಮಾರ್‍ಯಾರೆ ಗಿರಿಮ್ಯಾಲೆ ॥

ಇಂಥ ಗಿರಿಯಿಂದ ವಾರದ ಅಯ್ಯಂದಿರು ಊರಿಗೆ ಬಂದಾಗಲಂತೂ ಹೆಣ್ಣು ಮಕ್ಕಳ ಸಡಗರ ಹೇಳತೀರದು—

ವಾರದ ಅಯ್ಯೋರು ಊರಿಗೆ ಬಂದವರೆ
ವಾರವಾ ಕೇಳೆ ಹಿರಿಯಕ್ಕ ।

ವಾರದ ಅಯ್ಯನೇ ಅದಕ್ಕೆ ಉತ್ತರ ಕೊಡುತ್ತಾನೆ—

ವಾರ ಆಯಿತು ವಾರ
ತೇರು ಮಂಗಳವಾರ

ಭೂತನಾ ಸೇವೆ ಬುಧುವಾರ
ಭೂತನಾ ಸೇವೆ ಬುಧುವಾರ ತಂಗಮ್ಮ
ಆಗ ಸ್ವಾಮಿಯು ಕರೆದಾರು ॥

ಮತ್ತೆ ತಂಗಿಯವರ ಸಂಭ್ರಮ

ಜೋಗಪ್ಪ ಬಂದು ಬಾಗಲಲಿ ನಿಂತಪನೆ
ಏನ ಇಡಲೇ ಹಿರಿಯಕ್ಕ ?

ಅಕ್ಕ ಹೇಳುತ್ತಾಳೆ

ತೊಳಿಸಿದಕ್ಕೀ ನೀಡು
ಒಡೆದ ಬ್ಯಾಳೆ ನೀಡು
ಸಾಂಭ್ರಾಣಿಸಾಕಿ ಶರಣೆನ್ನು।
ಸಾಂಭ್ರಾಣಿಸಾಕಿ ಶರಣೆನ್ನು ತಂಗಮ್ಮ
ಆಗ ಭೈರುವ ಬರುತಾನೆ ॥

ಇಷ್ಟಾಯಿತು, ಅವರು ಚುಂಚನಗಿರಿ ಮತ್ತು ಗಂಗಾಧರೇಶ್ವರ, ಅವನ ಮಡದಿಯರು, ಅಯ್ಯಂದಿರು ಮುಂತಾಗಿ ಕುರಿತು ಹಾಡಿದ್ದು. ಇನ್ನು ತಮ್ಮ ಮನೆಗಳಲ್ಲಿ ಆ ಹರಸನ್ನು ಕರೆಯುವ ರೀತಿಯಿದು—

“ಎಂಜಲೆಂಜಾಲೆಂದು,
ಅಂಜದಿರೋ ಭೈರುವ
ಗಂಜಲ ಹಾಕೇವು ಮನಿತುಂಬ ।
ಗಂಜಲ ಹಾಕೇವು ಮನಿತುಂಬ ಭೈರುವ
ಅಂಜದೇ ಮನಿಗೆ ದಯುಮಾಡೊ ॥

ಇಂಬೆ ಹಣ್ಣಿನಂಗೆ ತುಂಬೀತು ಜೀರಹಳ್ಳಿ
ಲಿಂಗಾವಂತರು, ಬಣಜಿಗರು ।
ಲಿಂಗಾವಂತರು, ಬಣಜಿಗರ ಕೇರೀಲಿ
ಸ್ವಾಮಿ ಭೈರುವ ನೆರೆದಾರು ॥

ಕಂಚನಹಳ್ಳಿತಂಕ
ಚುಂಚನಗಿರಿತಂಕ
ಗಂಗೆ ಮಾಳವ್ನ ಗುಡಿತಂಕ।
ಗಂಗೆ ಮಾಳವ್ನ ಗುಡಿತಂಕ ಭೈರುವ್ನ
ಹಂತಾದ ಕಲ್ಲ ಹದಿಸೇವು ॥

ತುಂಬೆ ಹೂವಾದೊ
ಎಂಬತ್ತು ಎಸಳಾದೊ
ಎಂಬತ್ತು ವರಹಕೆ ಬೆಲಿಯಾದ
ಎಂಬತ್ತು ವರಹಕೆ ಬೆಲಿಯಾದ ವಸ್ತ್ರವ
ಸ್ವಾಮಿ ಲಿಂಗೈಗೆ ಧರಿಸ್ಯಾರೊ ॥

ಇಪ್ಪೆ ಹೂವಾದೊ
ಎಂಬತ್ತೊಂದು ಎಸಳಾದೊ
ಎಂಬತ್ತು ವರಹಕೆ ಬೆಲಿಯಾದ ।
ಎಂಬತ್ತು ವರಹಕೆ ಬೆಲಿಯಾದ ವಸ್ತ್ರವ
ಅಪ್ಪ ಲಿಂಗೈಗೆ ಧರಿಸ್ಯಾರೊ ॥

ಕಾಸೀನ ಹೊಂಬಾಳೆ
ಸಾಕೇನೊ ಭೈರುವ
ಲೋಕದ ಹೊಂಬಾಳೆ ಸುಖಿಬಾಳು।
ಲೋಕದ ಹೊಂಬಾಳೆ ಸುಖಿಬಾಳು ಜೀರಹಳ್ಳಿ
ತೋಟ ಗುತ್ತಿಗೆ ಹಿಡಿದಾರು ॥

ವಿವಿಧ ರೀತಿಯಲ್ಲಿ ದೇವರನ್ನು ಪ್ರಾರ್ಥಿಸುತ್ತಾರೆ. ಎಲ್ಲವೂ ಮುಗಿದಮೇಲೆ ಹತ್ತಾರು ಜನ ಮುತ್ತೈದೆಯರು ಈ ಹಾಡುಗಳನ್ನು ಹೇಳಿ ಮುಗಿಸಿದ ಮೇಲೆ ಪೂಜೆಯ ಅಂತ್ಯದಲ್ಲಿ—

ಹೊತ್ತು ಮುಳುಗೀತು
ಒಳಗ್ಹೋಗೊ ಭೈರುವ
ಕತ್ತಲೆ ಮಾಡ ಸುಳಿಗಾಳಿ।
ಕತ್ತಲೆ ಮಾಡ ಸುಳಿಗಾಳಿ ಬೀಸುವಾಗ
ಸ್ವಾಮಿ ಭೈರುವ ಒಳಗ್ಹೊಂಡೊ ॥

ಎಂದು ಹೇಳಿ ಕೈಮುಗಿಯುತ್ತಾರೆ.

ಗಂಧದ ಕಡ್ಡಿಯ ಧೂಮ ಉಂಗುರಾಕಾರದಲ್ಲಿ ಎದ್ದು ಆ ಭಕ್ತಾದಿಗಳ ಮನಸ್ಸನ್ನು ದೇವರು ಹರಸಿದಂತೆ ಮುತ್ತುತ್ತದೆ.

—ಪುಸ್ತಕ ಪ್ರಪಂಚ : ೧೯೫೪



ಇಬ್ಬರಿಗ್ಲೂವ ಮುಡಿಸ್ಯಾನು

......ಹೊಸ ನಾಗರಿಕತೆ ಹಳ್ಳಿಗಳಿಗೆ ನುಗ್ಗಿ ಅಲ್ಲಿನ ಜೀವನದ ಸಾರಸ್ವವಾಗಿರುವ ಈ ಸಾಹಿತ್ಯಕುಸುಮವನ್ನು ಬಾಡಿಸುವ ಮುನ್ನವೇ ಅದರ ಸಂಗ್ರಹಣ ಕಾರ್ಯ ಆದಷ್ಟು ತ್ವರಿತವಾಗಿ ಮುಂದುವರಿಯಬೇಕು. ಅವರ ಹಾಡುಗಳ ದಾಟಿ ಬೆಡಗು ಬಿನ್ನಾಣ ಮಾಧುರ್ಯಗಳನ್ನು 'ಗ್ರಾಮಫೋನ್' ಟೇಪ್‌ರೆಕಾರ್ಡರ್ ಮುಂತಾದ ಯಾಂತ್ರಿಕ ಸಾಧನಗಳಿಂದ ಸೆರೆಹಿಡಿದು ನಿಲ್ಲಿಸಬೇಕು ಶಾಶ್ವತವಾಗಿ. ಈ ಮಾತು ಜಾನಪದ ಪ್ರಾದೇಶಿಕ ಭಾಷೆಗಳಿಗೂ ಅನ್ವಯಿಸುತ್ತದೆ. ಅವುಗಳನ್ನು ಭಾಷಾಶಾಸ್ತ್ರ ದೃಷ್ಟಿಯಿಂದ ಅಭ್ಯಾಸಕ್ಕೆ ಒಳಪಡಿಸಿಕೊಳ್ಳಬೇಕು. ಏಕರೂಪವೂ ಗ್ರಾಂಥಿಕವೂ ಆದ ಭಾಷೆಗೆ ಕಾಲಕಾಲಕ್ಕೆ ವೈವಿಧ್ಯವೂ ಹೊಸ ಚೈತನ್ಯವೂ ಹರಿದು ಬರುವುದು ಮುಖ್ಯವಾಗಿ ಜಾನಪದ ಭಾಷೆಯಿಂದಲೇ. ಆದ್ದರಿಂದ ಜನಪದ ಸಾಹಿತ್ಯವೂ ಪ್ರಾದೇಶಿಕ ಭಾಷೆಗಳೂ ಸ್ವತಂತ್ರವಾಗಿ, ಸ್ವೇಚ್ಛೆಯಾಗಿ, ಬೇರಾವ ಪ್ರಭಾವಕ್ಕೂ ಒಳಗಾಗದಂತೆ, ತಮ್ಮ ಪಾಡಿಗೆ ತಾವು ಬೆಳೆಯುವುದಕ್ಕೆ ಬಿಡಬೇಕು. ವಿದ್ಯೆಯ ಪ್ರಸಾರ ಹೆಚ್ಚಾಗುತ್ತ ಬಂದಹಾಗೆಲ್ಲ ಇವುಗಳು ಕ್ರಮವಾಗಿ ಅಳಿದು ಹೋಗುತ್ತವೇನೋ ಎಂಬ ಭಯ ಕೆಲವರನ್ನು ಆವರಿಸಿಕೊಂಡಿದೆ. ಹೀಗೇನಾದರೂ ಆದರೆ ಅದು ಕನ್ನಡದ ನಾಡುನುಡಿಗಳಿಗೆ ದೊಡ್ಡ ನಷ್ಟವಾದ ಹಾಗೆಯೇ ಸರಿ.

—ಪ್ರೊ|| ಡಿ. ಎಲ್. ನರಸಿಂಹಾಚಾರ್

(೪೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಣದಿಂದ)

ಉನ್ನತವಾದ, ಭವ್ಯವಾದ ಧೀರಗಿರಿ ರಸ್ತೆಯ ಬಲಬದಿಯಲ್ಲಿ ನೋಡುವ ಕಣ್ಣಿಗೆ ಸ್ವರ್ಗದ ಕನಸನ್ನು ನೇಯುತ್ತದೆ. ಮನಸಿನ ಪರನಯು ಮೇಲೆ ಹರ್ಷದ ತೆರೆತೆರೆಗಳನ್ನೆ ಚಿಮ್ಮುತ್ತದೆ, ಶ್ರೀ ಆದಿ ಚುಂಚನಗಿರಿ

ನೆನೆದಾಗಲೆಲ್ಲಾ ಮೈರೋಮಾಂಚನಗೊಳ್ಳುತ್ತದೆ! ಅಲ್ಲಿ ತಿಳಿಗೊಳ ಅಲ್ಲಿನ ಹಸಿರವೃಕ್ಷರಾಜಿ,, ಕಮಲ ಸರೋವರವನ್ನಡರಿ ಆಬೆದ ದ ಹೊದರುಗಳು, ಬಂಡೆಗಳು ವೈಸವರಿ ಹರಿದಿರುವ ಕಾಲು ಹಾದಿಗಳು, ಮಂಟಪಗಳು, ಚೊಕ್ಕವಾದ ತೇರುವೀದಿ—ಓಹ್! ಅಲ್ಲಿಂದ ಮೇಲೇರು ಸ್ವರ್ಗದ ಏಣಿ-ಹಂತದ ಸಾಲು ! ಎಂಥ ದಿವ್ಯವಾದ ತಪ್ಪಲು ! ತಪ್ಪಲಂ ತಿರಲಿ, ಮುಡಿನೆಗಹಿ ಮೇಲೆ ನೋಡು! ಮನೋಹರ ಗಿರಿಶ್ರೇಣಿ!ಮುಗಿಲ ಹೊರೆಯನ್ನೆಲ್ಲ ಬಾಚಿ ತಬ್ಬಿಕೊಳ್ಳುವಂತೆ ತನ್ನೆಗಡು ಶಿಖರಗಳನ್ನೂ ಮೇಲೆ ಚಾಚಿ ದಿಟ್ಟಿ ಹರಿಯುವವರೆಗೂ ಬೆಳೆದು ನಿಂತ ಮಹೊನ್ನತಗಿರಿ; ಚುಂಚನಗಿರಿ! ಈ ಗಿರಿಯಮೇಲೆ ತಾನೆ ತಾಯಿ ಮಾಳಮ್ಮನ ನಿದ್ರೆ—

ವಜ್ರದ ಗಿರಿಮೇಲೆ ನಿದ್ರೆ ಮಾಡುವ ಹೆಣ್ಣೆ
ಮುದ್ದು ಗಂಗಾಧರ ಸೆರೆತಂದ । ಬೆಲೆವೆಣ್ಣೆ
ನೀನಿದ್ದ ಪಟ್ಟಣದ ಹೆಸರ್ಹೇಳೆ ॥

ಶ್ರೀ ಚುಂಚನಗಿರಿಯೊಡೆಯ ಗಂಗಾಧರ! ಚೋಳರು ಕಟ್ಟಿದ ಭವ್ಯದೇಗುಲದಲ್ಲಿ ತಾನು ಸೆರೆತಂದ ಬೆಲೆವೆಣ್ಣನ್ನು ಅವನು ಆಳುತ್ತಾನೆ. ಈ ನಿಸರ್ಗ ರಮಣೀಯ ನೆಲೆಯನ್ನು ಅರಸಿ ಗಜಾರಣ್ಯದಿಂದ ತ್ರೇತಾ ಯುಗದಲ್ಲಿಯೇ ಇಲ್ಲಿ ಬಂದು ನೆಲಸಿದನಂತೆ. ಗಂಗೆ ಮಾಳಿಯನ್ನೂ

ಮೆಚ್ಚಿನ ಮಡದಿ ಪಾರ್ವತಿಯನ್ನು ಕೂಡಿ ಆಡಲು ಈ ನೆಲೆ ಎಷ್ಟು ರಮ್ಯವಾದುದು ; ರಮಣೀಯವಾದುದು !

ಕಾವಿಯು ಜೋತುವ ಕಾವಿಯು ನೇತುರ
ಕಾವೇರ್‍ಹೊಳೆಯಿಂದ ಬರುವೋನೆ । ಗಂಗಾಧರ
ನಿನ್ನ ಕಾವಿ ಹೊಳೆದಾವು ಬಿಸಿಲೀಗೆ ॥

ಕಾವೇರಿ ಹೊಳೆಯ ಕಡೆಯಿಂದ ಬಂದ ಹೊಳೆವ ಕಾವಿಯ ಈ ಸನ್ಯಾಸಿ ಜೊತೆಯಲ್ಲಿ ಯಾವುದೋ ಹೆಣ್ಣನ್ನು ಕರೆತಂದಿದ್ದಾನೆ. ತಡೆದು ಹೆಸರ ನ್ನಾದರೂ ಕೇಳಬಾರದೆ ? ಅದಕ್ಕೆ ಅವಳದೆಂಥ ಬಿಂಕದ ಉತ್ತರ !

ಹೆಸರ ಹೇಳಿದರೆ ನನ್ನ ದೆಸೆಯೋರು ನಡುಗ್ಯಾರು
ಆಲಮಂಗದ ಕೋಟಿ ಹಗಲೇಯ । ಕನ್ನವಕೊರೆದು
ಹೆಸರಿಗೆ ದೊಡ್ಡೋನು ಶಿವತಂದ ॥

—ತನ್ನ ನೆಲೆಯಾವುದು ? ನಿಟ್ಟಾವುದು ? ಎಂಬುದನ್ನು ಆಕೆ ಹೇಳಲು ಇಚ್ಛಿಸಳು ! ಏಕೆಂದರೆ ಗಂಗಾಧರನೊಡನೆ ಅವಳು ಕದ್ದು ಬಂದಿದ್ದಾಳೆ. ನಾಳೆ ತನ್ನ ಕಡೆಯವರಿಗೆ ಆ ವಿಷಯ ತಿಳಿದರೆ ಅವರು ಮುನಿದಾರು ? ತನ್ನ ಕುಲಜರು ಮಾನಕ್ಕಂಜಿ ನಡುಗಿಯಾರು! ಆದರೂ ಸೂಕ್ಷ್ಮವಾಗಿ ಹೇಳುತ್ತಾಳೆ. ಆಲಮಂಗದ ಕೋಟೆಯಂತೆ. ಅದನ್ನು ಆಡು ಹಗಲಿನಲ್ಲಿಯೇ ಈಶ್ವರ ಕನ್ನಗೈದು ಈಕೆಯನ್ನು ಕರೆತಂದನಂತೆ. ಅವನ ಧೈರ್ಯವೇ ಧೈರ್ಯ ; ಅವನ ಸಾಹಸವೇ ಸಾಹಸ. ಆದರೆ ಇಲ್ಲಿ ಪಾರ್ವತಿ ಇದ್ದಾಳೆ. ಮುನಿಯುತ್ತಾಳೆ. ಮನಬಂದಂತೆ ನಿಂದಿಸುತ್ತಾಳೆ.

ತುಪ್ಪದರಬಿಗೆ ಸೋತ ತೆಕ್ಕೆತುರುಬಿಗೆ ಸೋತ
ತುಪ್ಪ ಮಾರುವ ಕುರುಬುತಿ । ಕೊರಳಲ್ಲಿ
ಮುತ್ತು ಕಂಡು ಗಂಗಾಧರ ಮನಸೋತ ॥

ತುಪ್ಪ ಮಾರುವ ಆ ಕುರುಬುತಿಯ ಸೌಂದರ್ಯಕೆ ಮನಸೋತಿದ್ದಾನೆ. ಅವಳ ತೆಕ್ಕೆ ತುರುಬು ಇವನ ಹೃದಯವನ್ನು ಸೂರೆಗೊಂಡಿದೆ. ಅವಳ ಕೊರಳ ಮುತ್ತು ಇವನ ಕಣ್ಣನ್ನು ಸೆಳೆದಿವೆ. ಇವಿಷ್ಟಕ್ಕೆ ಅವನು ಮನ ಸೋಲಬಹುದೆ?

ಹಾಲು ಹರವಿಗು ಸೋತ ಜೋಲು ತುರುಬಿಗು ಸೋತ
ಹಾಲು ಮಾರುವ ಕುರುಬುತಿ । ಕೊರಳಲ್ಲಿ
ಮಣಿಯ ದಂಡೆಗೆ ಮನಸೋತ ॥

ಇಂಥ ಹಾಲು ಮಾರುವ ಹುಡುಗಿಗೆ ಮನವೊಲಿದು ತರಬೇಕಾದರೆ ಅಲೆದ ಲೆದು ಸೋತಿರಲಾರನೆ ?

ಕೆಂಪೆಯ ತರಲ್ಹೋಗಿ ಸಂಪಿಗೆ ತಿರುಗಿದ
ಕೆಂಪೆ ಮಾಳವ್ನ ತರಲ್ಹೋಗಿ । ಗಂಗಾಧರ
ಸಂಪಿಗೆ ಮರವ ಒರಗವನೆ ॥

ಆಕೆಯ ತರಲ್ಹೋಗಿ ಲೋಕವ ತಿರುಗಿದ
ಆಕೆ ಮಾಳವ್ನ ತರಲ್ಹೋಗಿ । ಗಂಗಾಧರ
ಸಿರಿಧೂಪದ ಮರವ ಒರಗವನೆ ॥

ರಂಬೆಯ ತರಲ್ಹೋಗಿ ಭೂಮಂಡಲ ತಿರುಗಿದ
ರಂಬೆ ಮಾಳವ್ನ ತರಲ್ಹೋಗಿ । ಗಂಗಾಧರ
ಶ್ರೀಗಂಧದ ಮರವ ಒರಗಿದ ॥

ಭೂಮಂಡಲವನ್ನೆಲ್ಲಾ ಅಲೆದು ಕೊನೆಗೂ ಮಾಳವ್ವನನ್ನು ಹುಡುಕಿ ತಂದ. ತನ್ನ ಮನವೊಪ್ಪುವ ಹೆಣ್ಣನ್ನು ಅರಸಿ ತಂದ. ಆದರೆ ಗಿರಿಯ ಬಳಿ ಬಂದಾಗ ಅವನ ಎದೆ ಜಲ್ಲೆಂದಿತು. ಗಿರಿಯಲ್ಲಿ ಪಾರ್ವತಿ ಕಾದಿದ್ದಾಳೆ. ಬೇಟೆಗೆ ಹೋಗುವುದಾಗಿ ಹೇಳಿ ಇನ್ನೂ ಏಕೆ ಬರಲಿಲ್ಲವೆಂದು ಕಾದಿದ್ದಾಳೆ —ಯಾರೊ ಹೆಂಚಿಯ ಹುಲ್ಲಿನಲ್ಲಿ ಸುಳಿದಾಡಿದಂತಾಗಲು—

ಹೆಂಚಿಯ ಹುಲ್ಲಲ್ಲಿ ಹೊಂಚಾಡೊನಿವನಾರೆ
ಕಂಚಿನ ಗುರಾಣಿ ಕೈಲಿಲ್ಲ । ಹಿಡಿದಿಲ್ಲ
ಹೊಂಚಾಡಿ ಹುಲಿಯ ಹೊಡೆದಿಲ್ಲ ॥

ಓಹ್! ಜೊತೆಯಲ್ಲಿ ಹೆಣ್ಣೊಂದನ್ನು ಕರೆತಂದಿದ್ದಾನೆ. ಕಿಡಿಕಿಡಿಯಾದಳು ಪಾರ್ವತಿ.

ಹುಲಿಯ ಹೊಡೆದಿಲ್ಲ ಹುಲಿಚರ್ಮ ಸುಲಿದಿಲ್ಲ
ಕರಡೀಯ ಕಣ್ಣ ಕಳೆಚಿಲ್ಲ । ಗಂಗಾಧರ
ಅವಳೊಂದಿಗೆ ಹುಲ್ಲೆ ಮರಿಯಾದೆ ॥

ಮಾಳವ್ವನನ್ನು ಗಂಗಾಧರ ಗಿರಿಯಲ್ಲಿ ಹೇಗೊ ಬಚ್ಚಿಟ್ಟುಕೊಂಡ. ಪಾರ್ವತಿ ಕೆಲದಿನ ಶಾಂತಳಾದಳು. ಆದರೂ ಪತಿಯ ಮೇಲೆ ಸಂಶಯ ವಿಲ್ಲದಿಲ್ಲ. ಸದಾಜಾಗೃತಳಾಗಿಯೇ ಇರುತ್ತಿದ್ದಳು. ಕೆಲವು ಬಾರಿ ಗಂಗಾಧರ ಹೂಡುತ್ತಿದ್ದ ಉಪಾಯಗಳೆಲ್ಲಾ ನಿಷ್ಫಲವಾಗುತ್ತಿದ್ದವು. ಮಡದಿಯ

ಮುನಿಸಿನಮಾಲೆಯನ್ನು ಧರಿಸಲಾರದೆ ಧರಿಸುತ್ತಿದ್ದ ಸರ್ಪಭೂಷಣ ! ಕೆಲವೊಮ್ಮೆ ಸೆಮಯವನ್ನು ಸಾಧಿಸಿ ಮಾಳಮ್ಮನ ಬಳಿಗೆ ಹೊರಡಲು ಯತ್ನಿಸುತ್ತಾನೆ. ಯಾವ ನೆನಪನ್ನು ಹೇಳಿದರೂ ಪಾರ್ವತಿ ನಂಬಳು. ತಡೆದು ಕೇಳಿಯೇ ಕೇಳಿದಳು—

ಎಲ್ಲಿಗೆ ಲಿಂಗಯ್ಯ ಮೆಲ್ಲಗೆ ನಿನ ಪಯಣ
ಕಲ್ಲೆಲಿ ಬಂಡಿ ಹೊಡಕೊಂಡು ।

ಲಿಂಗಯ್ಯ ತಬ್ಬಿಬ್ಬಾದ. ನಡುದಾರಿಯಲ್ಲಿಯೇ ಬಂಡಿಯನ್ನು ನಿಲ್ಲಿಸಿದ. ಆ ಗಳಿಗೆಯಲ್ಲಿ ಏನು ಹೇಳಲೂ ತೋಚದೆ ತಡವರಿಸಿದ—

ಕಲ್ಲೇಲಿ ಬಂಡಿ ಹೊಡಕೊಂಡು ಲಿಂಗಯ್ಯ
ನೆಲ್ಲಿಯ ಮರದ ನೆರಳೀಗೆ ॥

ತನ್ನ ದೇಗುಲದ ನೆರಳು ಸಾಲದೆಂದು ನೆಲ್ಲಿಯ ಮರದ ನೆರಳನ್ನು ಬಯಸಿ ಬಂದಿದ್ದಾನೆ. ಎತ್ತರವಾಗಿ ಬೆಳೆದು ಸೊಂಪಾದ ನೆರಳನ್ನು ಹಾಸಿದ್ದ ನೆಲ್ಲಿಯ ಮರ ದೂರದಲ್ಲಿ ಕರೆಯಿತು. ಅದು ಪಾರ್ವತಿಯ ಕಣ್ಣಿಗೆ ಕಾಣಲಿಲ್ಲವೇನೊ !

ನೆಲ್ಲಿಯ ಮರವೆಲ್ಲೊ ನೇರಿಳೆ ತೋಪೆಲ್ಲೊ
ಜಾರುಗಲ್ಲೆಲ್ಲೊ ಜಪವೆಲ್ಲೊ । ಲಿಂಗಯ್ಯ
ನೀನು ಮೀಯುವ ಕೊಳವೆಲ್ಲೊ ॥

—ಲಿಂಗಯ್ಯ ದಾರಿ ತಪ್ಪಿದ್ದನೆಂದು ತೋರುತ್ತದೆ. ನೆಲ್ಲಿಯಮರ, ನೇರಳೆ ತೋಪುಗಳ ದಾರಿಯನ್ನು ಬಿಟ್ಟು ಬೇರೊಂದು ದಾರಿಯಲ್ಲಿ ಹೊರಟಿದ್ದನೇನೊ ! ಸೀಗೆಯ ತೋಪಿನಕಡೆ ಅವನ ಸಂಶಯದ ದೃಷ್ಟಿಯನ್ನು ಕಂಡು

ಪಾರ್ವತಿ ನಿಜಾಂಶವನ್ನು ಊಹಿಸಲು ತಡವಾಗಲಿಲ್ಲ. ನಡುವಿಗೆ ಸೆರಗನ್ನು ಬಿಗಿದು ಅತ್ತ ನಡೆದಳು. ನಸುನಗುತ್ತ ಶಿವನೂ ತನ್ನ ಬಂಡಿಯನ್ನು ಅತ್ತ ತಿರುಗಿಸಿದ—

ಇಂದು ತನ್ನ ಹೃದಯೇಶ್ವರ ಬರುವುದು ಮಾಳವ್ವನಿಗೆ ತಿಳಿಯದಿರಲಿಲ್ಲ. ಅವನಿಗಾಗಿ 'ಸಿರಿಗಂಧದ' ಕಲ್ಲಿನಲ್ಲಿ ಅಕ್ಕಿ ಮುಂತಾದುವನ್ನು ತೊಳಿಸಿ ಅಡಿಗೆಗೆ ಸಿದ್ಧಮಾಡುತ್ತಿದ್ದಳು. ಇದ್ದಕ್ಕಿದ್ದ ಹಾಗೆಯೇ ಪಾರ್ವತಿಯ ನುಡಿ ಮುಳ್ಳು ಚುಚ್ಚಿದಂತಾಯಿತು.

> ಸೀಗೆಯ ಮರದಡಿಯ ಸಿರಿಗಂಧದಕಲ್ಲೊಳ್ಳು
> ಬಾಗಿ ರಾಜಣವ ತೊಳಿಸೋಳೆ । ಮಾಳವ್ವ
> ನೀ ಯಾವ ರಾಯರಿಗೆ ಅಡಿಗವ್ವ ॥

—ತಲೆತಗ್ಗಿಸಿಕೊಂಡು ಕುಟ್ಟುತ್ತಿದ್ದ ಮಾಳವ್ವ ಮುಡಿಯೆತ್ತಿ ನೋಡಿದಳು. ಪ್ರಶ್ನೆ ಕೇಳಿದ ಹೆಣ್ಣು ದನಿಯಾವುದೆಂದು. ಸಾಕ್ಷಾತ್ ಮೃಡನ ಮಡದಿಯೇ ಕಿಡಿಗಣ್ಣಿನಲ್ಲಿ ಬಂದು ನಿಂತಿದ್ದಾಳೆ. ಮಾಳವ್ವ ಹೆದರಿಯಾಳೆ. ಹಿಂಬದಿಯಲ್ಲಿ ಮುಗುಳುನಗುತ್ತ ಕಣ್ಣು ಮಿಟುಕಿಸುವ ಲಿಂಗಯ್ಯ ಅವಳ ದೃಷ್ಟಿಗೆ ಬಿದ್ದಾಗ ಧೈರ್ಯಬಂದಿತು.

> ಯಾವ ರಾಯನೆಂದರೆ ನಾನೇನ ಹೇಳಲಿ
> ಸಾವಿರ್ದೊನ್ನಿನ ಬಸವನ । ಮೇಲಿರುವ
> ಸ್ವಾಮಿಲಿಂಗೈಗೆ ಅಡಿಗವ್ವ ॥

ಮಾಳವ್ವನ ದಿಟ್ಟತನದ ಉತ್ತರಕ್ಕೆ ಪಾರ್ವತಿ ಬೆರಗಾದಳು. ಮತ್ತೆ ಪ್ರಶ್ನೆಮಾಡುತ್ತಾಳೆ—

ಸಾರಿಸಿದೀ ಮಲ್ಲಿ ಸಾಂಬ್ರಾಣಿ ಗಮ್ಮೆಂದೊ
ಯಾರುಣುಪರಮ್ಮ ಮನೆಯಲ್ಲಿ ? ||

ಮಾಳಮ್ಮ, ಅಂಜಲಿಲ್ಲ. ಎದುರುತ್ತರ ನೀಯುತ್ತಾಳೆ—

ಯಾರುಣುವರಮ್ಮ ಮನೆಯಲ್ಲಿ ? । ಬೆಟ್ಟದ
ಸ್ವಾಮುಣುವನಮ್ಮ ಮನಿಯಲ್ಲಿ ||

ಮುಖಕ್ಕೆ ನೀರೆರಚಿದಂತೆ ಮಾತನಾಡುವ ಮಾಳಮ್ಮನೊಡನೆ ಮಾತಾಡಿ ಫಲವಿಲ್ಲವೆನಿಸಿತು ಪಾರ್ವತಿಗೆ. ತನ್ನ ಭಿರುಸಿನ ನುಡಿಗಳಿಗೆ ಅವಳು ಬೆದರಿದ ಳೆಂದು ನಂಬಿ ಬಂದಿದ್ದಳು. ಮಾಳಮ್ಮ ದಿಟ್ಟ ಹೆಣ್ಣು ಸವಾಲಿನಲ್ಲಿ, ವಾದ ಪ್ರತಿವಾದದಲ್ಲಿ ಪಾರ್ವತಿಯನ್ನು ಗೆದ್ದು ನಿಲ್ಲುವಂತೆ ಕಂಡಳು. ಪಾರ್ವತಿ ಪರಿಸ್ಥಿತಿ ಹದಗೆಡುವಂತೆ ಕಂಡಾಗ ತನ್ನ ಪತಿಯ ಕಡೆಗೆ ತಿರುಗುತ್ತಾಳೆ. ತನ್ನ ಧಣಿಯನ್ನು ತಾನು ಸರಿಪಡಿಸಿ ಕೊಳ್ಳುವುದುತ್ತಮವೆಂದು ಅವಳು ಬಗೆಯುತ್ತಾಳೆ—ಪತಿಯನ್ನು ವಿಧವಿಧವಾಗಿ ಅಲ್ಲಗಳೆಯುತ್ತಾಳೆ—

ಕುರುಬುತಿ ಕುಟ್ಟಾಡಿ ಕುರಿಯ ತಿಂಗಳುಕಾದೆ
ಹಂಪೇಲಿ ಹಾಲ ಕರೆದುಂಡೆ । ಲಿಂಗಯ್ಯ
ಕೆಂಪೆ ಮಾಳವ್ಗೆ ಮನಸೋತೆ ||

ಕುರುಬುತಿಯಾದ ಗಂಗೆಮಾಳಿಯೊಡನೆ ಆಡಿಕೊಂಡು ತಿಂಗಳುಗಟ್ಟಲೆ ಕುರಿಯನ್ನು ಕಾಯಬೇಕಾಯಿತು. ಬೆಟ್ಟದಸ್ವಾಮಿ ಬಿದಿರ ಕೊಳವೆ (ಹಂಪೆ) ಯಲ್ಲಿ ಹಾಲು ಕರೆದು ಕುಡಿಯಬೇಕಾಯಿತು. ಆಕರ್ಷಕವಾದ ಕೆಂಪು ವರ್ಣದ ಮಾಳವ್ವನಿಗೆ ಮನಸೋತು ಗಂಗಾಧರ ಇಷ್ಟೆಲ್ಲಾ ರಾದ್ಧಾಂತ ವನ್ನು ಮಾಡಿಕೊಂಡು ನೀತಿಯ ಮಾತುಗಳಲ್ಲಿ ಪತಿಯನ್ನು ದಾರಿಗೆ ತರ ಬಹುದೆ ಎಂದು ಯೋಚಿಸುತ್ತಾಳೆ—

ಕುರಿಯು ಕಾಯುಬೇಡ ಮರಿಗ್ಹುಲ್ಲ ತರಬೇಡ
ಕರಿಯು ಕಂಬಳಿಯು ನೇಯಬೇಡ। ಲಿಂಗಯ್ಯ
ನೀ ಕುರುಬುರ ಮಾಳಿ ತರಬೇಡ ॥

ಬೆಟ್ಟದ ಭೈರುವ ಕುರಿಯುಕಾಯುವುದೆಂದರೇನು? ಕುರಿಗೆ ಎಳಗರಿಕೆಯನ್ನು ತರುವುದೆಂದರೇನು, ಕುರಬುತಿಯನ್ನು ತರುವುದೆಂದರೇನು, ಪಾರ್ವತಿಯು ನುಡಿಯನ್ನು ಅವನು ಲೆಕ್ಕಿಸಲಿಲ್ಲ. ಸಿಟ್ಟಿನಿಂದಲೇ ನುಡಿದ.

ಕುರಿಯು ಕಾಯುತೀನಿ ಮರಿಗ್ಹುಲ್ಲ ತರುತೀನಿ
ಕರಿಯು ಕಂಬಳಿಯುನೇಯುತೀನಿ। ಪಾರ್ವತಿ
ಕುರುಬುರ ಮಾಳಿ ಬಿಡೆಕಾಣೆ ॥

ಶಿವನ ದೃಢನಿಶ್ಚಯು ಪಾರ್ವತಿಗೆ ಮಂದಟ್ಟಾಯಿತು. ಈ ಸಮಸ್ಯೆ ಬಗೆಹರಿಯದೆಂದು ಶಿವ ಮಾಳವ್ವನನ್ನು ಬಿಡನೆಂಬುದೂ ಅವಳಿಗೆ ಅರ್ಥವಾಯಿತು. ಕಣ್ಣಂಚಿನಲ್ಲಿ ಕಂಬನಿ ಮೂಡಿದರೂ ಅದನ್ನು ತೋರ್ಪಡಿಸಿಕೊಳ್ಳದೆ ದುಃಖವನ್ನು ನುಂಗಿಕೊಳ್ಳಬೇಕಾಯಿತು. ಸಿಟ್ಟನ್ನು ತಡೆಯುದಾದಳು; ಮಾಳಿಯು ಕಡೆ ತಿರುಗಿ—

ಗುಡ್ಡದ ಕೆಳಗೆ ಗೊಬ್ಬರವ ಚೆಲ್ಲೋಳೆ
ಜಿಡ್ಡು ಮೈಯೋಳೆ ಕುರುಬುತಿ। ಕೊರಳಿಗೆ
ಹಾವ ಸುತ್ತೇನು ಹದಿನಾರ ॥

ಗುಡುಗುತ್ತ, ಸಿಡಿಮಿಡಿಗೊಳ್ಳುತ್ತ ಪಾರ್ವತಿ ಹೊರಟು ಹೋಗುತ್ತಾಳೆ. ಗಂಗಾಧರ ಮಾಳವ್ವನನ್ನು ತನ್ನ ಎರಡನೆಯ ಮಡದಿಯಾಗಿ ಸ್ವೀಕರಿಸು

ತ್ತಾನೆ. ಇಬ್ಬರಿಗೂ ರಾಜಿ ಮಾಡಿಸುತ್ತಾನೆ. ಇಬ್ಬರನ್ನು ನಗಿಸಿ ನುಡಿಸುತ್ತಾನೆ. ಇಬ್ಬರ ನಡುವೆ ಆನಂದಪಡುತ್ತಾನೆ.

ಎಡಗಡೆ ಮಾಳವ್ವ ಬಲಗಡೆ ಪಾರ್ವತದೇವಿ
ಇಬ್ಬರ ನಡುವೆ ಘನಲಿಂಗು । ಕೂತುಕೊಂಡು
ಇಬ್ಬರಿಗ್ಹೂವ ಮುಡಿಸ್ಯಾನೆ ॥

—ಜನಪ್ರಗತಿ: ೧೯೫೭





ಶ್ರೀ ಆದಿಚುಂಚನಗಿರಿ

ಗೀತವೆನ್ನುತ್ತೀರಾ? ನಿಜ—ಅದರಲ್ಲಿ ಮಾರ್ಗಕಲಾವಿದರ ರಾಗ ವೈವಿಧ್ಯ, ತಾಳ ವೈವಿಧ್ಯಗಳಲ್ಲ. ಕೆಲವೊಮ್ಮೆ "ಇದೇನು! ಒಂದು ಹಾಡಿನಂತೆ ಇನ್ನೊಂದಿದೆ" ಎನ್ನುವಂತೆಯೂ ಕೇಳಿಸಬಹುದು. ನಮಗೆ ಅವುಗಳಲ್ಲಿನ ವೈವಿಧ್ಯ ಕಾಣಲು ನಮ್ಮ ಕಿವಿ ಪಳಗಬೇಕು. ಕೆಲವೇ ರಾಗಗಳಲ್ಲಿ, ಆದರೂ ಸ್ವತಂತ್ರವಾದ ನಾದತರಂಗಿತೆ, (Musical Rythm Structure) ರಚನೆಗಳಿಂದ ಜಾನಪದ ಗೀತ ಅಪೂರ್ವ ಶಕ್ತಿಯುಳ್ಳದ್ದು. ನಮ್ಮ ಬೀಸುವ ಹಾಡುಗಳು, ಕುಟ್ಟುವ ಹಾಡುಗಳು, ಕೆಲಸದ ಹಾಡುಗಳು—ದುಡಿಮೆಯ ಬೇಸರವನ್ನೆಲ್ಲ ಲಲಿತವಾಗಿ ಚಿತ್ರಿಸುತ್ತವೆ.

—ಶ್ರೀ ಶಿವರಾಮ ಕಾರಂತ

('ಜೀವನ' ಸಂಸ್ಕೃತಿಯ ವಿಶೇಷ ಸಂಚಿಕೆ : ೧೯೫೦)

ಶ್ರೀ ಆದಿ ಚುಂಚನಗಿರಿ ಪ್ರಾಚೀನವೂ, ಪ್ರಸಿದ್ಧವೂ, ಪವಿತ್ರವೂ ಆದ ಒಂದು ಮಹಾಕ್ಷೇತ್ರವಷ್ಟೇ ಅಲ್ಲ ; ಅಪಾರ ಸೌಂದರ್ಯ ಸಂಪತ್ತಿನಿಂದ ಕಂಗೊಳಿಸುವ ಒಂದು ದಿವ್ಯ ನೆಲೆ : ಇಲ್ಲಿನ ಚಿತ್ತಾಕರ್ಷಕ ನಿಸರ್ಗ ರಮಣೀಯತೆ, ಬೆರಗುಗೊಳಿಸುವ ಪ್ರಕೃತಿವೈಚಿತ್ರ್ಯಗಳು, ವೈಭವಯುತವಾದ ಶ್ರೀ ಮಠ–ಇವು ಭಕ್ತಾದಿಗಳನ್ನು ನಾಡಿನ ನಾನಾ ಮೂಲೆಗಳಿಂದ ಆಹ್ವಾನಿಸುತ್ತವೆ. ಇಲ್ಲಿನ ಶ್ರೀ ಗಂಗಾಧರೇಶ್ವರನ ಭಕ್ತರು ಮೈಸೂರು ಸಂಸ್ಥಾನದಲ್ಲಿ ಮಾತ್ರವಲ್ಲದೆ, ಸೇಲಂ, ಕೊಯಮತ್ತೂರು, ಪಾಲಘಾಟು, ನೀಲಗಿರಿ, ಕೊಡಗು ಮೊದಲಾದ ಕಡೆಗಳಲ್ಲಿಯೂ ವಿಶೇಷವಾಗಿದ್ದಾರೆ. ಇದು ಪರಮ ಪವಿತ್ರ ಪುಣ್ಯ ಕ್ಷೇತ್ರವೆಂದೂ ಕಾಶಿಗಿಂತಲೂ ಶ್ರೇಷ್ಠವಾದುದೆಂದೂ ಸ್ಥಳಪುರಾಣ ಹೇಳುತ್ತದೆ.

"ಕ್ಷೇತ್ರಮೇಹತ್ ಪುಣ್ಯತಮಾಯ ಕಾಶ್ಯಾಶ್ಯಾಪ್ಯತಿರಿಚ್ಯತೆ"
"ಕ್ಷೇತ್ರ ಯೇ ತನ್ಮಹ ತ್ಪುಣ್ಯಂ ವಾರಾಣ ಸ್ಯಾಧಿಕಂ ಮತ"

ಶ್ರೀ ಆದಿಚುಂಚನಗಿರಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಮಾಯಸಂದ್ರದ ಮಾರ್ಗದಲ್ಲಿದೆ. ಅತ್ತಕಡೆಯಿಂದ ತುಮಕೂರು ಜಿಲ್ಲೆಯೂ ಶ್ರೀ ಗಿರಿಯ ಪದತಲವನ್ನು ಸಮೀಪಿಸಿಕೊಂಡಿದೆ. ಬೆಳ್ಳೂರಿನಿಂದ ಸುಮಾರು ಒಂದು ಮೈಲಿಯ ಅಂತರದಲ್ಲಿ ಮೂಡಣದಿಸೆಗೆ ಅಗಾಧವಾದ ಗಿರಿಶ್ರೇಣಿ ದಿಗ್ದಿಗಂತಗಳನ್ನು ಚಾಚಿ ನಿಂತಿರುವುದನ್ನು ಆ ಮಾರ್ಗವಾಗಿ ಪ್ರಯಾಣ ಮಾಡುವವರು ಕಾಣುತ್ತಾರೆ. ಈ ಬೆಟ್ಟದ ಸಾಲಿನಲ್ಲಿ ಒಂದೆರಡು ಮೈಲಿಗಳ ಮುಂದೆ ಸ್ವಲ್ಪ ಈಶಾನ್ಯಕ್ಕೆ ಉನ್ನತಾ

ಕಾರದ ಒಂದು ಸುನೀಲಗಿರಿ ಮುಗಿಲಿಗೆ ಮುಡಿಯನ್ನು ಚಾಚಿನಿಂತಿರುವುದನ್ನು ಕಾಣುವ ಕಣ್ಣು ತೃಪ್ತಿಪಟ್ಟೀತು! ಆ ಗಿರಿಯ ಧೀರ ಗಂಭೀರತಮ ಆಕಾರ, ಅದರ ಮೇಲೆ ಉರಿಬಿಸಿಲಿನಲ್ಲಿಯೂ ಎದ್ದುಕಾಣುವ ಸುಶಾಂತಿ. ಮನೋಲ್ಲಾಸವನ್ನುಂಟುಮಾಡುವ ಸನ್ನೀಲವರ್ಣ ಯಾವ ಮನಸ್ಸಿಗೆ ಹರ್ಷವನ್ನು ತಾರನು.

ಸುತ್ತೆತ್ತಲೂ ಈ ಗಿರೀಶ್ವರನ ವೈಗಾವಲಿಗೆ ನಿಂತಂತೆ ಹಬ್ಬಿ ಹರಡಿಕೊಂಡಿರುವ ಬೆಟ್ಟದೊಟ್ಟಲು; ಅನಂತ ಆಕಾಶದಲ್ಲಿ ಶ್ರೀ ಗಿರಿಯ ಮಧುರ ಭಾವನೆಗಳಂತೆ ಸತತವೂ ಸಾಗುವ ಅಭ್ರಾಳಿಗಳು—ನಡುವೆ ಬೃಹನ್ನಂದಿಯ ಮುಡಿಯಂತೆ ಗೋಚರಿಸುವ ಚುಂಚನ ಗಿರಿಯನ್ನು ತುಮಕೂರಿನ ಕಡೆ ಸಾರುವ ಯಾವ ಪಯಣಿಗ ಕಾಣನು!

ದಿವ್ಯ ದೃಶ್ಯ

ಚುಂಚನ ಹಳ್ಳಿಯ ಬಳಿ ಬಸ್ಸಿನಿಂದಿಳಿದು ಬಲಕ್ಕೆ ತಿರುಗಿ ಉದ್ದಕ್ಕೂ ಹಬ್ಬಿರುವ ಕರಿಯ ಕಲ್ಲಿನ ಗುಡ್ಡದ ನೆರೆಯಲ್ಲಿಯೇ ನಡೆದುಬಂದರೆ ಕಣ್ಣೆದುರಿನಲ್ಲಿಯೇ ವೈಭವಯುತವಾದ ಶ್ರೀ ಚುಂಚನಗಿರಿ ಮಹಾಕ್ಷೇತ್ರಭೂಮಿಯಿಂದ ಮುಗಿಲಿನವರೆಗೂ ಹಬ್ಬಿದಂತೆ ಕಾಣುವ ನೋಟ ಅಪೂರ್ವವಾದುದು. ಬಟ್ಟಬಯಲಿನಿಂದ ಆರಂಭವಾಗಿ ಗಿರಿಮಲೆಗಳು ಹೆಬ್ಬಂಡೆಗಳು, ನಡು ಬೆಟ್ಟದಲ್ಲಿ ಗೋಚರಿಸುವ ನವನಾಗರೀಕ ಕಟ್ಟಡಗಳು ಇನ್ನೂ ಮೇಲೆ ಎತ್ತರವಾದ ದೇಗುಲ, ಮತ್ತೆ ದೃಷ್ಟಿ ಮೇಲೆ ಹರಿದಂತೆ ಅಗಾಧವಾದ ಬಂಡೆಯೊಂದರ ಭಯಂಕರ ಅಕ್ಷಿಯಂತೆ ಕಾಣುವ ಸಿದ್ದೇಶ್ವರನ ಗವಿ, ದಕ್ಷಿಣೋ

ತ್ತರವಾದ ಎರಡು ಶಿಖರಗಳ ನೆತ್ತಿಯಲ್ಲಿ ನಿಲ್ಲಿಸಿರುವ ಗಳಿಗೆಗಲ್ಲು (ಆಕಾಶ ಭೈರವನೆಂದು ಕರೆಯುವ ವಾಡಿಕೆ ಉಂಟು.) ಚೋಳೂರು ಸ್ಥಂಭಗಳು (ಇವೆರಡು ಸ್ಥಂಭಗಳು ಸೂಜಿ ಮಾತ್ರದಲ್ಲಿ ಕಂಡೂ ಕಾಣದಂತೆ ಮುಗಿಲಿನಲ್ಲಿ ಲೀನವಾಗಿ ಗೋಚರಿಸುತ್ತವೆ)ಗಿರಿಯ ನೆರೆ ಹೊರೆಯಲ್ಲಿ ತಾನೆ ತಾನಾಗಿರುವ ಗಿಡಮರಗಳು–ಎಂಥ ಬಂಧುರ ದೃಶ್ಯಾವಳಿ! ಸೌಂದರ್ಯ ರಸ ವರ್ಷದಲ್ಲಿ ಮಿಂದು ಒಂದೆರಡು ಫರ್ಲಾಂಗುಗಳ ಮುಂದೆ ಹೋದರೆ ಸೊಂಪು ತಂಪಿನ ಅಮೃತ ಹಸ್ತವನ್ನು ಬರುವವರೆಡೆಗೆ ಚಾಚಿ ಆಹ್ವಾನಿಸುವ ಶ್ರೀ ಗಿರಿಯ ತಪ್ಪಲಿನ ನಿಬಿಡ ವೃಕ್ಷರಾಜಿ ಕೆಲಕಾಲ ಮೌನಮುಗ್ಧರನ್ನಾಗಿಸುತ್ತವೆ. ನಿರ್ಜೀವ ಬಂಡೆಗಳನ್ನಡರಿ ಅವಕ್ಕೊಂದು ಜೀವಕಳೆಯನ್ನು ತಂದಿರುವ ಆ ಅನಂತವಾದ ಹಸಿರಬಳ್ಳಿಗಳು–ಎತ್ತನೋಡಿದರೂ ಆಳೆತ್ತರಕ್ಕೆ ಬೆಳೆದು ಸೊಂಪೆಸೆಯುವ ತರುರಾಜಿಗಳು ಮುಂದುವರೆದಂತೆಲ್ಲ ಕಣ್ಣಿಗೆಸೆಯುವ ನಿರ್ಮಲ ಸರುತಟಾಕಗಳು—ನೆರಮನೆಯಲ್ಲಿಯೇ ಹೆಮ್ಮರಗಳ ಮಾತೃಮಮತೆಯಲ್ಲಿ ಪವಡಿಸಿ ಮೆಲುಕುವ ಗೋವುಗಳು, ತರುಮರಗಳ ಸಂದಿನಿಂದಲೇ–ನುಸುಳಿಬಂದು ಹರ್ಷವನ್ನು ತರುವ ದನಗಾಯಿಯ ಹರ್ಷಗೀತ–ಪಯಣಿಗ ಬೆರಗಾಗಿ ನಿಲ್ಲುತ್ತಾನೆ! ಇದ್ದಕ್ಕಿದ್ದಂತೆಯೇ 'ಕಿಯಾವ್ ಕಿಯಾವ್' ಎಂದು ದನಿಯೆತ್ತಿ ಕಿವಿನಿಮಿರಿಸುವ ನವಿಲುಲಿ ಸುತ್ತಲೂ ನೋಡುವಲ್ಲಿ ಹಿಂಡು ಹಿಂಡಾಗಿ ಬಂಡೆಯ ನೆರೆಯಲ್ಲಿ ಹಾಯುವ ಬಣ್ಣ ಬಣ್ಣದ ಅಸಂಖ್ಯಾತ ನವಿಲುಗಳು, ಮರಮರದ ಮಡಿಲಲ್ಲಿ ಆನಂದ ಪರವಶತೆಯಲ್ಲಿ ಮಗ್ನವಾಗಿ ಕುಕಿಲಿಡುವ ಖಗಾಳಿಗಳು, ಯಾವ ನಿರ್ಬಂಧವೂ ಇಲ್ಲ–ಇದು ನಮ್ಮ ರಾಜ್ಯ ಎಂದು ಸ್ವೇಚ್ಛೆಯಾಗಿ ಅಲೆಯುವ ವಾನರರು 'ಚಿಳೀಕ್–ಚಿಳೀಕ್' ಎಂದು ಚೀರಿ ದಂಗು ಬಡಿಸುವ ಅಳಿಲು

ಗಾಯಕರು–ಇನ್ನೂ ಮುಂದೆ ಸಾಗಿನಿಂತರೆ ವಿಶಾಲವಾದ ಸರುವೊಂದರಲ್ಲಿ ಅಪಾರವಾಗಿ ಅರಳಿನಿಂತ ಕೆಂದಾವರೆಯ ಪ್ರಸನ್ನವದನಗಳು—ತೇರು ವೀದಿಯ ಇಕ್ಕೆಲದಲ್ಲಿಯೂ ಸಾಲುಸಾಲಾಗಿ ನಿಂತಿರುವ ಪುರಾತನ ಮಂಟಪ ಗಳು–ಅಲ್ಲಲ್ಲೇ ಜಾತ್ರೆಯಕಾಲದ ಯಾತ್ರಾರ್ಥಿಗಳ ಸೌಲಭ್ಯಕ್ಕಾಗಿ ತೋಡಿಸಿರುವ ತಟಾಕಗಳು, ಗಿರಿಯ ನೆರೆಯನ್ನು ಸೇರಿದಂತೆಯೇ ಸ್ವರ್ಗಕ್ಕೇರಿರುವ ಮೆಟ್ಟಿಲುಗಳು–ಅಲ್ಲಿಂದ ಈಚೆಗೆ ಮತ್ತೊಮ್ಮೆ ಹಿಂದೆ ನೋಡಿದರೆ ಬಸವಣ್ಣನ ಮಂಟಪದವರೆಗೂ ವಿಶಾಲವಾಗಿ ಹಬ್ಬಿರುವ ಹಚ್ಚಹಸಿರ ಹುಲ್ಲುಹಾಸು! ಅಪೂರ್ವವೂ ಅಸಮಾನ್ಯವೂ ಆದ ತಪ್ಪಲಿನ ಸೌಂದರ್ಯದಿಂದ ಪುಳಕಿತನಾದ ಪಯಣಿಗ, ಹರ್ಷಚಿತ್ತದಿಂದ ಮೆಟ್ಟಿಲು ಗಳನ್ನೇರಿ ಶಿವದರ್ಶನಕ್ಕೆ ಹೊರಟರೆ........ಉನ್ನತವಾದ ಗಿರಿಯನ್ನೇರಲು ಅವನಿಗೆ ಆಯಾಸವೇತೋರದು.

ಹಸಿರು ಕಾನನ

ನಡುಬೆಟ್ಟದ ಶ್ರೀ ಮಠದಿಂದ ಮೇಲೆ ಶ್ರೀ ಗಂಗಾಧರೇಶ್ವರ ದೇವಾಲ ಯಕ್ಕೆ ಹೋಗಲು ಅಂದವಾದ ಮೆಟ್ಟಿಲುಗಳಿವೆ ನೂರಾರು ಮೆಟ್ಟಿಲುಗಳನ್ನು ಹತ್ತಿ ಹೋಗುವಾಗ ಅಲ್ಲಿಯೂ ಅಕ್ಕಪಕ್ಕದಲ್ಲಿ ದೊಡ್ಡ ದೊಡ್ಡ ವೃಕ್ಷಗಳು ಬೆಳೆದುಕೊಂಡು ಮೆಟ್ಟಿಲುಗಳಮೇಲೆ ಒಂದು ಹಸಿರ ಕಾವಣವನ್ನೇ ನಿರ್ಮಿ ಸಿವೆ. ಬೆಟ್ಟದ ಮೇಲೆಯೂ ಇಂಥ ಉನ್ನತ ವೃಕ್ಷಗಳು ಬೆಳೆದಿರುವುದು ಆಚ್ಚರಿಯೆ ಸರಿ. ಸ್ವಲ್ಪಮೇಲೆ ಹೋದರೆ ಬೃಹದಾಕಾರದ ಬಸವಣ್ಣನ ವಿಗ್ರಹ ವೊಂದನ್ನು ಬಂಡೆಯೊಂದರಮೇಲೆ ಕೆತ್ತಿರುವುದು ಬಲಪಾರ್ಶ್ವದಲ್ಲಿ ಕಾಣಿಸು

ತ್ತದೆ. ಅಲ್ಲಿಂದ ನೇರವಾಗಿ ಮೆಟ್ಟಲುಗಳನ್ನೇರಿ ಹೋದರೆ ಶ್ರೀ ಗಂಗಾಧರೇಶ್ವರನ ಭವ್ಯದೇಗುಲ ದೊರೆಯುತ್ತದೆ. ಬಹಳ ವಿಸ್ತಾರವಾದ ಈ ದೇವಾಲಯದಲ್ಲಿ ಆ ಗಂಗಾಧರೇಶ್ವರನ ಲಿಂಗ ಪ್ರತಿಷ್ಠೆಯಾಗಿದೆ. ವರ್ಷಂಪ್ರತಿ ಭಕ್ತಾದಿಗಳು ಅಸಂಖ್ಯಾತವಾಗಿ ಬಂದು ಪೂಜೆ ಸಲ್ಲಿಸಿ ಹೋಗುತ್ತಾರೆ.

ಆಕಾಶ ಭೈರವ

ಇಲ್ಲಿಂದ ಮೇಲೆಹೋದಂತೆ ಬೃಹದ್ ಬಂಡೆಯೊಂದರಲ್ಲಿ ನೈಸರ್ಗಿಕವಾದ ಗವಿಯೊಂದು ಏರ್ಪಟ್ಟು ಅಲ್ಲಿ ಶ್ರೀ ಸಿದ್ದೇಶ್ವರನ ಲಿಂಗ ಪ್ರತಿಷ್ಠೆ ಮಾಡಿದ್ದಾರೆ. ಕಲ್ಲುಗಳ ಸಂದುಗಳಲ್ಲಿ ಹಾದು, ಕಡಿದಾದ ಸ್ಥಳಗಳಲ್ಲಿ ಹತ್ತಿ ಇಲ್ಲಿಗೆ ಬರಲು ಸ್ವಲ್ಪ ಶ್ರಮವೇ ಆಗುತ್ತದೆ. ಇನ್ನು ಗಿರಿಯ ಎರಡು ಶಿಖರಗಳಾದ ಆಕಾಶಭೈರವ ಮತ್ತು ಚೋಳೂರು ಸ್ಥಂಭಗಳನ್ನು ಮುಟ್ಟಿ ಬರಲು ಸಾಹಸಿಗಳೇ ಆಗಬೇಕು. ಗಿರಿಯ ತುತ್ತ ತುದಿಯಲ್ಲಿ ಆಕಾಶ ಭೈರವಸ್ಥಂಭವನ್ನು ಸ್ಥಾಪಿಸಿದ್ದಾರೆ. ತುಂಬ ಅಪಾಯಕಾರಿಯಾದ ಬಂಡೆಗಳ ಮೇಲೆ, ಅತಿ ಕಡಿದಾದ ಪ್ರದೇಶದಲ್ಲಿ ಮೇಲೇರಿ ಬಂದರೆ ಮತ್ತೊಂದು ಎತ್ತರವಾದ ನಿಡುಬಂಡೆ ದೊರೆಯುತ್ತದೆ. ಇದರ ಬುಡದಲ್ಲಿ ಗಿರಿಯ ತಳವನ್ನು ತೋರುವ ಭಯಂಕರ ಪ್ರಪಾತಗಳು ಮೈ 'ಜುಂ' ಎನ್ನಿಸುತ್ತವೆ. ಇವುಗಳ ಅಡ್ಡಲಾಗಿ ಒಂದು ಹಾಯಿ ಬಂಡೆಯಿದೆ. ಅದರಲ್ಲಿ ಮೇಲೆ ನಿಂತು ಮೇಲಿನಿಂದ ಇಳಿಬಿದ್ದಿರುವ ಸರಪಳಿಯನ್ನು ಹಿಡಿದು ಮರ ಹತ್ತುವಂತೆ ಹತ್ತಾರು ಗಜಗಳನ್ನು ಏರಬೇಕು ಅಜಾಗರೂಕತೆಯಿಂದ ಕೈ ತಪ್ಪಿದರೆ ಮತ್ತೆ ಬದುಕಿಬರುವ ಸಂಭವವೇ ಇಲ್ಲ. ಶಿವರಾತ್ರಿ ಜಾತ್ರೆಗಳ ಕಾಲದಲ್ಲಿ

ನೂರಾರುಜನ ಬಂಡೆಯನ್ನು ಏರಿ ಆಕಾಶ ಭೈರವನ ಪೂಜೆಮಾಡಿ–ಹರಕೆಗಳನ್ನು ಸಲ್ಲಿಸಿ ಹೋಗುತ್ತಾರೆ. ಆದರೆ ಇದುವರೆಗೂ ಯಾರಿಗೂ ಯಾವ ವಿಧವಾದ ಅಪಾಯವೂ ಸಂಭವಿಸದಿರುವುದು ಆಶ್ಚರ್ಯದ ವಿಷಯವೇ ಸರಿ. ರಾತ್ರಿಯ ಕಾಲದಲ್ಲಿ ಇಲ್ಲಿಗೆ ಶ್ರವಣಬೆಳಗೊಳ, ಮೇಲುಕೋಟೆ ಚಾಮುಂಡಿಬೆಟ್ಟ ಮುಂತಾದುವುಗಳ ಮೇಲಿನ ಬೆಳಕು ಗೋಚರಿಸುವುದಾಗಿ ನೋಡಿದವರು ಹೇಳುತ್ತಾರೆ

ಇಷ್ಟು ಅಪಾಯಕಾರಕವಲ್ಲವಾದರೂ ಸ್ವಲ್ಪ ದುಸ್ಸಾಧ್ಯವಾದುದೇ ಎನಿಸಿಕೊಳ್ಳುವ ಚೋಳೂರ ಸ್ಥಂಭದೆಡೆಗೆ ಹೋಗಿಬರಲು ಧೈರ್ಯ ಸಾಹಸಗಳು ಬೇಕು. ನೆತ್ತಿಯ ನಡುವೆ ಅಗಾಧವಾದ ಕತ್ತಲಮಡುವಿನಂತಿರುವ ಗವಿಯೊಂದರಲ್ಲಿ ಶ್ರೀ ಕತ್ತಲ ಸೋಮೇಶ್ವರ ಲಿಂಗ ಪ್ರತಿಷ್ಠೆಯಾಗಿದೆ. ಇಲ್ಲಿನ ಕತ್ತಲೆಗಂಜಿ ಅನೇಕರು ಅಲ್ಲಿಗೆ ಹೋಗುವುದೇ ಇಲ್ಲ. ಆದಿಗಂಗಾಧರೇಶ್ವರ, ಚಂದ್ರಮೌಳೇಶ್ವರ, ಸೋಮೇಶ್ವರ, ಮಲ್ಲೇಶ್ವರ, ಗವಿಸಿದ್ಧೇಶ್ವರ ಮುಂತಾಗಿ ಈಶ್ವರನ ಪಂಚಪ್ರಾಣ ಲಿಂಗ ದರ್ಶನವೂ ಈ ಕ್ಷೇತ್ರದಲ್ಲಿ ದೊರೆಯುತ್ತದೆ.

ಮಠ, ದೇವಾಲಯ, ಸರೋವರಾದಿಗಳು ಮಧ್ಯಭಾಗದಲ್ಲಿವೆ. ಮಠದ ಆವರಣದಲ್ಲಿ ನಾಗಚಾವಡಿ, ಮಂಟಪ, ಭವ್ಯಭವನ, ಭೈರವನ ಗುಡಿ, ಶಿವಸಾಯುಜ್ಯವನ್ನು ಪಡೆದ ಪೀಠಾಧಿಕಾರಿಗಳ ಸಮಾಧಿಗಳು, ಶ್ರೀ ಮಠದ ನೆರೆಯಲ್ಲಿಯೇ ಮನೋಹರವಾದ ಒಂದು ಸರೋವರವೂ ಇಲ್ಲಿಯೇ ಇವೆ. ಅಲ್ಲದೆ ಅನೇಕ ಶಾಸನಗಳೂ, ವೀರಗಲ್ಲುಗಳೂ ಈ ಕ್ಷೇತ್ರದಲ್ಲಿ ದೊರೆಯುತ್ತವೆ.

ಇನ್ನೂ ಬೆಟ್ಟವನ್ನು ಸುತ್ತಿ ಒಮ್ಮೆ ನೋಡಿಬಂದರೆ ಹಿಂಬದಿಯಲ್ಲಿ 'ಮೇದರ ಗುಡ್ಡ' ಎಂಬಲ್ಲಿ ನಿಂತು ಕೂಗಿದರೆ ನಿರ್ದಿಷ್ಟವಾದೊಂದು

ಪ್ರದೇಶದಿಂದ ಕೇಳಿಬರುವ ಸ್ಪಷ್ಟವಾದ ಧ್ವನಿ ಮತ್ತೆಲ್ಲಿಯೂ ಕೇಳಿಬರದೆಂದು ಹೇಳುತ್ತಾರೆ. ಇಲ್ಲಿ ಶ್ರೀ ಗಂಗಾಧರನ ಅಸ್ತಿತ್ವವನ್ನು ಗುರುತಿಸಿದ ವೇದರವನೊಬ್ಬನು ಮಡಿದನೆಂದು ಪ್ರತೀತಿ. ಇನ್ನೊಂದು ಪಾರ್ಶ್ವದಲ್ಲಿ ಅತ್ಯಂತ ಎತ್ತರವಾದ ನಾಗರ ಹೆಡೆಯಾಕಾರದ ಒಂದು ಬಂಡೆ ನೋಡುವವರಿಗೆ ಭಯವನ್ನುಂಟುಮಾಡುವಂತಿದೆ. ಹೀಗೆಯೇ ಆಶ್ಚರ್ಯಕರವಾದ ಅಜ್ಜಿಯ ಗುಡ್ಡೆ, ಸೀಳುಬಂಡೆ ತಪೋಗುಹೆ ಮುಂತಾದುವೂ ಇವೆ.

ಪ್ರಕೃತಿ ವೈಚಿತ್ರ್ಯಗಳಿಂದಲೂ, ನಿಸರ್ಗ ಸಂಪತ್ತಿನಿಂದಲೂ,ಮಹತ್ವಪೂರಿತವಾಗಿಯೂ, ಅತ್ಯಂತ ಶ್ರೇಷ್ಠವಾದ ಪುಣ್ಯಸ್ಥಳವೆಂದು ಹೆಸರು ಪಡೆದುದಾಗಿಯೂ ಇರುವ ಚುಂಚನಗಿರಿಯನ್ನು ಒಮ್ಮೆಯಲ್ಲ ಹತ್ತು ಬಾರಿ ಸಂದರ್ಶಿಸಿ ಬಂದರೂ ತೃಪ್ತಿಯಾಗದು !

—ಪ್ರಜಾಮತ ದೀಪಾವಳಿ ವಿಶೇಷಾಂಕ : ೧೯೫೫





ಶ್ರೀ ಆದಿ ಚುಂಚನಗಿರಿ

ಜಾನಪದ ಸಾಹಿತ್ಯ ಮಾನವ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ತಲೆಮಾರಿನಿಂದ ತಲೆಮಾರಿಗೆ ಮಾನವ ಸಮಾಜವು ದಾಟಿ ಬಂದಿರುವ ಸಂಪ್ರದಾಯಗಳು ಹಾಗೂ ವಿಧಿ ನಿಷೇಧಗಳ ವಾಹಕ ಜಾನಪದ ಸಾಹಿತ್ಯ. ಪ್ರಬಲವಾದ ರಾಗಭಾವಗಳು ಈ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿವೆ, ಆದುದರಿಂದಲೇ ಅದು ಅಮರವಾಗಿರುವುದು. ಎಲ್ಲ ಕಾಲಗಳ ಎಲ್ಲ ಮನುಷ್ಯ ಸಮಾಜಗಳಲ್ಲಿಯೂ ಅದು ಹೃದಯಕ್ಕೆ ಸಮೀಪವಾದ ಸ್ಥಾನವೊಂದನ್ನು ಪಡೆದಿದೆ. ಪ್ರಪಂಚದಾದ್ಯಂತ ಜಾನಪದ ಸಾಹಿತ್ಯವು ವಿವಿಧ ಪ್ರಕಾರದ ಸಮಾಜಗಳಿಂದ ಹೊರಹೊಮ್ಮಿದರೂ, ಅದರಲ್ಲಿ ವ್ಯಕ್ತವಾಗಿರುವ ವಸ್ತು ಒಂದೇ ಆಗಿರುವುದು ಕೌತುಕದ ವಿಚಾರ. ಇದರಿಂದ, ಮಾನವ ಸ್ವಭಾವವು ಏಕರೀತಿಯದೆಂಬುದು ಸಿದ್ಧವಾಗುತ್ತದೆ.

—ಶ್ರೀ ಉಮಾಗುಹ

('Folk Tales of the Malwa Bhil' ಲೇಖನದಿಂದ)

ಬಿಟ್ಟು ಚೆಲ್ಲಿದ ಬೆಳದಿಂಗಳು ಮತ್ತು ಆನಂದದಿಂದ ಕುಣಿಯುವ ಮಯೂರನ ಮನಮೋಹಕ ದೃಶ್ಯವನ್ನು ನೋಡಬೇಕೆಂದು ಯಾವ ವಿಹಾರಿಯಾದರೂ ಅಪೇಕ್ಷಿಸಿದರೆ ಅವನು 'ಆದಿ ಚುಂಚನಗಿರಿ'ಗೆ ಬರಬೇಕು. ಈ ಸ್ಥಳವು ಮೈಸೂರು ರಾಜ್ಯದ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಇದೆ. ಈ ವಿಹಾರಿ ಸ್ಥಳವು ಸೃಷ್ಟಿಸೌಂದರ್ಯದ ತವರೂರು. ಇದು ಒಂದು ಸಾಧಾರಣ ಎತ್ತರವಾದ ಬೆಟ್ಟವಾದರೂ ಇದನ್ನು ಹತ್ತಲು ವಿಹಾರಿಯು ಸಾಕಷ್ಟು ಶ್ರಮವಹಿಸಬೇಕಾಗುತ್ತದೆ. ಕೆಲವು ಕಡೆಗೆ ಅದು ಅತಿಯಾಗಿ ಕಡಿದಾಗಿದೆ. ಸಮುದ್ರಮಟ್ಟದಿಂದ ಈ ಗಿರಿಯ ಶಿಖರವು ೩,೩೨೧ ಅಡಿ ಎತ್ತರವಿದೆ.

ಶಿಖರವನ್ನು ಏರಲು ಅನೇಕ ಮಾರ್ಗಗಳು ಇವೆ. ಈ ಸ್ಥಳವು ಮಂಡ್ಯ ಮತ್ತು ತುಮಕೂರು ಜಿಲ್ಲೆಗಳ ಗಡಿ ಪ್ರದೇಶದಲ್ಲಿದೆ. ಆದಿ ಚುಂಚನಗಿರಿಯು ಮೇಲುಕೋಟೆ ಮತ್ತು ಶ್ರವಣಬೆಳಗೊಳ ಈ ಮೂರು ಸ್ಥಳಗಳೂ ಒಂದು ತ್ರಿಕೋನದ ಮೂರು ಬಿಂದುಗಳಾಗಿವೆ. ಆದಿ ಚುಂಚನಗಿರಿ ಬೆಟ್ಟವನ್ನು ಏರಿ ಸುತ್ತಲೂ ಒಮ್ಮೆ ನೋಡಿದರೆ ಪ್ರವಾಸಿಗನನ್ನು ಮುಗ್ಧಗೊಳಿಸುವ ವನಸಿರಿಯು ಕಣ್ಣಿಗೆ ಬೀಳುವುದು. ಇಲ್ಲಿಂದ ಶ್ರವಣಬೆಳಗೊಳದ ಗೊಮ್ಮಟೇಶ್ವರನ ಭವ್ಯವಿಗ್ರಹವು ಮತ್ತು ಮೇಲುಕೋಟೆ ಶಿಖರದಲ್ಲಿರುವ ನರಸಿಂಹಸ್ವಾಮಿ ದೇವಸ್ಥಾನದ ಗೋಪುರದ ಮೇಲಿನ ನೀಲಿವರ್ಣದ ದೀಪವು ಗೋಚರವಾಗುವುದು. ಈ ಸ್ಥಳದ ಸುತ್ತುಮುತ್ತಲಿನ ಪ್ರಕೃತಿಯು ಗುಡ್ಡಗಾಡಿನದಾಗಿರುವುದರಿಂದ ಇವುಗಳನ್ನು ನೋಡಿದರೆ ಯಾರಿಗಾದರೂ ಸಹಜವಾಗಿ ಹಂಪೆಯು ನೆನಪಿಗೆ ಬರುವದು.

ವಿಹಾರಿಗಳು ಆದಿ ಚುಂಚನಗಿರಿಯಿಂದ ಸುಮಾರು ೬ ಮೈಲು ಅಂತರದ ಮೇಲಿರುವ ನೆಲ್ಲಿಗೇರಿಯಲ್ಲಿಯ ಪ್ರವಾಸಿ ಮಂದಿರದಲ್ಲಿ ತಂಗಬಹುದು.

ಆದಿ ಚುಂಚನಗಿರಿಯು ಒಂದು ಪವಿತ್ರಸ್ಥಳ; ಮತ್ತು ಇದು ಯಾತ್ರಾಸ್ಥಳ.

ಈ ಬೆಟ್ಟದ ಬಗ್ಗೆ ಒಂದು ಸ್ವಾರಸ್ಯಮಯವಾದ ದಂತ ಕತೆ ಇದೆ. ಸ್ಕಾಂದ ಪುರಾಣದಲ್ಲಿ ಒಂದೆಡೆಗೆ ಹೀಗೆ ಹೇಳಿದೆ. ಶಿವಪಾರ್ವತಿಯರ ವಿವಾಹವಾದ ನಂತರ ನಾರದನು ವಿಂಧ್ಯರಾಜನ ಬಳಿ ಬಂದನಂತೆ. ಪಾರ್ವತಿಯ ವಿವಾಹದ ಕಾಲಕ್ಕೆ ಎಲ್ಲರನ್ನೂ ಆಮಂತ್ರಿಸಿದ ಹಿಮರಾಜನು ವಿಂಧ್ಯರಾಜನನ್ನು ಬಿಟ್ಟುದು ಅಪಮಾನಕರವೆಂದು ನಾರದನು ವಿಂಧ್ಯರಾಜನಿಗೆ ಹೇಳಿದನು. ಇದರಿಂದ ಅವನು ಕುಪಿತನಾದನು. ಹಿಮರಾಜನಿಗೆ ಆಹ್ವಾನ ಕೊಡಬೇಕೆಂದು ವಿಂಧ್ಯರಾಜನು ಆಕಾಶದತ್ತ ಅಸಾಧ್ಯವಾಗಿ ಬೆಳೆಯಲಾರಂಭಿಸಿದನು. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಾಗದಾಯಿತು. ಎಲ್ಲರೂ ಚಿಂತೆಗೊಳಗಾದರು. ಇದಕ್ಕೆ ಉಪಾಯಮಾಡಬೇಕೆಂದು 'ಅಗಸ್ತ್ಯ' ಋಷಿಯು ತನ್ನ ಪತ್ನಿ ಲೋಪಾಮುದ್ರೆಯೊಡನೆ ಇಲ್ಲಿಗೆ ಬಂದನು. ಆಗ ಮಧ್ಯಾಹ್ನದ ಸಮಯವಾಗಿತ್ತು. ಆದರೂ ವಿಂಧ್ಯರಾಜನು ಋಷಿಗೆ ಎಲ್ಲ ಬಗೆಯ ಆದರಾತಿಥ್ಯಗಳನ್ನು ಮಾಡಿದನು. ಕೊನೆಗೆ ಗೌರವಾರ್ಪಣ ಮಾಡಲು ನಮ್ರನಾಗಿ ಬಾಗಿದನು. ಆಗ ಅಗಸ್ತ್ಯ ಋಷಿಯು ವಿಂಧ್ಯರಾಜನು ತಾನು ಬರುವವರೆಗೆ ಹಾಗೆಯೇ ಇರಬೇಕೆಂದು ಆಜ್ಞಾಪಿಸಿದನು. ಗುರುಗಳ ಆಜ್ಞೆಯನ್ನು ವಿಂಧ್ಯರಾಜನು ಶಿರಸಾವಹಿಸಿದನು. ಆದರೆ ಅಗಸ್ತ್ಯಋಷಿಯು ಕೊನೆಗೂ ಬರಲಿಲ್ಲ. ಇದರಿಂದ ವಿಂಧ್ಯರಾಜನು ತನ್ನ ತಲೆಯನ್ನು ಎಂದಿಗೂ ಮೇಲಕ್ಕೆ ಎತ್ತಲಿಲ್ಲ. ನಂತರ

ಅಗಸ್ತ್ಯನು ಶಿವನನ್ನು ಕುರಿತು ಘೋರ ತಪಸ್ಸನ್ನು ಕೈಕೊಂಡನು. ಶಿವನು ಪಾರ್ವತಿಯೊಡನೆ ಆವನಿಗೆ ಪ್ರತ್ಯಕ್ಷನಾದನು. ಮೆಚ್ಚಿದ ಶಿವನು ಅಗಸ್ತ್ಯನನ್ನು ಪ್ರೀತಿಯಿಂದ ಅಪ್ಪಿಕೊಂಡು ಆವನನ್ನು ತನ್ನ ತೊಡೆಯಮೇಲೆ ಕೂಡ್ರಿಸಿಕೊಂಡನು. ಆದರೆ ಅಗಸ್ತ್ಯಋಷಿಯ ಪತ್ನಿಯಾದ ಲೋಪಾಮುದ್ರೆಯೂ ದೂರದಲ್ಲಿ ನಿಂತಳು. ಶಿವನಿಗೆ ಅವಳ ಮೇಲೆ ಕರುಣೆ ಬಂದು ಅವಳನ್ನೂ ಒಂದೇ ಸಮನೆ ನೋಡಲಾರಂಭಿಸಿದನು. ಪಕ್ಕದಲ್ಲಿ ಕುಳಿತ ಪಾರ್ವತಿಯು ಇದನ್ನು ಕಂಡು ಅಸೂಯೆಗೊಳಗಾದಳು.

ತಾನು ಋಷಿಗಳ ದೇವನೆಂದೂ ಮತ್ತು ಸಾಧಾರಣವಾದ ಲೈಂಗಿಕ ಇಚ್ಛೆಗಳಿಗೆ ಒಳಪಡುವವನಲ್ಲವೆಂದೂ ಪಾರ್ವತಿಗೆ ಸಿದ್ಧಮಾಡಲು ಶಿವನು ಘೋರ ತಪಸ್ಸನ್ನು ಕೈಕೊಂಡನು. ಅನೇಕ ಕಾಲ ಹೀಗೆಯೇ ಗತಿಸಿತು. ಎಲ್ಲೆಡೆಯಲ್ಲಿಯೂ ಶಾಂತಿ ನೆಲಸಿತು. ಕೆಲಕಾಲದ ನಂತರ ಶಿವನು ಶಾಂತಿ ಸಮಾಧಿಯನ್ನು ಭಂಗಗೊಳಿಸಿ ತನ್ನ ಕಮಂಡಲದಿಂದ 'ಸಿದ್ಧಯೋಗಿ' ಎಂಬ ಋಷಿಯನ್ನು ನಿರ್ಮಿಸಿದನು. 'ಪಂಚಪ್ರಾಣ ಲಿಂಗ'ದಂತೆ ಕಾಣುವ ಸ್ಥಳದಲ್ಲಿ ಹೋಗಿ ನೀನು ನೆಲಸೆಂದು ಶಿವನು ಸಿದ್ಧಯೋಗಿಗೆ ಆಜ್ಞಾಪಿಸಿದನು ಅದರಂತೆ ಸಿದ್ಧಯೋಗಿಯು ಬಂದು ನೆಲಸಿದನು. ಇದು ಬೇರೆ ಯಾವುದೂ ಅಲ್ಲ ; ಆದಿ ಚುಂಚನಗಿರಿಯ ಶಿಖರ !

ಇನ್ನು ಚುಂಚನಗಿರಿ ಎಂಬ ಹೆಸರು ಹೇಗೆ ಉದ್ಭವಿಸಿತೆಂಬುದನ್ನು ನೋಡೋಣ ? ಅದಕ್ಕೂ ಸಹ ಒಂದು ಪೌರಾಣಿಕ ಕಥೆ ಇದೆ.

ಹಿಂದಕ್ಕೆ ಈ ಸ್ಥಳದಲ್ಲಿ 'ಚುಂಚ' ಎಂಬ ರಾಕ್ಷಸನು ವಾಸಿಸುತ್ತಿದ್ದನು. ಅವನಿಂದ ಜನರಿಗೆ ಉಪದ್ರವ ಬಹಳವಾಯಿತು. ಈ ದೈತ್ಯನನ್ನು ಸಂಹರಿಸಲು ಯಾರಿಂದಲೂ ಸಾಧ್ಯವಾಗದಾಯಿತು. ಕೊನೆಗೆ ಶಿವನು

ಬಂದು ಅವನ ಮರ್ದನಮಾಡಿ, ಕೆಲವು ಕಾಲ ಇಲ್ಲಿ ತಪಸ್ಸನ್ನು ಆಚರಿಸುತ್ತಿದ್ದನು. ಶಿವನು ತಪಸ್ಸಿಗೆ ಕುಳಿತ ಸ್ಥಳಕ್ಕೆ 'ಉರಿಗದ್ದಿಗೆ' ಎಂದು ಅನ್ನುತ್ತಾರೆ. ಇಂದಿಗೂ ಆ ಸ್ಥಳವು ಪವಿತ್ರವೆಂದು ಬಗೆದು ಜನರು ಪೂಜಿಸುತ್ತಾರೆ. ಸೀತೆಯನ್ನು ಕಳೆದುಕೊಂಡ ಶ್ರೀರಾಮಚಂದ್ರನು ಅಲ್ಲಿ ಇಲ್ಲಿ ಹುಡುಕುತ್ತ ಶಿವನು ತಪಸ್ಸಿಗೆ ಕುಳಿತ ಸ್ಥಳಕ್ಕೆ ಬಂದನು. ನಂತರ ಶಿವನು ಆ ಸ್ಥಳವನ್ನು ಶ್ರೀರಾಮಚಂದ್ರನ ವಶಕ್ಕೆಕೊಟ್ಟು 'ಗಜಾರಣ್ಯ' ಎಂಬ ಸ್ಥಳಕ್ಕೆ ಹೊರಟು ಹೋದನಂತೆ, ಎಂದು ದಂತ ಕಥೆ ಮುಂದುವರಿಯುತ್ತದೆ.

ಈ ಗಿರಿಯ ಮೇಲೆ ಮತ್ತು ಅದರ ಸುತ್ತಮುತ್ತಲು ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಇವುಗಳನ್ನು ನೋಡದೆ ಯಾವ ವಿಹಾರಿಯು ಬರಲು ಸಾಧ್ಯವಿಲ್ಲ. ಚುಂಚನಹಳ್ಳಿಯ ದೆಸೆಯಿಂದ ವಿಹಾರಿಯು ಬೆಟ್ಟದ ಕಡೆಗೆ ಬಂದರೆ ಅವನು ಮಾರ್ಗದ ಎರಡೂ ಬದಿಗೆ ದಟ್ಟವಾಗಿ ಬೆಳೆದ ಗಿಡಗಳನ್ನು ಕಾಣುವನು. ಈ ಮಾರ್ಗಕ್ಕೆ 'ರಥಬೀದಿ' ಎಂದು ಅನ್ನುತ್ತಾರೆ. ಹೋಳಿ ಹುಣ್ಣಿಮೆಗೆ ಇಲ್ಲಿ ನಡೆಯುವ ಭೈರವನ ರಥೋತ್ಸವಕ್ಕೆ ಸಾವಿರಾರು ಜನರು ಕಲೆಯುತ್ತಾರೆ. ಈ ದೇವರಿಗೆ ಇತ್ತೀಚಿಗೆ ಒಂದು ಸುಂದರವಾದ ಕಟ್ಟಿಗೆಯ ರಥವನ್ನು ಕಟ್ಟಿದ್ದಾರೆ. ಇದಕ್ಕೆ ಕಲ್ಲಿನ ಗಾಲಿಗಳಿವೆ. ಮತ್ತು ಎಲ್ಲ ಭಾಗಗಳಲ್ಲಿ ನಮ್ಮ ಪೌರಾಣಿಕ ದೇವ-ದೇವತೆಗಳ ವಿಗ್ರಹಗಳನ್ನು ಕೆತ್ತಿದ್ದಾರೆ. ಸ್ವಲ್ಪೇ ಅಂತರದ ಮೇಲೆ ಒಂದು ಸುಂದರ ಕಮಲ ಸರೋವರವಿದೆ.

ಬೆಟ್ಟವನ್ನು ಹತ್ತಿ ಹೋಗಲಾಗಿ ವಿಶಾಲವಾದ ಹಾಸುಗಲ್ಲಿನ ಮೇಲೆ ಆದಿ ಚುಂಚನಗಿರಿ ಮಠವು ಕಾಣುವುದು. ಸುತ್ತಮುತ್ತಲಿನ ಗಗನ

ಚುಂಬಿತ ಗಿಡಗಳು ದಣಿದ ಯಾತ್ರಿಕನಿಗೆ ನೆರಳನ್ನು ಹಾಗು ತಂಪನ್ನು ನೀಡುವವು.

ಮಠದ ಬಲಗಡೆ ಗದ್ದುಗೆಗಳಿವೆ. ಇವು ಈ ಮಠದ ಹಿಂದಿನ ಗುರುಗಳ ಸಮಾಧಿಗಳೆಂದು ಸ್ಥಳಿಕರು ಹೇಳುವರು. ಒಟ್ಟಿಗೆ ಹನ್ನೆರಡು ಮಂಟಪಗಳಿದ್ದು ಅವುಗಳಲ್ಲಿ ಈ ಗದ್ದುಗೆಗಳಿವೆ.

ಮಠದ ಎಡಗಡೆಗೆ ಭೈರವನ ವಿಗ್ರಹವಿದೆ. ಇದಕ್ಕೆ 'ಬಾಗಿಲು ಭೈರವ' ಎಂದೂ ಕರೆಯುವರು. ಒಳಗೆ ಪ್ರವೇಶ ಮಾಡುವಾಗ ಯಾತ್ರಿಕನಿಗೆ ಇದು ಬಾಗಿಲಿಗೆ ಹತ್ತುವದರಿಂದ ಬಹುಶಃ ಇದಕ್ಕೆ ಹಾಗೆ ಅನ್ನುತ್ತಿರಬಹುದು. ಕರಿಯ ಕಲ್ಲಿನ ವಿಗ್ರಹವವು ಕಾಂತಿಯುತವಾಗಿದೆ. ಈ ವಿಗ್ರಹದ ಎಡಕ್ಕೆ 'ಮಲ್ಲಮ್ಮ' ದೇವತೆಯ ವಿಗ್ರವಿದೆ.

ಮಠದಲ್ಲಿ ಪ್ರವೇಶ ಮಾಡಲಾಗಿ ಬಲಗಡೆಗೆ ಲೋಹದ ಒಂದು ಭವ್ಯ ಸಿಂಹಾಸನವನ್ನು ನಾವು ಕಾಣುತ್ತೇವೆ. ಸಿಂಹಾಸನದ ಎದುರು 'ಉರಿ ಗದ್ದಿಗೆ' ಇದೆ. ಈ ಪವಿತ್ರ ಗದ್ದಿಗೆಯ ಕೆಳಗೆ ಉಜ್ವಲ ಜ್ವಾಲೆ ಇರುವದರಿಂದ ಇದರ ಮೇಲೆ ಕೂಡ್ರಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಮಹಾ ಶಿವರಾತ್ರಿಯಂಥ ಕೆಲ ವಿಶಿಷ್ಟ ಸಂದರ್ಭಗಳಲ್ಲಿ ಹಿರಿಯ ಸ್ವಾಮಿಗಳು ಪೀಠದಮೇಲೆ ಕುಳಿತು ಭಕ್ತರಿಗೆ ಆಶಿರ್ವಾದ ಮಾಡುತ್ತಾರೆ. ಉರಿಗದ್ದಿಗೆಯ ಹಿಂದುಗಡೆ 'ಚಂದ್ರಮೌಳೇಶ್ವರ'ನ ವಿಗ್ರಹವಿದೆ. ಇದು ಕತ್ತಲೆಯಲ್ಲಿರುವದರಿಂದ ಯಾತ್ರಿಕರಿಗೆ ಇದು ಸಹಜವಾಗಿ ಕಾಣುವುದಿಲ್ಲ. ಉರಿಗದ್ದಿಗೆಯ ಎದುರು 'ನಾಗಚಾವಡಿ' ಎಂಬ ವಿಶಾಲ ಪೌಳಿ ಇದೆ. ಪ್ರವಾಸಿಕರು ಕೆಲವು ಕಾಲ ಇಲ್ಲಿ ತಂಗಬಹುದು. ಮುಂದಕ್ಕೆ ಹೋದನಂತರ 'ತಪೋಗುಹೆ' ಕಾಣುವುದು.

ಇಲ್ಲಿಂದ ಸ್ವಲ್ಪ ಮುಂದಕ್ಕೆ ಹೋಗಲಾಗಿ ಅಲ್ಲಿ ಒಂದು ಬಸವಣ್ಣನ ವಿಗ್ರಹವಿದೆ. ಇದಕ್ಕೆ 'ಗುಂಡಿನ ಬಸವಣ್ಣ'ನೆನ್ನುತ್ತಾರೆ.

ಕೆಲವೊಂದು ಮೆಟ್ಟಿಲುಗಳನ್ನು ಏರಿ ಬಂದೊಡನೆ ಅಲ್ಲಿ 'ಗಂಗಾಧರೇಶ್ವರ' ದೇವಾಲಯವು ಕಾಣುವುದು. ಅದೊಂದು ಪುರಾತನ ದೇವಾಲಯ; ನೋಡಲು ರಮಣೀಯವಾಗಿದೆ. ವಿಹಾರಿಯು ಸ್ವಲ್ಪ ಗಟ್ಟಿಗನಾಗಿದ್ದರೆ ಆವನು ಇನ್ನೂ ಮುಂದೆ ಹೋಗಬಹುದು. ಆದರೆ ಮಾರ್ಗವು ಮಾತ್ರ ಶ್ರಮದಾಯಕವಾಗಿದೆ. ಗಂಗಾಧರೇಶ್ವರ ದೇವಾಲಯದ ಶಿಖರವನ್ನು ಮುಟ್ಟಬೇಕಾದರೆ ಮಾರ್ಗವು ಕಲ್ಲುಮಯವಾಗಿದ್ದು ಮಳೆಗಾಲದಲ್ಲಿ ಜಾರುವಂಥದಾಗಿದೆ.

ಇಲ್ಲಿಂದ ಸ್ವಲ್ಪಮುಂದೆ ಸಾಗಲಾಗಿ 'ಗವಿಸಿದ್ಧೇಶ್ವರ' ಎಂಬ ಗುಹೆ ಕಾಣುವುದು. ಗುಹೆಯ ಮಧ್ಯದಲ್ಲಿ ಒಂದು ಬಸವಣ್ಣ ಹಾಗು ಅವರ ಮುಂದೆ ಶಿವಲಿಂಗವು ಇದೆ. ಈ ಸ್ಥಳದಲ್ಲಿ ಸೃಷ್ಟಿ ಸೌಂದರ್ಯವು ಮೋಹಕವಾಗಿದೆ. ಹವೆಯು ತಂಪಾಗಿದ್ದು ಆಲ್ಹಾದಕರವಾಗಿದೆ. 'ಕತ್ತಲೆ ಸೋಮೇಶ್ವರ ಗುಹೆ'ಯು ಸಹ ಇಲ್ಲಿಯೇ ಸಮೀಪದಲ್ಲಿದೆ. ಪಂಚಲಿಂಗಗಳಲ್ಲಿ ಇದೊಂದಾಗಿದ್ದು ಮಿಕ್ಕವು ಚಂದ್ರಮೌಳೀಶ್ವರ, ಮಲ್ಲೇಶ್ವರ, ಗಂಗಾಧರೇಶ್ವರ ಮತ್ತು ಗವಿಸಿದ್ಧೇಶ್ವರಗಳೆಲ್ಲಿವೆ. ಮುಂದೆ ಹತ್ತಿ ಹೋದರೆ ಎಡಗಡೆಯ ದಾರಿಗಳಿಗೆ ಗಳಿಗೆ ಗಲ್ಲು ಶಿಖರಕ್ಕೆ ಸಾಗುತ್ತದೆ. ಗಳಿಗೆ ಗಲ್ಲು ಶಿಖರವನ್ನು ಏರುವುದು ಮಾತ್ರ ಸಾಮಾನ್ಯರಿಗೆ ಅಸಾಧ್ಯವಾದುದು. ಕುದುರೆ ಬೆನ್ನಿನಂತಿರುವ ಕಲ್ಲನ್ನು ಹಾದು ಅಲ್ಲಿಗೆ ಹೋಗಬೇಕು. ಶಿಖರವನ್ನು ಏರಲು ಮೆಟ್ಟಿಲುಗಳನ್ನು ಮಾಡಿದ್ದಾರಲ್ಲದೆ ಕಾಲುಜಾರುವ ಸ್ಥಳಗಳಲ್ಲಿ ಕಬ್ಬಿಣದ ಸರಪಣಿಗಳನ್ನು ಬಿಟ್ಟಿದ್ದಾರೆ. ಈ ಬಂಡಿಗಲ್ಲು ತಳದಿಂದ ಸುಮಾರು ೧೨೫

ಅಡಿಗಳ ಎತ್ತರದಮೇಲೆ ಇದೆ. ಎಡಬದಿಗೆ ವಿವಿದ ಹೆಸರುಗಳ ಗುಹೆಗಳಿವೆ. ಈ ಶಿಖರದಲ್ಲಿ ಬಲಬದಿಗೆ 'ಚೇಳೂರು ಕಂಬ'ವಿದೆ ಅನೇಕ ದಿಕ್ಕುಗಳಿಂದ ಇದನ್ನು ನಾವು ನೋಡಬಹುದು. ಇದರ ಬಗ್ಗೆ ಒಂದು ಕಥೆ ಹೀಗಿದೆ. ಪೂರ್ವಕಾಲದಲ್ಲಿ ಅರ್ಚಕರು ಚೇಳೂರು ಎಂಬ ಹಳ್ಳಿಯಿಂದ ರಥೋತ್ಸವದ ಸಮಯಕ್ಕೆ ಬರುತಿದ್ದರಂತೆ. ಇದು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಒಂದು ಗ್ರಾಮ. ಉತ್ಸವದ ಸಮಯಕ್ಕೆ ಈ ಕಲ್ಲಿನ ಕಂಬದ ಮೇಲೆ ದೀಪವನ್ನು ಹಚ್ಚುತಿದ್ದರಂತೆ. ಆಗಿನ ಸಂಪ್ರದಾಯದ ಪ್ರಕಾರ ಈ ದೀಪದ ಪ್ರತಿಬಿಂಬವು ಚೇಳೂರು ಗ್ರಾಮದ ಕೆರೆಯಲ್ಲಿ ಮೂಡುತ್ತಲಿತ್ತು. ಪ್ರತಿಬಿಂಬವು ಕಾಣುವವರೆಗೆ ಆ ಗ್ರಾಮದಲ್ಲಿ ಯಾರೂ ಆಹಾರವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಇಂದಿನವರೆಗೂ ಅವರು ಅದೇ ಸಂಪ್ರದಾಯವನ್ನು ನಡೆಸಿಕೊಂಡು ಬಂದಿದ್ದಾರೆ.

ಮಠದ ಮುಖ್ಯ ಕಟ್ಟಡದಿಂದ ಒಂದು ಫರ್ಲಾಂಗಿನಷ್ಟೇ ಅಂತರದಲ್ಲಿ 'ಬಿಂದು ಸರೋವರ'ನೆಂಬ ಒಂದು ದೊಡ್ಡ ಕೆರೆಯಿದೆ. ಶಿವನ ಜಡೆಯಿಂದ ಬಿದ್ದ ಒಂದು ಹನಿಯಿಂದ ಈ ಸರೋವರ ನಿರ್ಮಿತವಾಗಿದೆಂದು ದಂತ ಕಥೆಯಿದ್ದು ಈ ಪವಿತ್ರ ತೀರ್ಥದಲ್ಲಿ ಈ ಗಿರಿಗೆ ಬರುವ ಯಾತ್ರಿಕರೆಲ್ಲ ಮಿಾಯುತ್ತಾರೆ.

ಬೆಟ್ಟದ ಹಿಂಬದಿಗೆ, ಬೇಲದಕೆರೆ ಗ್ರಾಮದ ದಾರಿಯಲ್ಲಿ ಹೆಡೆಯೆತ್ತಿದ ಸರ್ಪದಾಕಾರದಲ್ಲಿರುವ 'ನಾಗರಕಲ್ಲು' ಇದೆ. ಇಲ್ಲಿಂದ ಎಡಕ್ಕೆ ತಿರುಗಿ ಕಾಲುದಾರಿಯಿಂದ ಮುಂದೆ ಸಾಗಿದರೆ 'ಮೇದಾರ ಗುಡ್ಡ' ಎಂಬ ಸ್ಥಳ ಸಿಕ್ಕುತ್ತದೆ. ಈ ಸ್ಥಳದಿಂದ ಪಶ್ಚಿಮಾಭಿಮುಖವಾಗಿ ಸಾಗಿದಾಗ, ಗಾಳಿ ಅನುಕೂಲವಾಗಿದ್ದರೆ ಪ್ರವಾಸಿಕರಿಗೆ ಅಚ್ಚರಿಯನ್ನುಂಟುಮಾಡುವಂತಹ

ಪ್ರತಿಧ್ವನಿ ಕೇಳಲು ದೊರೆಯುತ್ತದೆ. ದೂರದ ಬಂಡೆಗಳಲ್ಲಿ ಯಾರೋ ಅಡಗಿಕೊಂಡು ಸ್ಪಷ್ಟವಾಗಿ ಮರುದನಿಗೊಡುವಂತೆ ಬರುವ ಪ್ರತಿಧ್ವನಿಯ ಅಚ್ಚರಿಯನ್ನು ಪರೀಕ್ಷಿಸಲು ಯಾರು ಮರೆಯುವಂತಿಲ್ಲ.

ಹಾಗೆಯೇ ಮುಂದಕ್ಕೆ ಸಾಗಿ ತುಸು ಎಡಕ್ಕೆ ತಿರುಗಿಕೊಂಡರೆ 'ಹನುಮನ ಕಣಿವೆ' ಎಂಬ ಹೆಸರಿನ ತಂಪಾದ ಸುಂದರ, ತಾಣವಿದೆ. ಅಲ್ಲಿ ಒಂದು ದೊಡ್ಡ ಬಂಡೆಯಲ್ಲಿ ಕಟೆದ ಮಾರುತಿಯ ಮಹಾ ವಿಗ್ರಹದನ್ನು ನೋಡಿದರೆ ಪ್ರವಾಸಿಗರ ಕಾಲುಗಳು ಮುಂದಕ್ಕೆ ಕೀಳುವುದಿಲ್ಲ. ಅಷ್ಟು ಪ್ರೇಕ್ಷಣೀಯವಾಗಿದೆ ಸ್ಥಳ.

ಕೊಳವನ್ನಿಳಿದು ಎಡಕ್ಕೆ ಹೊರಳಿ ಬಂದರೆ ತಿರುಗಿ ಮಠಕ್ಕೆ ಬರುತ್ತೇವೆ. ಇಲ್ಲಿಗೆ ಬೆಟ್ಟವನ್ನೆಲ್ಲ ಸುತ್ತುಹಾಕಿ ಅಲ್ಲಿಯ ಎಲ್ಲ ಪ್ರೇಕ್ಷಣೀಯ ಸ್ಥಾನಗಳನ್ನು ಕಂಡು ಮುಗಿಸಿದಂತಾಯಿತು.

ಎಲ್ಲ ಬೆಟ್ಟಗಳಿಗೂ ತಮ್ಮದೇ ಆದ ಆಕರ್ಷಣಶಕ್ತಿ ಇದ್ದೇ ಇರುತ್ತದೆ. ಅದರಲ್ಲೂ ನಿಸರ್ಗದ ಕೃಪಾಕಟಾಕ್ಷವನ್ನು ಒಂದು ತೂಕ ಹೆಚ್ಚಾಗಿಯೇ ಪಡೆದ 'ಆದಿ ಚುಂಚನಗಿರಿ' ಮನಸ್ಸನ್ನು ಸೆರೆ ಹಿಡಿಯುತ್ತದೆ; ಅದನ್ನೊಮ್ಮೆ ಸಂದರ್ಶಿಸಿದವರು ಪುನಃ ಪುನಃ ಅಲ್ಲಿಗೆ ಹೋಗಲು ಹಂಬಲಿಸುವಂತಿದೆ.

—ಮೈಸೂರುವಾಣಿ : ೧೯೭೮



ಶ್ರೀ ಆದಿ ಚುಂಚನಗಿರಿ
ಜನಪದ ಸಾಹಿತ್ಯ ಕುರಿತು....

ಭಾರತದ ಜನ ಜಾನಪದ ಸಾಹಿತ್ಯದಲ್ಲಿ ಆಸಕ್ತಿ ತಳೆದಿರುವುದು ಅತ್ಯಂತ ತೃಪ್ತಿಯ ಸಂಗತಿ. ನಮ್ಮ ಜಾನಪದ ಸಾಹಿತ್ಯ ಶ್ರೀಮಂತವಾಗಿದೆ; ಅದರ ಬೆಳವಣಿಗೆಯು ಪಾಶ್ಚಾತ್ಯ, ನಾಗರಿಕ ಹಾಗೂ ಯಾಂತ್ರಿಕ ಸಂಸ್ಕೃತಿಯ ಪ್ರಭಾವಕ್ಕೆ ಸಿಕ್ಕಿ ನಶಿಸುತ್ತಿರುವ ನಮ್ಮ ಸಾಂಸ್ಕೃತಿಕ ಜೀವನದ ನವೋದಯಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ. ನಾವು ಅದಕ್ಕೆ ಬೆಲೆ ಕೊಡಬೇಕು ; ನಮ್ಮ ಮಾತೃಭೂಮಿಯ ಅತ್ಯಂತ ಸಾಧಾರಣ ಜನ ಎತ್ತಿಹಿಡಿದ ಕೆಲವು ಭವ್ಯವೂ, ಸರಳವೂ ಪ್ರಾಮಾಣಿಕವೂ ಆದ ಮೌಲ್ಯಗಳಿಗೆ ನಮ್ಮ ಗೌರವ ಸಲ್ಲಿಸಬೇಕು—ಇದು ಇಂದಿನ ಆವಶ್ಯಕತೆ. ನಮ್ಮ ಗ್ರಾಮೀಣ ಜನ ಪಾಶ್ಚಾತ್ಯರಂತೆ ಭೌತಿಕವಾಗಿ ಹಾಗೂ ಬೌದ್ಧಿಕವಾಗಿ ಮುಂದುವರಿಯದಿದ್ದರೂ, ಮಾನವೀಯತೆಯ ದೃಷ್ಟಿಯಿಂದ ಸಂಪೂರ್ಣ ಸುಸಂಸ್ಕೃತರೂ, ಪ್ರಗತಿಶೀಲರೂ ಆಗಿದ್ದಾರೆ.

—ಶ್ರೀ ಸುಧಾಕಾಂತ ಮಿಶ್ರ

('Folk Art of Mithila' ಎಂಬ ಲೇಖನದಲ್ಲಿ)

ಪುರಾಣ ಪ್ರಸಿದ್ಧವಾದ ಶ್ರೀ ಆದಿ ಚುಂಚನಗಿರಿ ಪುಣ್ಯಕ್ಷೇತ್ರಕ್ಕೆ ಸಂಬಂಧಪಟ್ಟವುಗಳಾಗಿವೆ. ಈ ಕ್ಷೇತ್ರವು ಚಿಕ್ಕದಾದರೂ ಅತ್ಯಂತ ರಮಣೀಯವಾಗಿದೆ. ಒಂದು ಸುಂದರ ವಸ್ತುವು ನಿತ್ಯಾನಂದವನ್ನೀಯುವಂತೆ ಈ ಸುಂದರಗಿರಿಯು ಜನಪದ ಸಾಹಿತ್ಯ ಲಹರಿಗೆ ಅಂತಃಸ್ಫೂರ್ತಿಯನ್ನಿತ್ತಿದೆ. ಇಲ್ಲಿ ನೆಲಸಿ ಪ್ರಸಿದ್ಧಿ ಪಡೆದಿರುವ ಕ್ಷೇತ್ರಪಾಲರಾದ ಶ್ರೀ ಗಂಗಾಧರೇಶ್ವರ, ಕಾಲಭೈರವೇಶ್ವರ ಮುಂತಾದ ದೇವದೇವತೆಯರು, ಜ್ವಾಲಾಪೀಠ ಮತ್ತು ಶ್ರೀ ಸಿದ್ಧಸಿಂಹಾಸನ ಗುರುಪೀಠವು ನೂರಾರು ವರ್ಷಗಳಿಂದ ಭಕ್ತರ ಮನೋಭಿಷ್ಟಗಳನ್ನು ನೆರವೇರಿಸುತ್ತಾ ಅವರಿಗೆ ಸುಖಶಾಂತಿ ಸಮೃದ್ಧಿಗಳನ್ನು ಕರುಣಿಸುತ್ತಿದ್ದಾರೆ. ಈ ಆನಂದೋತ್ಸಾಹದಲ್ಲಿ ಅವರು ಗುರುದೇವರಿಗೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸುವುದಕ್ಕಾಗಿ ಭಾವೋದ್ರೇಕದಿಂದ ಭಕ್ತಿಪ್ರೇಮಪೂರಿತರಾಗಿ ಹಾಡಿದ ಗೀತೆಗಳೇ ಈ ಜನಪದ ಗೀತೆಗಳು.

ಆದರೆ ಕವಿಚಕ್ರವರ್ತಿ ನೃಪತುಂಗನು ಕರ್ಣಾಟಕದ ಜನತೆಯ ಬಗ್ಗೆ "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂದು ಅಭಿಮಾನದಿಂದ ಹೇಳಿರುವಂತೆ, ಇವುಗಳೆಲ್ಲವೂ ಹೃದಯದಿಂದ ಹೊರಹೊಮ್ಮಿ ಬರೆಯಲ್ಪಡದೆ ಬಾಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಹರಿದು ಬಂದು ಹೃದ್ಗತವಾಗಿ ಸಾಹಿತ್ಯ ಪ್ರವಾಹರೂಪವಾಗಿದೆ. ಜನತೆಯ ಸಂಸ್ಕೃತಿಯ ಬಾರುಗೋಲಾದ ಈ ಸಾಹಿತ್ಯವನ್ನು ಸಂಗ್ರಹಿಸುವುದರಲ್ಲಿ ಅನೇಕ ಹಳ್ಳಿಗಳಿಗೆ ತಿರುಗಿ ಅನೇಕರ ಆಶ್ರಯ ಪಡೆಯಬೇಕಾಗುತ್ತದೆ. ಪುರುಷರಿಗಿಂತಲೂ ಹೆಚ್ಚಾಗಿ ಸ್ತ್ರೀಯರೇ ಕಂಠಸ್ಥಮಾಡಿಕೊಂಡಿರುವುದರಿಂದ ಹೆಚ್ಚು

ಶ್ರಮಪಡಬೇಕಾಯಿತೆಂಬುದನ್ನು ಸುಲಭವಾಗಿ ಊಹಿಸಬಹುದು. ಇಂತಹ ಅಮೂಲ್ಯ ಹಾಗೂ ಪವಿತ್ರವಾದ ಗೀತೆಗಳು ಆಧುನಿಕ ನಾಗರಿಕತೆಯ ಪ್ರಭಾವದಿಂದಲೂ ಜೀವನ ಜಂಝಾಟದ ಒತ್ತಡದಿಂದಲೂ ಬಡತನ ದಿಂದಲೂ ಮರೆಯಾಗುತ್ತವೆಂಬುದನ್ನರಿತು ಅವುಗಳನ್ನು ಸಂಗ್ರಹಿಸಿ ಸಂರಕ್ಷಣೆ ಮಾಡಬೇಕೆಂಬ ಹೆಬ್ಬಯಕೆಯನ್ನು ಈಡೇರಿಸಲು ಸಂಗ್ರಹಣೆ ಅಗತ್ಯವೆನಿಸಿದೆ.

"ನಮ್ಮ ಭಾರತ ಹಳ್ಳಿಗಳ ನಾಡು. ಅದರ ಸಂಸ್ಕೃತಿ ಉನ್ನತ ವಾದದ್ದು. ಭಾರತೀಯ ಸಂಸ್ಕೃತಿಯನ್ನರಿಯಬೇಕಾದರೆ ಹಳ್ಳಿಗಳ ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ನೋಡಬೇಕು" ಎಂದು ಗುರುದೇವ ರವೀಂದ್ರನಾಥ ಠಾಕೂರ್‌ರವರು ಹೇಳಿದ್ದಾರೆ. ಅಲ್ಲಿಯ ಜನತೆಯ ನಡೆ ನುಡಿ ಆಚಾರ ವಿಚಾರಗಳನ್ನರಿಯಬೇಕು. ಹಳ್ಳಿಗರೊಡನೆ ಹಳ್ಳಿಗರಾಗಿ ಬೆರೆತು ಅವರ ದೈನಂದಿನ ಜೀವನದ ಆಗುಹೋಗುಗಳಲ್ಲಿ ಪಾಲುಗೊಳ್ಳ ಬೇಕು. ಅವರ ಹಬ್ಬ ಹರಿದಿನ ಮದುವೆ ಜಾತ್ರೆ ಮುಂತಾದ ವಿಶೇಷ ಸಮಾರಂಭಗಳಲ್ಲಿ ಭಾಗವಹಿಸಬೇಕು. ಪರಂಪರಾಗತವಾಗಿ ಬಂದಿರುವ ಅವರ ಅಂದ ಚಂದವಾದ ಜಾನಪದ ಕಲೆ, ಗೀತೆ, ನೃತ್ಯ, ಕೋಲಾಟ, ಬಯಲಾಟ, ಯಕ್ಷಗಾನ, ಲಾವಣಿ ಕಂಸಾಳೆ ಪದಗಳ ಗಾಯನ ವಾಚನ ಸಾಹಿತ್ಯಗಳ ಸವಿಯನ್ನು ಸವಿಯಬೇಕು.

ಸಾಹಿತ್ಯ ಜನಜೀವನದ ಪ್ರತಿಬಿಂಬ ಎಂಬ ನುಡಿಯಂತೆ ಈ ಗೀತೆಗಳು ಭಕ್ತರ ಗುರುದೇವತಾಭಕ್ತಿ, ಪ್ರೇಮ, ಪರಿಶುದ್ಧತೆ, ಸೌಂದರ್ಯ ಪ್ರಿಯತೆ, ದಾನ, ಧರ್ಮ, ಪರೋಪಕಾರ, ತ್ಯಾಗ ಸೇವೆಗಳಿಂದ ಲಭಿಸತಕ್ಕ ಸಂತೃಪ್ತಿ ಮುಂತಾದ ಸದ್ಗುಣಗಳನ್ನು ಪ್ರತಿಬಿಂಬಿಸುತ್ತವೆ. ಅಲ್ಲದೆ ಅವರ

ಜೀವನದ ನಡೆನುಡಿ, ಆಚಾರವಿಚಾರ, ಸುಖದುಃಖ, ಆಶೆ ಆಕಾಂಕ್ಷೆ, ವಿನೋದ ಹಾಸ್ಯ ಇವುಗಳನ್ನು ನವರಸಭರಿತವಾಗಿ ವ್ಯಕ್ತಪಡಿಸುತ್ತವೆ. ಮತ್ತು ದೈನಂದಿನ ದುಡಿಮೆಯಿಂದ ಉಂಟಾದ ಆಯಾಸ ಶ್ರಮಗಳನ್ನು ನೀಗಿಕೊಳ್ಳಲು ಒಂದೆಡೆ ಕಲೆತು ಮುಂದಿನ ದುಡಿಮೆಗೆ ಹುರುಪು ಉತ್ಸಾಹ ಚೇತನಗಳನ್ನು ಪಡೆದುಕೊಳ್ಳಲು ಸಹಾಯ ಮಾಡುತ್ತವೆ. ಜನಪ್ರಿಯ ವಾಗಿರುವುದರಿಂದ ಹೃನ್ಮನಗಳನ್ನು ಪರಿಶುದ್ಧಿಗೊಳಿಸಿ ಸೂರೆಗೊಳ್ಳುತ್ತವೆ.

ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಸಾಮಾಜಿಕ, ಸಾಂಸ್ಕೃತಿಕ, ದೈವಿಕ, ನೈತಿಕ ಇವೇ ಮುಂತಾದ ಸಕಲ ರಂಗಗಳನ್ನು ಈ ಗೀತೆಗಳು ಆವರಿಸಿದ್ದರೂ ಅವು ಹೆಚ್ಚಾಗಿ ದೈವಿಕ ಮತ್ತು ನೈತಿಕ ವಿಚಾರಗಳಿಗೇ ಪ್ರಾಧಾನ್ಯತೆಯನ್ನಿತ್ತಿರುವುದು ಕಂಡು ಬರುತ್ತದೆ. ಚುಂಚನಗಿರಿಯ ಬಗ್ಗೆ ಜನತೆ ಬೆಳಸಿಕೊಳ್ಳಬೇಕಾದ ಆದರಅಭಿಮಾನ ದೈವಭಕ್ತಿ ಮುಂತಾದು ವನ್ನು ಸೂಚಿಸುತ್ತವೆ. ಇಹಪರಗಳೆರಡರಲ್ಲಿಯೂ ಸುಖವನ್ನನುಭವಿಸುವ ದೃಷ್ಟಿಯಿಂದ ಮಾನವನು ತನ್ನ ಜೀವಿತಕಾಲದಲ್ಲಿ ಗುರುದೇವರ ವಿಷಯ ದಲ್ಲಿ ಯಾವ ರೀತಿ ಸತ್ಯ ಧರ್ಮ ಭಯ ಭಕ್ತಿ ಪ್ರೇಮ ತ್ಯಾಗ ಸೇವಾನಿಷ್ಠೆ ಗಳಿಂದ ಕೂಡಿದ ಉತ್ತುಂಗ ಜೀವನವನ್ನು ನಡೆಸಿಕೊಂಡು ಹೋಗಬೇಕು ಎಂಬ ಕೆಲವೊಂದು ನೈತಿಕ ಕಟ್ಟು ಕಟ್ಟಳೆಗಳನ್ನು ನೇಮನಿಷ್ಠೆಗಳನ್ನು ಅವು ಪ್ರತಿಪಾದಿಸುತ್ತವೆ. ಮಾನವನು ಮಾನವನಾಗಿಯೆ ಬಾಳಿ ಬಾಳ್ವೆಯನ್ನು ಸಾರ್ಥಕಪಡಿಸಿಕೊಳ್ಳಬೇಕಲ್ಲದೆ ಮಾನವನ ದಾರಿ ಹಿಡಿದು ನಿರರ್ಥಕಪಡಿಸಿ ಕೊಳ್ಳಬಾರದು ಎಂಬ ಉನ್ನತ ಧ್ಯೇಯವನ್ನು ಅವು ಸಾರುತ್ತವೆ. ಇವುಗಳ ಅಂತಃಸ್ಫೂರ್ತಿಯಿಂದ ಲೋಕಕಲ್ಯಾಣವಾಗುತ್ತವೆ. ಇವು ಉನ್ನತ ಜೀವ ನದ ಮಹೋನ್ನತ ತತ್ವಗಳನ್ನು ಸಾರುವ ಕ್ಲಿಷ್ಟಗೀತೆಗಳಾದರೆ ದಿನನಿತ್ಯದ

ಸಾದಾಜೀವನದ ಸರಳತೆಯನ್ನೂ, ರಸನಿಮಿಷಗಳನ್ನೂ ವರ್ಣಿಸುವ ಲಘು ಗೀತೆಗಳೂ ಇವೆ. ಆದ್ದರಿಂದ ಅವು ಸ್ವಾರಸ್ಯವಾಗಿವೆ ಹಾಗೂ ಸುಲಲಿತ ವಾಗಿವೆ. ಅವುಗಳಲ್ಲಿ ಶೃಂಗಾರವಿದೆ, ಹಾಸ್ಯವಿದೆ, ಕರುಣ ಇದೆ. ಇಲ್ಲಿ ಪಾಂಡಿತ್ಯವಾಗಲೀ ಶಬ್ದಾಲಂಕಾರವಾಗಲೀ ಇಲ್ಲ. ಇವು ಕೀರ್ತಿ, ಸ್ಥಾನ ಐಶ್ವರ್ಯಗಳ ಗಳಿಕೆಗಾಗಿ ರಚಿತವಾದುವೂ ಅಲ್ಲ. ಸಹೃದಯರು ಇವುಗಳನ್ನು ಓದಿ, ಹಾಡಿ, ನಲಿದಾಡಿ ಜನತೆಯಲ್ಲಿ ಪ್ರಚಾರಮಾಡುವುದರ ಮೂಲಕ ತಮ್ಮ ಬಾಳಿನಲ್ಲಿ ಹೊಸಕಾಂತಿ, ಸ್ಫೂರ್ತಿ, ಸೊಬಗು ಕಂಡು ಕೊಂಡರೆ ನಮ್ಮ ಶ್ರಮ ಸಾರ್ಥಕವಾಯಿತೆಂದು ನಂಬುತ್ತೇವೆ.

—ಶ್ರೀ ಚಂದ್ರಶೇಖರನಾಥಸ್ವಾಮಿಜೀ

*   *   *   *

ಶ್ರೀ ಆದಿ ಚುಂಚನಗಿರಿಗೆ ಸಂಬಂಧಪಟ್ಟ ಜನಪದ ಸಾಹಿತ್ಯವೂ ವಿಪುಲವಾಗಿ ಬೆಳದಿದೆ; ವೈವಿಧ್ಯತೆಯಿಂದ ಕೂಡಿದೆ. ಚುಂಚನಗಿರಿಯ ಪ್ರಾಶಸ್ತ್ಯವನ್ನು ಕುರಿತು, ಅದರ ಐತಿಹ್ಯವನ್ನು ಕುರಿತು ಹಲವು ಬಗೆಗಳಲ್ಲಿ ಜನಪದ ಕವಿಗಳು ಮನಮುಟ್ಟುವಂತೆ ಹಾಡಿದ್ದಾರೆ. ತಮ್ಮ ಭಕ್ತಿಯ ಪರಾಕಾಷ್ಠೆಯನ್ನು, ಭಾವಪರವಶತೆಯನ್ನು ಈ ಗೀತೆಗಳಲ್ಲಿ ಮೆರೆದಿದ್ದಾರೆ. ಸ್ಥಳಗತೆಗಳನ್ನೂ, ಸ್ಥಳದೇವತೆಯ ಗುಣಗಾನವನ್ನೂ, ಆ ದೈವದ ಲೀಲಾ ವಿನೋದಗಳನ್ನೂ ಹೃದಯಂಗಮವಾಗಿ ಚಿತ್ರಿಸುವ ಜನಪದ ಸಾಹಿತ್ಯ ಕನ್ನಡದಲ್ಲಿ ಹೇರಳವಾಗಿ ದೊರೆಯುತ್ತದೆ. ಚುಂಚನಗಿರಿಯಂಥ ಪವಿತ್ರವೂ,

ಪುರಾಣ ಪ್ರಸಿದ್ಧವೂ ಆದ ಕ್ಷೇತ್ರವನ್ನು ಕುರಿತ ಗೀತೆಗಳಂತೂ ನಮ್ಮ ನಾಡಿನ ಅನೇಕ ಹಳ್ಳಿಗಳಲ್ಲಿ ಹರಡಿವೆ. ಜಾತ್ರೆ, ಶಿವರಾತ್ರಿಗಳ ಸಮಯ ದಲ್ಲಿ ದೂರ ದೂರದ ಹಳ್ಳಿಗಳಿಂದ ಬರುವ ಹೆಣ್ಣು ಮಕ್ಕಳು ಉತ್ಸವಾದಿ ಗಳ ಸಮಯಗಳಲ್ಲಿ ತಂಪಾದ ಬೆಳದಿಂಗಳಿನಲ್ಲಿ ಅಲ್ಲಲ್ಲಿ ಬಂಡೆಗಳ ಮೇಲೆ ಕುಳಿತು ಇರುಳೆಲ್ಲಾ ಹಾಡಿ ತಣಿಯುತ್ತಾರೆ. ಆ ರಾತ್ರಿ ಎತ್ತ ಹೋದರೂ, ಯಾವಕಡೆ ತಿರುಗಿದರೂ ಮಧುರಗಾನಲಹರಿ ಮನಸ್ಸಿಗೆ ಮುದವನ್ನು ತರುತ್ತದೆ; ಲಲಿತವಾದ ಸಹಜ ಸುಭಗ ಧಾಟಿಗಳು ತಲೆದೂಗುವಂತಿರು ತ್ತವೆ.

ತ್ರೇತಾಯುಗದಲ್ಲಿ ಶ್ರೀರಾಮನಿಗೆ ಗಜಾರಣ್ಯ ಕ್ಷೇತ್ರವನ್ನು (ಈಗಿನ ಚುಂಚನಕಟ್ಟೆ) ಬಿಟ್ಟುಕೊಟ್ಟು ಈಶ್ವರನು ಇಲ್ಲಿನ ನಿಸರ್ಗ ಸೌಂದರ್ಯಕ್ಕೂ ಪರಮ ಪ್ರಶಾಂತತೆಗೂ ಮನಸೋತು ಬಂದು ನೆಲೆಗೊಂಡನೆಂದೂ, ಜನಪದ ಸಾಹಿತ್ಯವೇ ನಮಗೆ ಕತೆಯನ್ನು ಹೇಳುತ್ತದೆ. ಪಂಚಲಿಂಗರೂಪಿಯಾಗಿ ಈಶ್ವರ ಈ ಗಿರಿಯಲ್ಲಿ ನೆಲಸಿದ್ದಾನೆ. ಅವನಿಂದ ಸ್ಥಾಪಿಸಲ್ಪಟ್ಟ ಆದಿ ಪೀಠವೂ ಇಲ್ಲಿದೆ. ಸುಮಾರು ಅರವತ್ತಕ್ಕೂ ಮೇಲ್ಪಟ್ಟ ತಲೆಮಾರಿನ ಗುರುಪರಂಪರೆಯನ್ನು ಪಡೆದ ಪುರಾತನ ಶ್ರೀ ಮಠವೂ ಇಲ್ಲಿದೆ. ಅನೇಕ ಶಕ್ತಿದೇವತೆಗಳೂ, ಇತರ ದೇವತೆಗಳೂ ಈ ವಿಶಾಲಗಿರಿಯಲ್ಲಿ ನೆಲೆ ಗೊಂಡಿವೆ. ಕಂಬದಮ್ಮ ಇಲ್ಲಿನ ಶಕ್ತಿದೇವತೆಯಾದರೆ, ಮಾಳಮ್ಮ ಈಶ್ವರನ ಉಪಪತ್ನಿ. ಉಪಪತ್ನಿಯಮೇಲೆ ಈಶ್ವರನ ಒಲವು ಹೇಗೆ ಹೆಚ್ಚಾಗಿದೆಯೋ ಅಂತೆಯೇ ಭಕ್ತರ ಒಲವೂ ಅತ್ತಲೇ ಇರುವಂತೆ ಸುಂದರಗೀತೆಗಳೇ ತಿಳಿ ಸುತ್ತವೆ. ಕಂಬದಮ್ಮನನ್ನು ಕುರಿತ ಹಾಡುಗಳಲ್ಲಿ ವಿಶಿಷ್ಟವಾದ ಭಾವ ಗೀತೆಯ ಹೊಳಹು ಕಂಡರೆ, ಗುರುವನ್ನೇ ಹರನೆಂದು ಪೂಜಿಸಿ ಹಾಡಿರುವ

'ಕುಲಗುರು'ವಿನ ಗೀತೆಗಳಲ್ಲಿ ಅವರ ಭಾವಶುದ್ಧಿ, ಶ್ರದ್ಧೆ, ಭಕ್ತಿಗಳ ಹೆಚ್ಚಳ ವಿರುತ್ತದೆ. ಇತರ ಗೀತೆಗಳಲ್ಲಿ ಭಕ್ತಿಯ ಔನ್ನತ್ಯದ ಜೊತೆಗೆ ವಿಶಿಷ್ಟವಾದ ಕಲ್ಪನೆಗಳೂ ಬೆರೆತು ಮನೋಹರವಾಗಿವೆ. ಚುಂಚನಗಿರಿಯ ಬಗ್ಗೆ, ಅಲ್ಲಿನ ಆರಾಧ್ಯದೈವಗಳ ಬಗ್ಗೆ ಬೆಳೆದುಬಂದಿರುವ ಈ ಮನೋಜ್ಞ ಗೀತೆಗಳಲ್ಲಿ ರಸಿಕರ ಆಸಕ್ತಿಯನ್ನು ಕೆರಳಿಸುವ, ಸಾಹಿತ್ಯ ಪ್ರೇಮಿಗಳ ಹೃದಯವನ್ನು ಸೆರೆಹಿಡಿಯುವ–ತಿಳಿಯಾದ, ಲಲಿತವಾದ ಅಚ್ಚಗನ್ನಡ ಶೈಲಿಯ ಜೊತೆಗೆ, ನೇರವಾದ ಹೃದ್ಯವಾದ, ಭಾವಗಾಂಭೀರ್ಯವೂ, ಅನುಭವಜನ್ಯವಾದ ಸಾಮಾನ್ಯವೆನಿಸಿದರೂ ಮನಸ್ಸನ್ನು ಗೆದ್ದುಕೊಳ್ಳುವ ವರ್ಣನೆಗಳೂ, ಹೋಲಿಕೆಗಳೂ ತುಂಬಿತುಡಿಯುತ್ತವೆ. ಮತ್ತೆ ಮತ್ತೆ ಓದಿ, ಹಾಡಿ, ಹಾಡಿಸಿ ನಲಿಯುವಂತಿವೆ.

ಕನ್ನಡ ಜನಪದ ಸಾಹಿತ್ಯದಲ್ಲಿ ಭಕ್ತಿಗೀತೆಗಳಿಗೇ ಒಂದು ವಿಶಿಷ್ಟ ಸ್ಥಾನವಿದೆಯೆಂಬುದನ್ನು ಒಂದೇ ಸ್ಥಳವನ್ನು ಕುರಿತಾದ, ಆದರೂ ಹಿರಿದಾದ ಸಾಹಿತ್ಯಗುಣಗಳಿಂದ ಕೂಡಿದ ಈ ಹೇರಳವಾದ ಗೀತೆಗಳೇ ಹೇಳುತ್ತವೆ.

.......ಚುಂಚನಗಿರಿಯನ್ನು ಕುರಿತ ಹಾಡುಗಳಿವಾದರೂ ಎಲ್ಲ ಭಕ್ತರ ಹೃದಯ ಸಂಪತ್ತಿನ ಕಾಣಿಕೆಯ ಪ್ರತೀಕಗಳಿವಾಗಿವೆ. ಕನ್ನಡ ಜನತೆಯಲ್ಲಿ ಭಕ್ತಿಯ ಹರಹನ್ನೂ, ಉತ್ತಮ ಸಂಸ್ಕೃತಿಯನ್ನೂ ಸಾರುವ ಗೀತೆಗಳಾಗಿವೆ.

—ಶ್ರೀ ಜೀ. ಶಂ. ಪರಮಶಿವಯ್ಯ.



ಉಪಭಾಗ

ಜಾನಪದ ಗೀತೆಗಳೆಂದರೆ ಅರಣ್ಯರೋದನವೆನ್ನುವುದು ತಪ್ಪಾದೀತು ; ಯುದ್ಧ ಕಾಲ, ಶಾಂತಿಕಾಲಗಳೆರಡರಲ್ಲಿಯೂ ಅದೊಂದು ಪ್ರಬಲಶಕ್ತಿ. ಸಂಗೀತ ಹಾಗೂ ಜಾನಪದ ಗೀತೆಗಳನ್ನು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ನಮ್ಮ ಲಕ್ಷಾಂತರ ಜನರಿಗೆ ಉತ್ಸಾಹ ತುಂಬುವ ವ್ಯಾಪಕ ಸಾಧನವನ್ನಾಗಿ ಬಳಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳಿಗೆ ಸೂಚಿಸುತ್ತೇನೆ.

...ನಾವು ಒಂದು ಜಗತ್ತು ಹಾಗೂ ಒಂದು ಪ್ರಜಾಪ್ರಭುತ್ವವನ್ನು ಕುರಿತು ಮಾತನಾಡುತ್ತೇವೆ. ಅದು ಕೇವಲ ರಾಜಕೀಯ ಪ್ರಚಾರವಾಗಲಾರದು. ನಾವು ಸಾಂಸ್ಕೃತಿಕವಾಗಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಬೇಕು; ಜನಾಂಗ ಜನಾಂಗಗಳ ನಡುವೆ ಬಾಂಧವ್ಯವನ್ನು ಸ್ಥಾಪಿಸಲು ಜಾನಪದ ಗೀತೆಗಳಿಂದ ಉತ್ತಮವಾದ ಸಾಧನ ಪ್ರಾಯಶಃ ಬೇರೊಂದಿಲ್ಲ.

—ಶ್ರೀ ಆರ್. ಸಿ. ಮೆಹ್ತಾ

('Value of Folk Music' ಎಂಬ ಲೇಖನದಲ್ಲಿ)

ಪರಿಶಿಷ್ಟ—೧

ಗ್ರಾಮ್ಯಶಬ್ದಗಳ ಅರ್ಥಕೋಶ

ಪದ—ಅರ್ಥ	ಪುಟ—ಪದ್ಯ
ತಾನವ—ಸ್ನಾನ	೮—೨
ಪಾಗು—ವಸ್ತ್ರ	೮—೩
ಪತ್ತಿಲ್ಲಿ—ಪಕ್ಕದಲ್ಲಿ	೧೬—೪
ಐಗಳ—ಸ್ವಾಮಿಗಳ	೧೭—೨
ಮಲುಕೋಲ್ದು—ಅಳ್ಳಾಡದೊ	೧೭—೪
ದ್ವೋರುಗೆಂಪು,—ಎಣ್ಣೆಗೆಂಪು .... (ದೋರುಗೆಂಪು)	೨೦—೨
ಕೆಪ್ಪೆ—ಕೆನ್ನೆ	೨೨—೨
ಗೇದಾರಲ್ಲೆ—ಕೆತ್ತಿದರು....	೨೨—೪
ಗುಡಿಲೊಡ್ಡಿ—ಗುಡಿಸಲು ಕಟ್ಟಿ	೨೩—೧
ವಾರಲ್ಲಿ—ಪಕ್ಕದಲ್ಲಿ	೩೦—೩
ದಂಡ—ಹರಕೆ	೩೧—೧
ತಾಣ—ಸ್ಥಳ	೩೨—೧
ಭುಗುತಿ—ಹರಿಸೇವೆ	೩೫—೧
ಕಪ್ಪು, (ಕೊಪ್ಪು)—ಆಭರಣ	೪೨—೪
ನೆಪ್ಪು—ನೆನಪು	೪೩—೩
ಇಸಂಪುರಿ, (ಗೊತ್ತಾದ ವನಕ್ಷೇತ್ರ) ಹೂವಿನ ತೋಟ,	೪೩—೪

ಪದ—ಅರ್ಥ		ಪುಟ—ಪದ್ಯ
ವರ—ವರಹ, (ನಾಣ್ಯ)	....	೪೩—೪
ಲಂಗು—ಕೋಪ, (ಮುನಿಸು)	....	೪೪—೩
ಆಯಿತ್ವಾರ, (ಆಯುತ್ವಾರ)	....	೫೧—೪
ಭಾನುವಾರ		
ಪೊತ್ತರೆ—ಪತ್ತರೆ	....	೫೮—೧
ಪಲ್ಗೇಸು—ಪಲ್ಲವಿಸು, (ಚಿಗುರು)....		೫೮—೧
ಪಡಿ-ಮೂರುಪಾವು,(ಒಂದುಅಳತೆ)		೫೮—೪
ಪಾತುರೆ—ಪಾತ್ರೆ ?	....	೬೦—೧
ರಬಸೀಗೆ—ರಬಸಕ್ಕೆ	....	೬೦—೪
ಮದಲಿಂಗ—ಮದುವಣಿಗ	....	೬೪—೩
ಮೂಗಂಡಗ—ಮೂರು ಕಂಡುಗ, (ಆರುನೂರು ಸೇರು)		೭೦—೧
ಬಡಸ್ತಾನ—ಬಡತನ	....	೭೨—೧
ತಿರುಚಣ—ಶ್ರೀಗಂಧದಮರ ?, (ಸಿರಿಗಂಧದಮರ)	....	೭೨—೨
ಪರ—ಹರಿಸೇವೆ	....	೭೩—೧
ಕಾವಾಳ—ಇಬ್ಬಣಿ, (ಮಂಜು)	....	೭೬—೪
ಬೆಟ್ಟು—ಬೆರಳು	....	೮೦—೪
ತಳುಗು—ತಂಗು	....	೮೩—೨
ಚವರಿಗೆ—ಬಿಂದಿಗೆ	....	೮೫—೧

ಪದ—ಅರ್ಥ	ಪುಟ—ಪದ್ಯ
ಸೈವಾಗಿ—ಜೊತೆಯಲ್ಲಿ, ... (ಸಂಗಡ—ಸಹಿತ)	೮೯—೨
ತಬಸಿನ—ತಪಸ್ಸಿನ	೮೯—೩
ವ್ಯಾಸ—ವೇಶ	೯೧—೨
ತೊರ—ಅಷ್ಟು, (ಗಾತ್ರ)	೯೧—೪
ದೀವಟಿಗೆ—ಪಂಜು	೯೪—೩
ಸುರತಾಳೆ—ದೇವತಾಳೆ, (ತಾಳೆಹೂವು)	೯೫—೧
ಒಕ್ಕಳ—ಒಂದು ಕೊಳಗ, ... (ಹತ್ತು ಸೇರು)	೧೦೦—೩
ಸುವ್ವಾರ—ಶೃಂಗಾರ....	೧೦೦—೪
ತಾವು—ಸ್ಥಳ, (ಜಾಗ)	೧೦೮—೨
ಕಾಮಾಕ್ಷಿ—ರುದ್ರಾಕ್ಷಿ	೧೧೨—೨
ಮುಗುಟ—ಮುತ್ತು ?	೧೧೭—೨
ಹಂಪೆ—ಬಿದರಿನ ಕೊಳವೆ	೧೧೯—೩
ದಿರುಳಲ್ಲಿ—ದಿಳ್ಳಿ	೧೧೯—೪
ರಾಜಣ—ಅಕ್ಕಿ	೧೨೨—೨
ತಾರಲ—?....	೧೩೧—೩
ಮಿಂಚಿದಂಡಿ—?	೧೩೧—೩
ಬಣ್ಣ—ಸೀರೆ	೧೩೮—೪
ಕುಟ್ಪಾಡಿ—ಜೊತೆಯಲ್ಲಿ ಆಡಿ	೧೪೦—೧



ಪರಿಶಿಷ್ಟ—೨

ಸಂಗ್ರಹಿಸಿದ ಸ್ಥಳಗಳು

ಈ ಸಂಕಲನದಲ್ಲಿರುವ ಪದಗಳನ್ನು ಹಾಡಿದ ಅಕ್ಕ-ತಂಗಿಯರ ಹೆಸರುಗಳು ಮರೆತುಹೋಗಿರುವುದರಿಂದ, ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿನ ತಾಯಂದಿರ ಹೆಸರುಗಳನ್ನು ಸೇರಿಸದಿದ್ದುದಕ್ಕಾಗಿ ವಿಷಾದಿಸುತ್ತೇವೆ.

ನಾಗಮಂಗಲ ತಾಲ್ಲೂಕು, (ಮಂಡ್ಯ ಜಿಲ್ಲೆ)

ಹೊನ್ನಾವರ	ಹೊನ್ನಾವರ ಕ್ಯಾತನಹಳ್ಳಿ
ಲಾಳಿನಕೆರೆ	ಹಡೇನಹಳ್ಳಿ
ಚಿನ್ನಾಪುರ	ಲಾಳಿನಕೆರೆಪುರ
ಮೆಳ್ಳಳ್ಳಿ	ಕೋಡಿಹಳ್ಳಿ
ಅವ್ವೇರಹಳ್ಳಿ	ಕದಬಹಳ್ಳಿ
ಚೋಳೇನಹಳ್ಳಿ	ಚೋಳೇನಹಳ್ಳಿಬಂಗ್ಲಿ
ಹೆರಗನಹಳ್ಳಿ	ಚಿಗರನಹಳ್ಳಿ
ಮಣಿಯೂರು	ಮಣಿಯೂರುಪುರ
ಬೀಚನಹಳ್ಳಿ	ಅಣಕನಹಳ್ಳಿ
ದೇವರ ಮಾವಿನಕೆರೆ	ತೊಂಡಹಳ್ಳಿ
ತೊಂಡಹಳ್ಳಿಬಂಗ್ಲಿ	ಹೊನ್ನದೇವಿಹಳ್ಳಿ
ಅಂಬಲಜೀರಹಳ್ಳಿ	ಅಂಬಲಜೀರಹಳ್ಳಿಗೊಲ್ಲರಹಳ್ಳಿ

ಚುಂಚನಹಳ್ಳಿ	ಚುಂಚನಹಳ್ಳಿಪಾಳ್ಯ
ಹೊನ್ನೇನಹಳ್ಳಿ	ಕಂಚನಹಳ್ಳಿ
ಬಿಳಿಗುಂದ	ಕೆಂಚನಹಳ್ಳಿ
ಚೆನ್ನಯ್ಯನಕೊಪ್ಪಲು	ಬೇಲದಕೆರೆ
ಶ್ರೀರಂಗಪುರ	ಕಂಚನಹಳ್ಳಿ
ದೇವೇಗೌಡನಕೊಪ್ಪಲು	ಮುದಿಗೆರೆ

ತುರುವೇಕೆರೆ, (ತುಮಕೂರು ಜಿಲ್ಲೆ)

ಥರಮನಕೋಟೆ	ಥರಮನಕೋಟೆ ಗೊಲ್ಲರಹಳ್ಳಿ
ಕಾಡಸೂರು ಮುದಗೆರೆ	ಕಾಡಸೂರು ಮಾವಿನಕೆರೆ
ಹೊಡಿಕೆಘಟ್ಟ	ದಬ್ಬೇಘಟ್ಟ

ಚನ್ನರಾಯಪಟ್ಟಣ, (ಹಾಸನ ಜಿಲ್ಲೆ)

ತಿಮ್ಮಲಾಪುರ	ತಿಮ್ಮಲಾಪುರದದೊಂಬಿದಾಸರಹಟ್ಟಿ
ಬಾಳಗಂಚಿ	ಕಿರಿಸಾವೆ

ಕನಕಪುರ, (ಬೆಂಗಳೂರು ಜಿಲ್ಲೆ)

ಮರಳವಾಡಿ	ಗೋದೂರು
ಸಿಡಿದೇವರಹಳ್ಳಿ	

ಕಡೂರು, (ಚಿಕ್ಕಮಗಳೂರು ಜಿಲ್ಲೆ)

ಸಕ್ಕರಾಯಪಟ್ಟಣ

ಮೊದಲ ಚರಣಗಳು

ಪುಟ



ಪುಸ್ತಕ ವಿಮರ್ಶೆ

ಜಾನಪದ ಸಾಹಿತ್ಯದ ಕ್ಷೇತ್ರ ವಿಸ್ತಾರವಾದುದು. ಅದು ಮಾನವನ ಅನುಭವಗಳ ಶ್ರೀಮಂತ ಭಂಡಾರ. ಪರಂಪರಾಗತವಾಗಿ ನಮಗೆ ಬಂದಿರುವ ಈ ನಿಧಿ ಅನಕ್ಷರಸ್ಥ ಜನತೆಯನ್ನು ಮಾತ್ರವಲ್ಲದೆ, ವಿಜ್ಞಾನದ ಯುಗವೆನಿಸಿಕೊಂಡಿರುವ ೨೦ನೇ ಶತಮಾನದ ವಿದ್ಯಾವಂತಜನರ ಮನಸ್ಸನ್ನೂ ಆಕರ್ಷಿಸುವ ಸತ್ವವುಳ್ಳದ್ದು. ಈ ನಿಧಿಯನ್ನು ಅಗೆದು ತೆಗೆಯಲು ೧೯ ಮತ್ತು ೨೦ ನೇ ಶತಮಾನಗಳಲ್ಲಿ ಸತತ ಪ್ರಯತ್ನಗಳು ನಡೆದಿದ್ದರೂ ಅದರ ಬಹುಭಾಗ ಇನ್ನೂ ಅಜ್ಞಾತವಾಗಿ ಉಳಿದಿದೆ. ಭಾರತದಲ್ಲಿ ಈ ದಿಕ್ಕಿನಲ್ಲಿ ಪ್ರಯತ್ನಗಳು ನಡೆದಿವೆ, ಆದರೆ ಇವು ಹೆಚ್ಚು ಕ್ರಮಬದ್ಧವಾಗಿಲ್ಲ.

...ಜಾನಪದ ವಾಙ್ಮಯವು ಸಾಹಿತ್ಯಸೌಂದರ್ಯದಿಂದ ಕೂಡಿದೆ. ಒಂದು ಜನಾಂಗದ ಸಾಂಸ್ಕೃತಿಕ ಬೆಳವಣಿಗೆಯನ್ನು ಜಾನಪದ ಸಾಹಿತ್ಯದ ಸಾಮಗ್ರಿಯ ಬೆಳಕಿನಲ್ಲಿಯೇ ಅಧ್ಯಾಯನ ಮಾಡಬೇಕು. ಅದರ ಎಲ್ಲ ವಿವಿಧ ರೂಪಗಳಲ್ಲಿ ನಮಗೆ ಮನುಷ್ಯ ಹೃದಯದ ಸಾಧಾರಣ ಪ್ರವೃತ್ತಿಗಳ ಅರಿವು ಉಂಟಾಗುತ್ತದೆ. ಜಾನಪದ ಸಾಹಿತ್ಯ ಸಾಮಾನ್ಯಮನುಷ್ಯನ ಸಾಹಿತ್ಯ. ಹಳ್ಳಿಗರ ಬಗ್ಗೆ ಸಹಾನುಭೂತಿಯಿಲ್ಲದೆ ಈ ಸಾಹಿತ್ಯದ ಸೌಂದರ್ಯವನ್ನು ಸವಿಯುವುದು ಸಾಧ್ಯವಿಲ್ಲ.

—ಶ್ರೀ ಡಿ. ಜಿ. ಬೋರ್ಸೆ

'The Special Characteristics of Marathi Folk Literature' ಲೇಖನದಿಂದ)

'ಜಾನಪದ ಕಥನ ಗೀತಗಳು' ಕುರಿತು....

ಕನ್ನಡದಲ್ಲಿ ಈವರೆಗೆ ಪ್ರಕಟವಾದ ಜಾನಪದಗೀತ ಸಂಗ್ರಹಗಳಲ್ಲಿ ಕಥನ ಕವನಗಳಷ್ಟನ್ನೆ ಕೂಡಿಕೊಂಡು ಹೊರಬಂದ ಕೃತಿಗಳು ಒಂದೆರಡು ಸಿಗಬಹುದಾದರೂ, ಜಾನಪದ ಗೀತಸಂಗ್ರಹಕರ ದೃಷ್ಟಿಯೆಲ್ಲಾ ಭಾವಾ ಗೀತಾತ್ಮಕವಾದ ಬಿಡಿಹಾಡುಗಳ ಆಯ್ಕೆಯತ್ತಲೇ ಹರಿದಿರುವುದು ಕಂಡು ಬರುತ್ತದೆ. ಹಾಡುಗಬ್ಬಗಳಂತೆಯೇ ಹಾಡುಗತೆಗಳನ್ನೂ ವಿಶೇಷವಾಗಿ ಸಂಗ್ರಹಿಸಿ ಅವುಗಳ ಸೊಗಸು ಸೌಂದರ್ಯಗಳ ತನಿಜೇನನ್ನು ತಂದುಕೊಟ್ಟ ಗೌರವ ಇದೀಗ ಶ್ರೀ ಕರಾಕೃ ಅವರಿಗೆ ಸಲ್ಲಬೇಕೆನ್ನುವಂತೆ ಈ ಬೃಹತ್ಕೃತಿ ನಮ್ಮಮುಂದಿದೆ. ಡಾ॥ಗದ್ದಿಗೀಮಠ್ ಅವರು, ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಯವರೂ, ಜನಾಬ್ ಕರೀಮ್‌ಖಾನರೂ ಈ ದಿಸೆಯಲ್ಲಿ ನಡೆದ ಹೆಜ್ಜೆಯ ಗುರುತನ್ನು ಇಲ್ಲಿ ಮರೆತರೆ ಅಪಚಾರವಾಗಬಹುದಾದರೂ ಇಷ್ಟು ಬೃಹತ್ಪ್ರ ಮಾಣದಲ್ಲಿ ಜಾನಪದ ಕಥನ ಗೀತೆಗಳನ್ನು ಒದಗಿಸಿಕೊಟ್ಟ ಮೊದಲ ಕೀರ್ತಿ ಶ್ರೀ ಕರಾಕೃ ಅವರದೇ ಎಂದು ನಿಸ್ಸಂದೇಹವಾಗಿ ಹೇಳಬಹುದು. ಬಿಡಿ ಹಾಡುಗಳ ಸಂಗ್ರಹಣೆ, ಸಂಪಾದನೆ, ಪ್ರಕಟಣೆಗಳು ಅಷ್ಟಾಗಿ ಕಷ್ಟಸಾಧ್ಯ ವಲ್ಲವೆಂಬುವ ಮಾತನ್ನು ಇಂಥ ಕಥನಗೀತೆಗಳ ಸಂಕಲನವನ್ನು ಮುಂದಿಟ್ಟುಕೊಂಡ ಯಾರಾದರೂ ಒಪ್ಪಿಯಾರು. ಸುದೀರ್ಘವಾದ ಕಥೆ ಗಳನ್ನು ದಿನಗಟ್ಟಲೆ, ಸಂಗ್ರಹಕರ ಎದುರು ಕುಳಿತು ಹಾಡುವ ಸಹನೆ, ಸಂಯಮಗಳನ್ನು ಹಾಡುವವರಿಂದ ಹೇಗೆ ನಿರೀಕ್ಷಿಸಲಾಗುವುದಿಲ್ಲವೋ ಹಾಗೆಯೇ ಸಂಗ್ರಹಕರಿಂದಲೂ ನಿರೀಕ್ಷಿಸಲಾಗುವುದಿಲ್ಲ. ಅಪಾರ ತಾಳ್ಮೆ, ಶ್ರದ್ಧೆ, ಆಸಕ್ತಿ, ಉತ್ಸಾಹಗಳ ವಜ್ರಕವಚದ ರಕ್ಷೆಯನ್ನು ಪಡೆದವರು

ಮಾತ್ರ ಹಳ್ಳಿಗಾಡಿನ ಮುಳ್ಳು ಬೇಲಿಗಳನ್ನು ಹಾದು ಹಾಡುವ ಮಂದಿ ಯನ್ನು ಒಲಿಸಿಕೊಂಡು ದೀರ್ಘ ಕವನಗಳನ್ನು ಸಂಗ್ರಹಿಸಿ ತರುವುದರಲ್ಲಿ ಸಾರ್ಥಕ್ಯವನ್ನು ಪಡೆದಾರು. ಒಂದೇ ನೀಳ್ಗವನವನ್ನು ಎರಡು ಮೂರು ನಾಲ್ಕು ಕಡೆಗಳಲ್ಲಿ ಸಂಗ್ರಹಿಸಿ, ಪರಿಷ್ಕರಿಸಿ, ಪರಿಶೋಧಿಸಿ, ಶೈಥಿಲ್ಯವನ್ನು ಅಸ್ಪಷ್ಟತೆಯನ್ನು ನೀಗಿಸಿಕೊಂಡು ಸರಿಯಾದ ಪಾಠಾಂತರಗಳೊಡನೆ ಪ್ರಕ ಟಿಸಲು ಸಾಧ್ಯವಾದಿತು. ಈ ಕಾರ್ಯವನ್ನು ಶ್ರೀ ಕರಾಕೃ ಅವರು ಬಹು ಸಾಮರ್ಥ್ಯದಿಂದ ನಿರ್ವಹಿಸಿ, ಯಶಸ್ವಿಯಾಗಿದ್ದಾರೆಂದು ಪ್ರಕೃತ ಕೃತಿಯ ನಿದರ್ಶನದಿಂದ ಹೇಳಬಹುದು.

ಜಾನಪದ ಸಾಹಿತ್ಯ ವೃಕ್ಷದಲ್ಲಿ ಬಿಡಿಹಾಡುಗಳು ನಿಗಿನಿಗಿ ಅರಳಿ ನಗುವ ಕುಸುಮ ಸಂಕುಲವಾದರೆ, ಕಥನಗೀತೆಗಳು ಪರಿಪಕ್ವವಾದ ರಸ ಭರಿತ ಫಲಗಳಿದ್ದಂತೆ. ಅವುಗಳ ತೂಕವು ಹೆಚ್ಚು ; ಮೌಲ್ಯವೂ ಹಿರಿದು. ಒಂದೊಂದು ಕಥನಕವನವೂ ಒಂದೊಂದು ರಸಗವಿತೆಯಾಗಿ ಹಬ್ಬಿನಿಂತು, ತಮ್ಮದೇ ಆದ ಛಂದಸ್ಸಿನಲ್ಲಿ, ತಮ್ಮದೇ ಆದ ವಸ್ತು ವಿಶೇಷದಲ್ಲಿ, ತಮ್ಮದೇ ಆದ ನಿರೂಪಣಾ ವಿಧಾನದಲ್ಲಿ ಸಹಜಕಾವ್ಯಕಾಂತಿಯಿಂದ ಮಿರುಗಿವೆ. ಪ್ರಾಚೀನ ಪ್ರೌಢಕವಿಗಳು ಕಾವ್ಯರಚನೆಯಲ್ಲಿ ಅನುಸರಿಸಿದ ನಾಯಕ ನಿಷ್ಠೆಯ ಛಾಯೆ ಇವುಗಳ ಮೇಲೂ ಬಿದ್ದಂತೆ ಕಂಡರೂ ಆಸ್ಥಾನದ ವೈಭವ ವನ್ನಾಗಲೀ, ರಾಜನ ಪ್ರತಿಷ್ಠೆ ಗೌರವ, ಶಕ್ತಿ, ಸಾಮರ್ಥ್ಯಗಳನ್ನಾಗಲೀ, ಆಡಂಬರ, ಶೃಂಗಾರ, ವೀರಾದಿಗಳನ್ನಾಗಲೀ ವರ್ಣಿಸುವುದರಷ್ಟರಲ್ಲಿಯೇ ತೃಪ್ತರಾಗುವ ಮಾರ್ಗವನ್ನು ಅನುಸರಿಸಿದವರಲ್ಲ ಜಾನಪದ ಕವಿಗಳು. ಪೂರ್ವಕವಿಗಳು ಸಂಪೂರ್ಣವಾಗಿ ನಿರ್ಲಕ್ಷಿಸಿದ ಜನಸಾಮಾನ್ಯ ಚಿತ್ರಣದ ಒಂದು ಕೊರತೆಯನ್ನು ತುಂಬಲೋ ಎಂಬಂತೆ ತಮಗೆ ಬೇಕಾದ ಸಾಹಿತ್ಯ

ವನ್ನು ನಿರ್ಮಿಸಿಕೊಂಡು ತಮ್ಮ ನದಿಯ ಝರಿಗೆ ತಾವೇ ಅಡ್ಡಗಟ್ಟೆಯನ್ನು ಹಾಕಿ, ಅದರ ಫಲವನ್ನು ಜನತೆಗೆ ನೀಡಿದ ಪುಣ್ಯಭಾಗಿಗಳವರು, ಯಾವ ಆತ್ಮಪ್ರಶಂಸೆಗಾಗಲೀ, ಸ್ವಾಮಿಪ್ರಶಂಸೆಗಾಗಲೀ, ಪಾಂಡಿತ್ಯ ಪ್ರದರ್ಶನಕ್ಕಾಗಲೀ ಕೈ ಹಚ್ಚದೆ ನೇರವಾಗಿ, ರಸಪೂರ್ಣವಾಗಿ, ಜನಸಾಮಾನ್ಯರಿಗೆ ನಿಲುಕುವ ರೀತಿಯಲ್ಲಿ ತಮ್ಮ ಅನುಭವಕ್ಕೆ ತಕ್ಕಂತೆ, ತಮ್ಮ ಕಲ್ಪನೆಗೆ ತಕ್ಕಂತೆ ಕಥೆಗಳನ್ನು ಕಟ್ಟಿ ಹಾಡಿದ ಅವರು ಅಜ್ಞಾತರಾದರೂ ಅವರ ರಚನೆಗಳು ಅಮರತೆಯ ಮೆಟ್ಟಲೇರಿ ಇಂದಿಗೂ ಉಳಿದುಬಂದಿರುವುದು ಅವುಗಳಲ್ಲಿ ಸಹಜವಾದ, ಕಾವ್ಯಸೌಂದರ್ಯವಿರುವುದರಿಂದಲೇ, ತಮ್ಮ ಬದುಕಿಗೆ ಪ್ರೇರಕಶಕ್ತಿಯಾಗುವ, ಸ್ಫೂರ್ತಿ ಸಂಕೇತವಾಗುವ, ಚೇತನದಾಯಿಯಾಗುವ ಆದರ್ಶಕಥಾ ಶ್ರೋತಗಳು ನಿರಂತರವೂ ಅವರ ಹೃದಯರಂಗದಲ್ಲಿ ಪ್ರವಹಿಸಿ, ಅವರ ಭಾಷೆಯಲ್ಲಿಯೇ ಮೂಡಿನಿಂತು ಅಚ್ಚಗನ್ನಡ ದೊಲವಿನ ನಿಚ್ಚಳವಾದ ಕಾರಂಜಿಗಳಾಗಿವೆ. ಬಹು ಹಿಂದೆಯೇ ಗೆದ್ದಲಿನ ಪಾಲಗಿಯೋ, ಹುಳುಹುಪ್ಪಟೆಗಳ ಆಹಾರವಾಗಿಯೋ, ಅಗ್ನಿಗೆ ತುತ್ತಾಗಿಯೋ ನಶಿಸಿಹೋಗುವ ದೌರ್ಭಾಗ್ಯ ದೈವವಶದಿಂದಲೇ ಇವಕ್ಕೆ ಒದಗಲಿಲ್ಲವೆಂಬಂತೆ ಜನತೆಯ ಬಾಯಲ್ಲಿಯೇ ಪರಂಪರಾಗತವಾಗಿ ಉಳಿದು ಬಂದ ನಮ್ಮ ಅಚ್ಚ ಸಂಸ್ಕೃತಿಯ ರತ್ನದರ್ಪಣಗಳಾಗಿವೆ. ಅಂಥ ಹಾಡುಗಳನ್ನು ಹಿಡಿದಿಟ್ಟ ಈ ಸಂಕಲನ ಕನ್ನಡ ಜನಪದಸಾಹಿತ್ಯ ಪ್ರಕಟಣೆಗಳ ಸಾಲಿನಲ್ಲಿ ಚರಿತ್ರಾರ್ಹ ಕೃತಿಯಾಗಿ ನಿಲ್ಲಲು ಯೋಗ್ಯವಾದದೇ ಸರಿ.

ನಾಲ್ಕು ಒಳಸಂಪುಟಗಳಲ್ಲಿ ಮೂವತ್ತೈದು ದೀರ್ಘ ಕವನಗಳನು ಸಂಗ್ರಹಿಸಿಕೊಟ್ಟಿರುವ ಈ ಕೃತಿಯಲ್ಲಿ ಲೌಕಿಕ, ಅಲೌಕಿಕ, ಪೌರಾಣಿಕ, ಐತಿಹಾಸಿಕ ಮುಂತಾಗಿ ವಸ್ತುವಿಂಗಡಣೆಯನ್ನು ಮಾಡಿಕೊಳ್ಳಬಹುದು.

ಪರಶಿವನಿಂದ ಹಿಡಿದು ಪಾಮರನವರೆಗೂ ಇಲ್ಲಿನ ಕಥಾನಾಯಕರು ಮೆರೆದಿದ್ದಾರೆ. ಕೇವಲ ಪುರುಷರೇ ಕಥಾನಾಯಕರಾಗಬೇಕೆಂಬ ನಿಯಮಕ್ಕೇನೂ ಒಳಗಾಗದೆ ಅನೇಕ ಸ್ತ್ರೀ ಪಾತ್ರಗಳನ್ನೇ ಪ್ರಮುಖವಾಗುಳ್ಳ ಕಥೆಗಳೂ ಇಲ್ಲಿ ಹೆಚ್ಚಾಗಿವೆ. ಇರ್ಣೋಬಿ, ಬಂಜೆಹೊನ್ನಮ್ಮ, ಉತ್ತರದೇವಿ. ಕೋಳೂರು ಕೊಡಗೂಸು, ನಾಗರಗನ್ನೆ, ಕಲಿಯುಗದ ಬಾಲೆ,ಮರೆಯಾದ ಮಲಕವ್ವ, ನಾನಿದ್ದು ಬಂದೇನು ನಡಿರಣ್ಣ ಮುಂತಾದ ಕಥನಗೀತಗಳು ಎಂಥ ಹೃದಯವನ್ನಾದರೂ ಕಲಕುವಂತಿವೆ. ಸ್ತ್ರೀಯ ಅಸಾಹಯಕತೆ, ಕ್ರೂರವಿಧಿಯು ಕೈವಾಡದಿಂದಲೋ, ದುಷ್ಟರ ಹೀನ ದೃಷ್ಟಿಯಿಂದಲೋ, ಇನ್ನಾವುದೋ ದುರಾದೃಷ್ಟಕರ ಘಟನೆಯಿಂದಲೋ ಕಷ್ಟನಷ್ಟಕ್ಕೊಳಗಾಗುವ ಸ್ತ್ರೀಯನ್ನು ಜಾನಪದಕವಿಗಳು ಎಷ್ಟು ಸಹಾನುಭೂತಿಯಿಂದ ನೋಡಿದ್ದಾರೆ! ಎಷ್ಟು ಕರುಣಾಪೂರ್ಣವಾಗಿ, ಕೇಳುವವರ ಕಣ್ಣುಗಳಲ್ಲಿ ನೀರೂರುವಂತೆ ಚಿತ್ರಿಸಿದ್ದಾರೆ. ಉತ್ತರದೇವಿ, ನಾಗರಗನ್ನೆಗಳಂತೂ ಅತ್ಯುಜ್ವಲ ಪಾತ್ರರತ್ನಗಳು. ಅವರ ಕಥೆ ಅಪೂರ್ವಕಲಾಮಯವಾದುದು. ಇನ್ನು ಪುರುಷ ಪಾತ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ ಕಥೆಗಳಲ್ಲಿ ವಿಶೇಷವಾಗಿ ಶೃಂಗಾರ, ವೀರ, ಹಾಸ್ಯಾದಿಗಳು ಕಂಡುಬರುತ್ತವೆ. ದೇವದೇವತೆಗಳೂ ಸಾಮಾನ್ಯ ಮಾನವರಂತೆ ಹಾವ ಭಾವ ವಿಲಾಸಗಳನ್ನು ಮೆರೆಯುವ ಬಗೆ ಸೋಜಿಗಪೂರ್ಣವೆನಿಸುವಂತೆ ಚಿತ್ರಿತವಾಗಿವೆ. ಸಾಮಾನ್ಯ ಜನಜೀವನದಿಂದ ಎತ್ತಿಕೊಂಡ ಕಥಾವಸ್ತುಗಳಾದ 'ತಬ್ಬಲಿರಾಯ,' 'ಚೆನ್ನಿಗರಾಯ,' 'ಹೊಂಗೇಲಿ ಈರಣ್ಣ ಮಡಿದಾನೆ' 'ಚಿಕ್ಕಜಾಜಿ ಮರಕೆ ತಲೆಕೊಟ್ಟ' ಮುಂತಾದ ಕಥೆಗಳಲ್ಲಿ ಬರುವ ಪುರುಷಪಾತ್ರಗಳ ಚಿತ್ರಣಗಂಭೀರವಾಗಿಯೂ, ಉದಾತ್ತವಾಗಿಯೂ ಮೂಡಿಬಂದು ಹೃದಯವನ್ನು ಸೆರೆ

ಹಿಡಿಯುತ್ತವೆ. ಐತಿಹಾಸಿಕ ಕಥಾನಕಗಳಲ್ಲಿ 'ಪಿರಿಯಾಪಟ್ಟಣದ ಕಾಳಗ,' ಪೌರಾಣಿಕ ಕಥಾನಕಗಳಲ್ಲಿ 'ಚೆನ್ನಿಗಜೋಗಯ್ಯ' ಮುಂತಾದುವೂ, ಲೌಕಿಕ ಕಥಾನಕಗಳಲ್ಲಿ 'ಮಳೆರಾಯ ಮಾರ್ದೆಣ್ಣ' ಮುಂತಾದ ನಿಳ್ಗವಿತೆಗಳನ್ನು ಹೆಸರಿಸಬಹುದು. 'ನಾಗರಗನ್ನೆ' ಯಂತೂ ಸಂಕಲನದ ಅತ್ಯುತ್ತಮ ಕಥನಗೀತೆಯಾಗಿರುವಂತೆ ಅತ್ಯಂತ ದೀರ್ಘವಾದುದಾಗಿಯೂ ಇದೆ. ಸುಮಾರು ನಲವತ್ತು ಪುಟಗಳವರೆಗೆ ಬೆಳೆದಿರುವ ಈ ಕಥೆಯಲ್ಲಿ ಎಲ್ಲಿಯೂ ಶೈಥಿಲ್ಯತೋರದೆ ಒಂದು ಅಲೌಕಿಕ ಪ್ರಪಂಚವೇ ನಮ್ಮ ಸುತ್ತ ಸೃಷ್ಟಿಯಾದಂತೆ ಭಾಸವಾಗಿ ಕೊನೆಯವರೆಗೂ ಕಥೆ ನಿಲ್ಲದೆ ಕುತೂಹಲ ಪೂರ್ಣವಾಗಿ ಓಡುವ ರೀತಿ ಬೆರಗಾಗುವಂತಿದೆ. ತಮ್ಮ ಅನೇಕ ಕಷ್ಟ ಪರಂಪರೆಗಳ ನಡುವೆ ಹಳ್ಳಿಯ ವನಿತೆಯರು ಇಷ್ಟು ದೀರ್ಘಕವನಗಳನ್ನು ನೆನಪಿನಲ್ಲಿಟ್ಟುಕೊಂಡು ಹೇಳುವ ಸ್ಮರಣಶಕ್ತಿ ಸೋಜಿಗಪಡಬೇಕಾದುದೆ. ಇಂಥ ಕಥೆಗಳನ್ನು ನೀಡಿದ ತಾಯಂದಿರಿಗೆ ಯಾವ ಬಹುಮಾನವನ್ನು ನೀಡಿ ಪ್ರೋತ್ಸಾಹಿಸಿದರೂ ಅಲ್ಪವೆ.

ಕೃತಿಯನ್ನು ಕನ್ನಡದ ಹಿರಿಯ ವಿದ್ವಾಂಸರೂ, ಸಂಶೋಧಕರೂ ಆದ ಪ್ರೊ|| ಡಿ. ಎಲ್. ನರಸಿಂಹಾಚಾರ್ಯರಿಗೆ ಅರ್ಪಿಸಿರುವುದು ತುಂಬ ಔಚಿತ್ಯ ಪೂರ್ಣವಾಗಿದೆ. ಮತ್ತೊರ್ವ ಪ್ರಮುಖ ವಿದ್ವನ್ಮಣಿಗಳಾದ ಪ್ರೊ|| ತೀ. ನಂ. ಶ್ರೀಕಂಠಯ್ಯನವರು ಹರಕೆಯರೂಪದ ಮುನ್ನುಡಿಯನ್ನು ಬರೆದು, ಈ ಕಾರ್ಯದ ಹೆಚ್ಚಳವನ್ನು ಕೊಂಡಾಡಿದ್ದಾರೆ. ಈ ಕಥೆಗಳ ಬಗ್ಗೆ ದೀರ್ಘವಿವೇಚನೆ ನಡೆಸುತ್ತ ಶ್ರೀ ಜಿ. ವರದರಾಜರಾಯರು 'ಇವುಗಳಲ್ಲಿ ಅಚ್ಚಳಿಯದ ಆಶ್ಚರ್ಯವಿದೆ, ಬಾಡಿಬಡವಾಗದ ಹೊಸತನವಿದೆ, ತುಂಬಿ ತುಳುಕುವ ಭಾವಾವೇಶವಿದೆ, ನಿತ್ಯಜೀವನದ ಮಿಡಿತವಿದೆ' ಎಂದು

ಅವುಗಳ ನಿಜವಾದ ಮೌಲ್ಯವನ್ನು ಅಳೆದು ವಿಚಾರಪೂರ್ಣ ದೀರ್ಘ ಮೆಚ್ಚು ನುಡಿಯನ್ನು ಬೆಳೆಸಿದ್ದಾರೆ. ತರುಣ ಕಲಾವಿದರಾದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರ ರೇಖಾಚಿತ್ರಗಳೂ ಕೃತಿಗೆ ಮೆರುಗನ್ನು ಕೊಟ್ಟಿವೆ. ಗ್ರಾಮ್ಯಪದಗಳಿಗೆ ಕೊಟ್ಟಿರುವ ಅರ್ಥ ಸೂಚಿಯೂ, ಓದುಗರ ಸೌಲಭ್ಯ ದೃಷ್ಟಿಯಿಂದ ಕೊಟ್ಟಿರುವ ಕಥಾಪರಿಚಯವೂ, ಒಂದೊಂದು ಕಥನಗೀತೆಯನ್ನೂ ಸಂಗ್ರಹಿಸುವುದರ ಹಿನ್ನೆಲೆಯ ಅನುಭಾವಸಾರದ 'ಸಾಹಸಕಥೆ' ಯನ್ನೂ ಕೊಟ್ಟು ಕೃತಿಯನ್ನು ಮತ್ತೂ ಆಕರ್ಷಕವಾಗಿ ಮಾಡುವ ಯತ್ನ ನಡೆದಿದೆ. ಇಷ್ಟು ಸಮರ್ಪಕವಾಗಿ, ಸರ್ವಾಂಗ ಸುಂದರವಾಗಿ, ಅತ್ಯಂತ ಬೆಲೆಯಾದ ಪುಸ್ತಕವೊಂದನ್ನು ಹೊರತಂದು ಜನಪದ ಸಾಹಿತ್ಯದ ಹಿರಿಮೆಯನ್ನು ಕನ್ನಡಿಗರಿಗೆ ಪರಿಚಯಿಸುದರ ಜೊತೆಗೆ ತಮ್ಮ ಅಪಾರ ಸಾಹಿತ್ಯ ಪ್ರೇಮವನ್ನು ಮೆರೆದಿರುವ ಸಾಹಸಿಗರಾದ ಶ್ರೀ ಕ ರಾ ಕೃ ಅವರ ಈ ಪ್ರಕಟಣೆಯನ್ನು ಆದರದಿಂದ ಬರಮಾಡಿಕೊಳ್ಳಬಹುದು.

—ಪುಸ್ತಕ ಪ್ರಪಂಚ

* * * *

ಜಾನಪದಗೀತೆಗಳ ಅನೇಕ ಸಂಕಲನಗಳನ್ನು ಹೊರತಂದಿರುವ ಶ್ರೀ ಕ.ರಾ.ಕೃ. ಅವರು ಈಗಾಗಲೇ ಕನ್ನಡ ಸಾರಸ್ವತ ಕ್ಷೇತ್ರಕ್ಕೆ ಪರಿಚಿತರಾಗಿದ್ದಾರೆ. ಇದೀಗ ಬಂದಿರುವ ಅವರ ಮತ್ತೊಂದು ಸಂಗ್ರಹ—'ಜಾನಪದ ಕಥನಗೀತೆಗಳು'—ಶ್ರೀಯುತರ ಸಾಹಿತ್ಯಸೇವೆಗೆ ಕಳಶಪ್ರಾಯವಾಗಿದೆ. ಕನ್ನಡದಲ್ಲಿ ಭಾವಗೀತಾತ್ಮಕವಾದ ನಾಡಪದಗಳ ಸಂಗ್ರಹಗಳು ಹಲವಾರು

ಬಂದಿವೆ. ಆದರೆ ವರ್ಣನಾತ್ಮಕವಾದ ಕಥನಕವನಗಳಿಲ್ಲದ ಅರಕೆ ಎದ್ದು ಕಾಣುತ್ತಿತ್ತು. ಈ ಕೊರತೆಯನ್ನು ಪ್ರಕೃತ ಗ್ರಂಥ ಸ್ವಲ್ಪಮಟ್ಟಿಗಾದರೂ ನಿವಾರಿಸಿದೆಯೆಂದು ಧೈರ್ಯವಾಗಿ ಹೇಳಬಹುದು. ಆದುದರಿಂದ ಈ ಜನಪದ ಕಥನಗೀತೆಗಳ ಸಂಕಲನಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ, ತೂಕವಿದೆ. ಇದನ್ನು ಪ್ರಕಟಿಸಿ ಕ.ರಾ.ಕೃರವರು ನಾಡಿನ ವಿಶೇಷ ಮನ್ನಣೆಗೆ ಪಾತ್ರರಾಗಿದ್ದಾರೆ.

ಜಾನಪದ ಕವಿಗಳು ಮುಕ್ತಕಗಳಲ್ಲಿ ತಮ್ಮ ಸುಖದುಃಖಗಳನ್ನು, ಭಾವಾನುಭವಗಳನ್ನು ವ್ಯಕ್ತಗೊಳಿಸಿರುವಂತೆ, ತಮ್ಮ ಮನಸ್ಸಿನಲ್ಲಿ ಅಚ್ಚೊತ್ತಿದ ವ್ಯಕ್ತಿಯನ್ನೋ ಘಟನೆಯನ್ನೋ ಕುರಿತು ಕಥೆಕಟ್ಟಿ ಹಾಡಿದ್ದಾರೆ. ಸಾಮಾಜಿಕ, ಕಾಲ್ಪನಿಕ, ಪೌರಾಣಿಕ, ಹಾಗೂ ಐತಿಹಾಸಿಕವೆಂದು ಈ ಕಥೆಗಳಲ್ಲಿ ಭೇದಗಳನ್ನು ಕಲ್ಪಿಸಬಹುದು. ಇಂಥ ನೀಳ್ಗವನಗಳ ವಸ್ತುವೈವಿಧ್ಯ ಮತ್ತು ಪಾತ್ರವೈವಿಧ್ಯ ಅನಂತವಾದುದು ; ನಿರೂಪಣೆಯಲ್ಲಿ ತೋರಿಬರುವ ಜಾಣ್ಮೆ ಅಚ್ಚರಿಗೊಳಿಸುವಂತಹುದು. ಈ ಜಾನಪದ ಕವಿಗಳ ಕಥನಕಲೆ ಆಧುನಿಕ ವಿಮರ್ಶೆಯ ಒರೆಗಲ್ಲಿನ ಮೇಲೂ ತನ್ನ ಸುವರ್ಣ ಗುಣವನ್ನು ಸ್ಥಾಪಿಸಿಕೊಳ್ಳಬಲ್ಲದು. ಅವರ ಕಲ್ಪನೆಯ ಮೋಡಿಗೆ ವಶವಾಗಿ ದೇವತೆಗಳು ನೆಲಕ್ಕಿಳಿಯುತ್ತಾರೆ, ಮರ್ತ್ಯರು ದೇವತೆಗಳಾಗಿ ಪೂಜೆಗೊಳ್ಳುತ್ತಾರೆ, ಬೇರೊಂದು ಲೋಕವೇ ಕಣ್ಣುಮುಂದೆ ತೆರೆದುಕೊಳ್ಳುತ್ತದೆ. ತಮಗೆ ಸರಿದೋರಿದ ನೀತಿಯನ್ನೋ ಆದರ್ಶವನ್ನೋ ಜನ ಇಂಥ ಕಥನಗೀತೆಗಳಲ್ಲಿ ಪರೋಕ್ಷವಾಗಿ ನಿರೂಪಿಸಿದ್ದಾರೆ. ಅನೇಕ ಗೀತೆಗಳು 'ಕಲೆಗಾಗಿ ಕಲೆ' ಎಂಬ ತತ್ತ್ವವನ್ನು ಸಮರ್ಥಿಸುವಂತಿವೆ. ಈ ಹಾಡುಗಳನ್ನು ಕಟ್ಟಿದವರ ಉದ್ದೇಶ ಮನೋರಂಜನೆ, ನೀತಿಬೋಧೆ,

ತನ್ಮೂಲಕ ಹೃದಯಸಂಸ್ಕಾರ ಜಾನಪದ ಕಥನಕವನಗಳ ಈ ಎಲ್ಲ ವೈಶಿಷ್ಟ್ಯ, ವೈವಿಧ್ಯ, ವಿಪುಲತೆ ಹಾಗೂ ಸೌಂದರ್ಯವನ್ನು ಕಾಣಬಹುದು ಪ್ರಸ್ತುತ ಸಂಕಲನ ಗ್ರಂಥದಲ್ಲಿ.

ಈ ಹೊತ್ತಿಗೆಯಲ್ಲಿ ಒಟ್ಟು ಮೂವತ್ತೈದು ಸ್ವಾರಸ್ಯವಾದ ಕಥನ ಗೀತೆಗಳಿವೆ. ಈ ಎಲ್ಲ ಹಾಡುಗಳ ವಿಸ್ತಾರವಾದ ವಿಮರ್ಶೆಗೆ ಇಲ್ಲಿ ಅವಕಾಶ ವಿಲ್ಲ. ಕೆಲವನ್ನು ಕುರಿತು ಪರಿಚಯ ರೂಪದಲ್ಲಿ ನಾಲ್ಕು ಮಾತುಗಳ ನ್ನಾಡಿ, ಪುಸ್ತಕದ ಕಡೆಗೇ ಬೆರಳು ತೋರಿಸಬಹುದಷ್ಟೆ.

ಶೃಂಗಾರವನ್ನು ಚಿತ್ರಿಸುವ ಹಾಡುಗಳನ್ನು ಮೊದಲು ನೋಡ ಬಹುದು. ಇವುಗಳಲ್ಲಿ ಶಿವನಿಗೆ ಸಂಬಂಧಿಸಿದವೇ ಹೆಚ್ಚಾಗಿವೆ. ಹರ-ಗಿರಿಜೆ ಯರ ಪರಿಣಯ ಶಿವ-ಗಂಗೆಯರ ಪ್ರೇಮ, ನಂಜುಂಡ-ಚಾಮುಂಡಿಯರ ಪ್ರಣಯ ಮುಂತಾದುವನ್ನು ಕುರಿತು ಸರಸವಾದ ಗೀತೆಗಳು ಇಲ್ಲಿವೆ. 'ಗಿರಿಜಾ ಮಲ್ಲಯ್ಯ,' 'ಅಂಬಿಗರ ಗಂಗ,' 'ಹುಟ್ಟಿದಾಳೆ ಗೌರಮ್ಮ ಭೂಲೋಕದಲ್ಲಿ,' 'ನಾ ನಂಜುಂಡಲಿಂಗ ಬಿಡೆ ಸೆರಗ' ಇವುಗಳಲ್ಲಿ ಜನ ಪದ ಕವಿಗಳು ಶುಚಿಯಾದ ರಸಿಕತೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ನಿದರ್ಶನಕ್ಕಾಗಿ ಒಂದೆರಡು ಪದ್ಯಗಳನ್ನು ನೋಡಬಹುದು :

ಎಡಗಡೆ ಮಾಳವ್ವ ಬಲಗಡೆ ಪಾರ್ವತಿದೇವಿ
ಇಬ್ಬರ ನಡುವೆ ಘನಲಿಂಗ—ಕೂತುಕೊಂಡು
ಇಬ್ಬರಿಗ್ಹೂವ ಮುಡಿಸ್ಯಾನೆ

('ಹೆಸರಿಗೆ ದೊಡ್ಡೋನು ಶಿವತಂದ')

ಕದವ ತೆಗೆದಾಳೆ ಜೋತುರದ ಸೆರಗ ಹಿಡಿದಾಳೆ
ನಿಮ್ಮ ಹೆಸರ್ಹೇಳಿ ಸ್ವಾಮಿ ಕುಲವ್ಹೇಳಿ
ನಂಜನಗೂಡಿನ ನಡುವೆ ತೋಪಿನಲ್ಲಿರುವ
ನಾ ನಂಜುಂಡಲಿಂಗ ಬಿಡೆ ಸೆರಗ
('ನಾ ನಂಜುಂಡಲಿಂಗ . . .')

'ನುಚ್ಚಾಯ್ತು ಸೀರ ಹೊಳೆಯಾಗೆ' ಎಂಬ ಕವನ ಜನಜೀವನಕ್ಕೆ ಬಹಳ ಹತ್ತಿರವಾದುದು; ರಹಸ್ಯ ಪ್ರೇಮವನ್ನದು ಚಿತ್ರಿಸುತ್ತದೆ. ಹೆಣ್ಣೊಬ್ಬಳು ತನ್ನ ಪ್ರಣಯಿಯ ಮರಣವಾರ್ತೆಯನ್ನು ತಿಳಿದಾಗ ಹಿಡಿದಿದ್ದ ಕೊಡವನ್ನು ಎತ್ತಿಹಾಕುವುದೂ, ಅದರ ನೆವದಲ್ಲಿ ದುಃಖಿಸಿ ಅದು ತನಗೆ ಬಹಳ ಪ್ರಿಯವಾದ ಕೊಡವಾಗಿತ್ತೆಂದು ಗೆಳತಿಯರಿಗೆ ಕಾರಣ ಹೇಳುವುದೂ ಒಳ್ಳೆಯ ಸಂಕೇತಗಳಾಗಿವೆ. 'ಕೃಷ್ಣ-ಕೊರವಂಜಿ' ಎಂಬುದು ಕೃಷ್ಣರುಕ್ಮಿಣಿಯರ ಪ್ರೇಮ ವಿವಾಹವನ್ನು ಕುರಿತ ರಮ್ಯವಾದ ಗೀತೆ.

'ಮದುವಣ್ಣ' ಎಂಬ ಹಾಡು ಹಳ್ಳಿಯ ಬಾಳಿನ ಒಂದು ಮುಖವನ್ನು ತೋರಿಸುತ್ತದೆ; ಮದುವೆಯ ಹಲವಾರು ಚಿತ್ರಗಳಿನ್ನಿಲ್ಲಿ ನೋಡುತ್ತೇವೆ. ವಿವಾಹದ ಸಂದರ್ಭದಲ್ಲಿ ಗೀತೆಗಳನ್ನು ಹಾಡುವುದು, ಮದುವಣಿಗನನ್ನು ಹಾಡಿನ ಮೂಲಕ ಹಾಸ್ಯಮಾಡುವುದು—ಇದೆಲ್ಲ ಈಗ ಮರೆಯಾಗುತ್ತಿರುವ ಸಂಪ್ರದಾಯ. ಹಿಂದೆ ವಿವಾಹದ ಅನಿವಾರ್ಯ ಅಂಗವಾಗಿದ್ದ ಈ ಪದ್ಧತಿ ಈ 'ಮದುವಣಿಗ'ದಲ್ಲಿ ಪ್ರತಿಬಿಂಬಿತವಾಗಿದೆ. ಮದುವೆಮನೆಯ ಗಡಿಬಿಡಿ, ಸಂಭ್ರಮ, ಮಂಗಳಕಾರ್ಯಗಳ ವಿವರ, ವಧೂವರರ ವರ್ಣನೆ—ಇವೆಲ್ಲ ಚೆನ್ನಾಗಿ ಮೂಡಿಬಂದಿವೆ ಈ ಗೀತದಲ್ಲಿ. ವರನನ್ನು ಕುರಿತ ಹಾಸ್ಯದ ಪದ್ಯಗಳಲ್ಲೊಂದು :

ಹಾಗೆ ಗಾಜಿನಕಂಬ ಹೀಗೆ ಗಾಜಿನಕಂಬ
ಸೋಕದೆ ಬಾರೋ ಮದುವಣ್ಣ—ನಿಮ್ಮತ್ತೆ
ಸೋಕಿದರ್ಹೆಣ್ಣ ಕೊಡಳಂತೆ.

'ಸಂಗಾತಿ' ಎಂಬ ಕವನದಲ್ಲಿ ಇಬ್ಬರು ಗೆಳತಿಯರ ಆತ್ಮೀಯ ಸ್ನೇಹದ ಚಿತ್ರವಿದೆ.

ಸಂಗಾತಿ ಬಾರೆ ಸಾದು ನಿಂಬೆಹಣ್ಣೆ
ಉಂಗುರವೆ ಬಾರೆ ಬೆರಳೀಗೆ—ನಡುತೋಟ್ದ
ಹೊಂಬಾಳೆ ಬಾರೆ ಕಳಸಕೆ.

'ಒಡ್ಡರ ಬೋಯಿ' ಎಂಬ ಹಾಡಿನಲ್ಲಿ ಊರಿನ ಕಲ್ಯಾಣ ಸಾಧನೆಗಾಗಿ ಆತ್ಮಾರ್ಪಣ ಮಾಡಿದ ಒರ್ವ ನಾರೀಮಣಿಯ ತ್ಯಾಗದ ಕಥೆ ನಿರೂಪಿತವಾಗಿದೆ. 'ಬಂಜೆ ಹೊನ್ನಮ್ಮ' ಎಂಬ ಹಾಡಿನಲ್ಲಿ ಬಂಜೆತನದ ದಾರುಣತೆ ಮಿಡಿಯುತ್ತಿದೆ. ಸ್ತ್ರೀಯರ ಹೃದಯದ ನೈಸರ್ಗಿಕವಾದ ತುಡಿತವನ್ನು ಇಂಥ ಪದ್ಯಗಳಲ್ಲಿ ನೋಡಬೇಕು. 'ಇರೋಬಿ,' 'ಚೆನ್ನಿಗರಾಯ,' 'ಮುನಿಯಾಗಿ ಬಂದ,—ಇತ್ಯಾದಿ ಹಾಡುಗಳಲ್ಲಿ ಹೆಣ್ಣಿನ ದೃಢವಾದ ಶೀಲ ಮತು ಪತಿಭಕ್ತಿ ಚಿತ್ರಿತವಾಗಿವೆ. ಹೀಗೆ ಹೆಣ್ಣಿನ ತ್ಯಾಗ, ಶೀಲ ಸಹನೆ ಮುಂತಾದ ಸದ್ಗುಣಗಳನ್ನು ನಿರೂಪಿಸುವ ಕಥೆಗಳೇ ಹೆಚ್ಚು. ತದ್ವಿರುದ್ಧವಾದ ಗುಣಗಳನ್ನುಳ್ಳ ಸ್ತ್ರೀಯರೂ ಈ ಕಥೆಗಳಲ್ಲಿ ಇಲ್ಲದಿಲ್ಲ.

ಸಾವಿನ ಸಮಸ್ಯೆಯ ಕಡೆಗೂ ಜಾನಪದ ಕವಿಗಳ ಗಮನ ಹರಿದಿದೆ. 'ಹಬ್ಬೋಗೊ ಕುಡಿಯ ಹರಕೊಂಡ,' 'ನಾನಿದ್ದು ಬಂದೇನು ನಡೀರಣ್ಣ,' ಫಲ ಬಿಡುವ ಮರಗಳ ಕಡಿಸ್ಯಾನೆ'—ಈ ಹಾಡುಗಳಲ್ಲಿ ಸಾವಿನ ಅನಿವಾರ್ಯ

ತೆಯನ್ನು ಮನಗಾಣಿಸಿದ್ದಾರೆ. ಯಮನೊಡನೆ ನಡೆಯುವ ಸಂಭಾಷಣೆ, ಅವನು ಕೊಡುವ ಉತ್ತರ ಪರಿಣಾಮಕಾರಿಯಾಗಿವೆ. ಹೀಗೆ ಸಮಾಧಾನ ಹೇಳಿಕೊಂಡಿದ್ದಾರೆ ಜನ :

ನರಜನ್ಮ ಹೋಗೋವಾಗ ತಾಯಿಲ್ಲ ತಂದಿಲ್ಲ
ನ್ಯಾಯದೋರಿಲ್ಲ ದೊರೆಯಿಲ್ಲ—ರಂಗಪ್ಪ
ಹೋಗೋವಾಗ ನಾಯಿ ಕೂಡ ಹಿಂದೆ ಬರಲಿಲ್ಲ.

'ನಾಗರಗನ್ನೆ,' 'ತಬ್ಬಲಿರಾಯ'—ಇವು ಕಲ್ಪನಾಪ್ರಧಾನವಾದ ಕಥನಗೀತೆಗಳು. ಅವುಗಳದೇ ಬೇರೊಂದು ವಾತಾವರಣ ; ಅಲ್ಲಿ ತುಂಬಿದೆ ಅದ್ಭುತ ಘಟನೆಗಳ ಪರಂಪರೆ. 'ನಾಗರಗನ್ನೆ' ಎಲ್ಲರಿಗೂ ಗೊತ್ತಿರುವ ಬಾಲನಾಗಮ್ಮನ ಕಥೆ. ಬಾಲಕನೊಬ್ಬ ಮಾಯದ ಜೋಗಿಯ ಪ್ರಾಣ ಪಕ್ಷಿಯನ್ನು ಕೊಂದು, ಅವನ ಬಂಧನದಿಂದ ತನ್ನ ತಾಯಿಯನ್ನು ಬಿಡಿಸು ವುದು ಇದರ ವಸ್ತು. 'ತಬ್ಬಲಿರಾಯ' ಎಂಬ ಹಾಡಿನಲ್ಲಿ ದ್ರೋಹಕ್ಕೊಳ ಗಾಗಿ ಮಡಿದ ತನ್ನ ತಂದೆಯನ್ನು ಸೂರ್ಯ ನಾರಾಯಣನೆಂಬ ಬಾಲಕ 'ಹಂಚಿಕಡ್ಡಿ ರಥವ ಮಾಡಿ,' ಶಿವಪಾರ್ವತಿಯರನ್ನು ಬೇಡಿ ಬದುಕಿಸಿ ಕೊಂಡ ಕಥೆ ವಿದಿತವಾಗಿದೆ. ಇವು ಚಮತ್ಕಾರಯುಕ್ತವಾಗಿ ಮೊದಲಿಂದ ಕಡೆಯುತನಕವೂ ಕುತೂಹಲವನ್ನು ಸೆರೆಗೈಯುವ ಕಥೆಗಳು.

'ಕೋಳೂರ ಕೊಡಗೂಸು' ಬಾಲಕಿಯೊಬ್ಬಳ ಮುಗ್ಧ ಭಕ್ತಿ ಯನ್ನು ವರ್ಣಿಸುತ್ತದೆ. ಪ್ರೌಢಕವಿಗಳು ಈ ಕಥೆಯನ್ನು ಕಾವ್ಯಗಳಲ್ಲಿ ಚಿತ್ರಿಸಿರುವ ಪರಿಯೇ ಬೇರೆ: ಈ ಜಾನಪದ ಕಥನಗೀತೆಯ ರೀತಿಯೇ ಬೇರೆ.

ಬೆಟ್ಟ ಹತ್ತುವೋನೆ ಅಲ್ಲಿಂದ ಬೀಳುವೋನೆ
ದೃಷ್ಟೀಲಿ ಮಡುವ ಕಲಕೋನೆ—ಕೋಳೂರ
ಪುಟ್ಟಮಲ್ಲಯ್ಯ ಹಾಲ ಸಲಿಸ್ಹೇಳಿ—

ಮುಂತಾದ ನುಡಿಗಳಲ್ಲಿ ಕೊಡಗೂಸಿನ ಭಕ್ತಿ ಅಕೃತಕವಾಗಿ ಹೊಮ್ಮಿದೆ.

'ಪಿರಿಯಾಪಟ್ಟಣದ ಕಾಳಗ'ದ ವಸ್ತು ಚಾರಿತ್ರಿಕ. ಇದಕ್ಕೆ ಕವಿಯ ಕಲ್ಪನೆ ಬೆರೆತಿದೆ. ವೀರರಾಜ ದೊರೆಯ ಕಾಲದಲ್ಲಿ ಪಿರಿಯಾಪಟ್ಟಣ ಮೈಸೂರಿನ ವಶವಾದ ಘಟನೆ ಇಲ್ಲಿದೆ.

ಗಂಡಾದರೆ ದಂಡೆತ್ತಿ ಬರಲಯ್ಯ
ದಳವಾಯಿಯವರು ಹೇಡಿಯಾದರೆ
ತನ್ನರಮನೇಲಿರಲಯ್ಯ—

ಎಂದು ಶ್ರೀರಂಗಪಟ್ಟಣದ ದಳವಾಯಿಗೆ ಓಲೆ ಬರೆದ ವೀರರಾಜ ಆಪತ್ತನ್ನು ತಂದುಕೊಂಡು ಅಂತ್ಯದಲ್ಲಿ ಆತ್ಮಹತ್ಯ ಮಾಡಿಕೊಂಡಂತೆ ಚಿತ್ರಿಸಲಾಗಿದೆ. ಕರುಳಿರಿಯುವ ಈ ಹಾಡು ವೀರ ಕರುಣಗಳ ಸಂಗಮ.

ಜನಪದಕಾವ್ಯ ಜನಸಾಮಾನ್ಯರ ಬಾಳಿಗೆ ಅಂಟಿಕೊಂಡದ್ದು, ಅವರ ಅಂತರಂಗದಿಂದ ನೇರವಾಗಿ ಸ್ಫುರಿಸಿದ್ದು—ಎಂಬುದನ್ನು ಸಮರ್ಥಿಸುವ ಒಂದು ಬಿಡಿಪದ್ಯವನ್ನು ಕಡೆಯದಾಗಿ ಉದಾಹರಿಸಬಹುದು. 'ಉತ್ತರ ದೇವಿ' ಎಂಬ ಹಾಡಿನಲ್ಲಿ ತಾಯಿ ಮಗನಿಗೆ ಹೆಂಡತಿಯನ್ನು ತ್ಯಜಿಸೆಂದು ಹೇಳುತ್ತಾಳೆ. ಆಗ ಅವನು ಕೊಡುವ ಉತ್ತರ, ಅದಕ್ಕಾಗಿ ಬಳಸುವ ಉಪಮಾನ ಎಷ್ಟು ಸ್ವಾಭಾವಿಕವಾಗಿವೆ—ಪರಿಭಾವಿಸಿ :

ಬಿಟ್ಟು ಬಿಡುವೋಕೆ ಹಸುವೇನು ಕರುವೇನು
ಹತ್ತು ಸಾವಿರ ಸಭೆಗೂಡಿ—ತಂದ್ಹೆಣ್ಣ
ಹೇಗಮ್ಮ ನಾನು ಕಳುಹಲಿ ||

ಅಗುಳಿನಿಂದ ಅನ್ನದ ಪರೀಕ್ಷೆಯಾಗುವಂತೆ, ಇಷ್ಟರಿಂದಲೇ ಉಳಿದೆಲ್ಲ ಗೀತೆಗಳ ಉತ್ಕೃಷ್ಟತೆಯನ್ನು ಅರಿಯಬಹುದಾಗಿದೆ. ಪ್ರತಿಯೊಂದು ಕಥನಕವನದಲ್ಲೂ ಅದರದೇ ಆದ ಬಂಧುರತೆಯಿದೆ, ಹೃದ್ಯವಾದ ಗುಣ ವಿಶೇಷವಿದೆ. ಶೃಂಗಾರ, ವೀರ, ಕರುಣ, ಹಾಸ್ಯ ಮೊದಲಾದ ರಸಗಳ ಪ್ರತಿಪಾದನೆ, ವಸ್ತುವಿಗೆ ಅನುಗುಣವಾದ ಶೈಲಿ ಮತ್ತು ಛಂದಸ್ಸು—ಇವುಗಳಲ್ಲಿ ಜಾನಪದ ಕವಿಗಳು ತಮ್ಮ ಮೇಲ್ಮಟ್ಟದ ಪ್ರತಿಭೆಯನ್ನು ತೋರ್ಪಡಿಸಿದ್ದಾರೆ. ಅಚ್ಚಗನ್ನಡದ ಚೆಲುವು, ಸ್ವಭಾವೋಕ್ತಿ ಬಾಹುಳ್ಯ, ನಿರಾಭರಣ ಸೌಂದರ್ಯ—ಇವು ಬಗೆಯನ್ನು ಸೂರೆಗೊಳ್ಳುತ್ತವೆ. ಆದರೆ ಈ ಹಾಡುಗಳನ್ನು ಓದಿದಾಗ ದೊರಕುವುದು ಅರ್ಧ ಸ್ವಾರಸ್ಯ ಮಾತ್ರ. ಏಕೆಂದರೆ ಇವು ಹಾಡುಗಬ್ಬಗಳು, ಓದುಗಬ್ಬಗಳಲ್ಲ. ಸಹಜವಾದ ಧಾಟಿಯಲ್ಲಿ ಒಬ್ಬರೋ ಅಥವಾ ಒಟ್ಟಾಗಿ ಹಲವರೋ ಹಾಡಿದಾಗ ಇವು ಜೀವಂತವಾಗಿ, ರಸಭಾವಗಳ ಜೊತೆಗೆ ನಾದಮಾಧುರ್ಯವನ್ನೂ ಸೂಸಿ ಹೆಚ್ಚು ಪರಿಣಾಮಕಾರಿಯೂ, ಪ್ರಯೋಜನದಾಯಕವೂ ಆಗುತ್ತವೆ. ಹೀಗೆ ಹಾಡುವ ಕಾರ್ಯ ನಡೆದು ಜನಪದ ಕಾವ್ಯದ ಪುನರುದ್ಧಾರವಾಗಬೇಕು ; ಇವು ಸರ್ವ ಜನತೆಯ ನಾಲಗೆಯ ಮೇಲೆ ಮತ್ತೆ ನೆಲೆಗೊಂಡು ಸಂಸ್ಕೃತಿಯ ಪರಿಮಳವನ್ನು ಹರಡುವಂತಾಗಬೇಕು.

ಪ್ರಸ್ತುತ ಗೀತೆಗಳ ಕೀರ್ತಿಯಲ್ಲಿ ಅರೆಪಾಲು ಸಂಪಾದಕರದು. ಅವರ ಎಣೆಯಿಲ್ಲದ ಶ್ರದ್ಧೆ, ಉತ್ಸಾಹ, ಪರಿಶ್ರಮಗಳಿಲ್ಲದಿದ್ದರೆ ಈ ಆಣಿ

ಮುತ್ತುಗಳು ಯಾವ ಕೊಂಪೆಯಲ್ಲಿದ್ದು ಅಳಿದುಹೋಗುತ್ತಿದ್ದವೊ. ಕಥನ ಕವನಗಳ ಸಂಗ್ರಹಕಾರ್ಯ ಸುಲಭವಲ್ಲ; ಅದೆಷ್ಟು ದುಷ್ಕರವೆಂಬುದು ಸಂಪಾದಕರು ಹೇಳಿಕೊಂಡಿರುವ 'ಸಾಹಸದ ಕಥೆ'ಯಲ್ಲಿ ವಿದಿತವಾಗಿದೆ. ಜನಪದ ಸಾಹಿತ್ಯರಕ್ಷಣೆಯ ಈ ಉಪಕಾರಕ್ಕಾಗಿ ಕ.ರಾ.ಕೃ. ಅಭಿನಂದನಾರ್ಹರು ; ಅವರದು ಅನುಕರಣ ಯೋಗ್ಯವಾದ ಕಾರ್ಯ.

ಗ್ರಂಥಾಂತ್ಯದಲ್ಲಿ ಹಾಡುಗಳ ಸಾರಾಂಶವನ್ನು ತಿಳಿಸುವ 'ಕಥಾ ವಿಹಾರ'ವನ್ನು ಅಳವಡಿಸಿದ್ದಾರೆ; ಗ್ರಾಮ್ಯಶಬ್ದಗಳಿಗೆ ಅರ್ಥಕೊಟ್ಟಿದ್ದಾರೆ. ಇದರಿಂದ ರಸಾಸ್ವಾದನೆಗೆ ವಿಶೇಷ ಸೌಲಭ್ಯ ಉಂಟಾಗಿದೆ. ಜನಪದ ಸಾಹಿತ್ಯದ ವಿಚಾರದಲ್ಲಿ ಪರಿಣಿತರಾದ ಸಾಹಿತಿಗಳ ಅಭಿಪ್ರಾಯಗಳನ್ನಾಯ್ದು ಪ್ರತಿಯೊಂದು ಗೀತೆಗೂ ಮುನ್ನುಡಿಯಂತೆ ಬೇರೆ ಬೇರೆಯಾಗಿ ಅಳವಡಿಸಲಾಗಿದೆ. ಇದೊಂದು ಹೊಸ ವಿಧಾನ.

ಪ್ರಸ್ತುತ ಹೊತ್ತಿಗೆಗೆ ಪ್ರೊ. ತೀ. ನಂ. ಶ್ರೀಕಂಠಯ್ಯನವರು ಶುಭಾಶಂಸೆಯ 'ಮುನ್ನುಡಿ'ಯನ್ನೂ, ಶ್ರೀ ಜಿ. ವರದರಾಜರಾಯರು ದೀರ್ಘವೂ ವಿಚಾರ ಪೂರ್ಣವೂ ಆದ 'ಮೆಚ್ಚುನುಡಿ' ಯನ್ನೂ ಬರೆದಿದ್ದಾರೆ. ಈ ಕೃತಿಯನ್ನು ವಿದ್ವನ್ಮಣಿ ಶ್ರೀ ಡಿ. ಎಲ್. ನರಸಿಂಹಾಚಾರ್ಯರಿಗೆ ಸಮರ್ಪಿಸಿರುವುದು ಉಚಿತವಾಗಿದೆ. ಕಲಾವಿದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ಪುಸ್ತಕದ ಉದ್ದಕ್ಕೂ ಅಲ್ಲಲ್ಲಿ ಬರೆದಿರುವ ಗ್ರಾಮಜೀವನದ ಚಿತ್ರಗಳು ಆಕರ್ಷಕವಾಗಿವೆ.

ಇಂತು ಅಂತರಂಗ ಬಹಿರಂಗವೆರಡರಲ್ಲೂ ಅಂದಚಂದಗಳಿಂದ ಕೂಡಿರುವ ಈ ಉತ್ತಮಗ್ರಂಥಕ್ಕೆ ಕರ್ನಾಟಕದ ಮನೆಮನೆಯಲ್ಲೂ ಸ್ಥಾನ ದೊರೆಯಬೇಕು. ಒಟ್ಟಿನಲ್ಲಿ ಈ ಸಂಕಲನ ನಾಡಪದಗಳ ಇತಿಹಾಸದಲ್ಲಿ

ಒಂದು ನೂತನ ಅಧ್ಯಾಯ; ಆ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲು—ಎಂದರೆ ಉತ್ಪ್ರೇಕ್ಷೆಯಾಗಲಾರದು.

—ಪ್ರಬುದ್ಧ ಕರ್ಣಾಟಕ

*   *   *   *

ಈಚೆಗೆ ಬಹು ದೊಡ್ಡ ಮೊತ್ತದಲ್ಲಿ ಜಾನಪದ ಕಾವ್ಯವನ್ನು ಸಂಗ್ರಹಿಸಿ ಈಗಾಗಲೆ ಹಲವಾರು ಕಿರುಹೊತ್ತಿಗೆಗಳನ್ನು ಪ್ರಕಟಿಸಿರುವ ಶ್ರೀ 'ಕರಾಕೃ' ತಂದ ಕೈತುಂಬು ಪುಸ್ತಕ ಇದು. ಇದರಲ್ಲಿ ಬಯಲು ನಾಡು ಮಲೆನಾಡು ಮುಂತಾಗಿ ಬೇರೆ ಬೇರೆಪ್ರದೇಶಗಳಿಂದ ಆಯ್ದ ಮುವತ್ತೈದು ಕಥನಗೀತೆ ಗಳಿವೆ; ಬಹುಪಾಲು ದೀರ್ಘರಚನೆಗಳು. ಒಂದೊಂದು ಗೀತೆಯ ಮೊದ ಲಿಗೂ ಜಾನಪದಕಾವ್ಯಪ್ರಿಯರ ಉದ್ಗಾರ ಟಿಪ್ಪಣಿಗಳನ್ನು ಆಯ್ದು ಕೂಡಿಸಲಾಗಿದೆ. ಗ್ರಂಥದ ಕೊನೆಯಲ್ಲಿ ಈ ಗೀತೆಗಳ ಕಥಾಸಾರವನ್ನೂ, ಪ್ರಾದೇಶಿಕ ಪದಗಳ ಅರ್ಥವನ್ನೂ, ಪ್ರಸ್ತುತ ಸಂಪಾದಕರ ಜಾನಪದ ಕಾವ್ಯಸಂಗ್ರಹದ 'ಸಾಹಸ ಕಥೆ'ಯನ್ನೂ ಕೊಡಲಾಗಿದೆ. ಗ್ರಂಥ ಪ್ರೊ॥ ಡಿ. ಎಲ್. ಎನ್. ಅವರಿಗೆ ಅರ್ಪಿತವಾಗಿದೆ. ಪ್ರೊ॥ ತೀ. ನಂ. ಶ್ರೀ ಅವರು ಗ್ರಂಥಕ್ಕೆ 'ಮುನ್ನುಡಿ' ಬರೆದಿದ್ದಾರೆ. ಸಂಗಡ ಶ್ರೀ ಜಿ. ವರದ ರಾಜರಾವ್ ಅವರ 'ಮೆಚ್ಚುನುಡಿ' ಇದೆ. ಕವಚ ಹಾಗೂ ಪುಟಶೇಷ ಗಳು ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಅವರ ಚಿತ್ರಗಳಿಂದ ಅಲಂಕೃತವಾಗಿವೆ.

ಮುಖ್ಯವಾಗಿ ಇಲ್ಲಿನ ವಿಸ್ತೃತ ಸ್ವರೂಪ ಗ್ರಂಥವನ್ನು ವಿಶಿಷ್ಟವಾಗಿಸಿದೆ, ಗಣನೀಯವಾಗಿಸಿದೆ. ಇಲ್ಲಿನ ಕಥನಗಳಲ್ಲಿ ಪೌರಾಣಿಕವೆನ್ನ ಬಹುದಾದಂಥ

ಹರಿಹರರ ಕಲ್ಪಿತ ಪವಾಡ ಪ್ರಸಂಗಗಳಿವೆ, ಸಂಸಾರಲೀಲೆಗಳಿವೆ. (೧. ೧, ೧-೮, ೧-೧೧, ೩-೧, ೩-೬ ಇ,) ಕೃಷ್ಣ ಪಾರಿಜಾತ, ಗೋಪಿಕಾವಸ್ತ್ರ ಹರಣ, ಸುಭದ್ರಾಕಲ್ಯಾಣ ಮುಂತಾದ ಪ್ರಖ್ಯಾತ ಅಖ್ಯಾಯಿಕೆಗಳಿವೆ. (೩-೩, ೩-೫, ೩-೭, ೪-೫ ಇ) ಪಿರಿಯಾಪಟ್ಟಣದ ಕಾಳಗ ಎಂಬುದು ಐತಿಹಾಸಿಕ ಛಾಯೆಯುಳ್ಳದ್ದು ; 'ಹೂವು ಮಾರುವ ದೊರೆ ಚೆಲುವ' ಇತಿಹಾಸದ ದಂಡೆ ತೋರುವಂತೆ ಜಾನಪದ ಕಲ್ಪನೆಯ ನೀರನೀಲದಲ್ಲಿ ಲಹರಿಯಾಡುವಂಥದು. 'ಕೋಳೂರ ಕೊಡಗೂಸು' ಮತ್ತೊಂದು ಪ್ರಸಿದ್ಧ ಕಥೆ 'ಚಿಕ್ಕಜಾಜಿ ಮರಕೆ ತಲೆ ಕೊಟ್ಟ' 'ಮದುವಣ್ಣ' 'ಇರೋಬಿ' 'ಸಂಗಾತಿ' ಇವೇ ಮುಂತಾದ ಅನೇಕವು—ಇವುಗಳಲ್ಲೆಲ್ಲ ಅತ್ಯುತ್ತಮವೆನ್ನಬಹುದಾದ 'ನುಚ್ಚಾಯ್ತು ನೀರ ಹೊಳೆಯಾಗೆ'ಯೂ ಕೂಡಿ, ಜಾನಪದ ಸಮಾಜಜೀವನವನ್ನು ಸರಳ ವರ್ಣಿಸುವಂಥವು. 'ನಾಗರಗನ್ನೆ' ಮುಂತಾದವು ಸಮಾಜಜೀವನದ ಅದೃಶ್ಯಭಾವಗಳನ್ನು ಪವಾಡಪ್ರತಿಮೆಗಳ ಮೂಲಕ ವರ್ಣಿಸಲೆಳಸುವಂಥ ಜಾನಪದ ಮಾರ್ಗಕ್ಕೆ ಸಹಜವಾದ ಗೀತೆಗಳು. ಜೊತೆಗೆ 'ಉತ್ತರ ದೇವಿ' 'ಮಂಳೆರಾಯ ಮಾರ್ಥಿಣ್ಣ' ಮುಂತಾದ ಕಲ್ಪನಾವರ್ಷಗಳೂ ಗಮನಿಸಬೇಕಾದುವು.

ಈ ವಿಸ್ತೃತಿ ಕಾರಣವಾಗಿ, ಜಾನಪದ ಕವಿಗಳು ಕಂಡ ಜೀವನದ ಅನೇಕ ಮುಖಗಳ ಹಾಗೂ ಹೃದಯದ ಅನೇಕ ಭಾವಗಳ ಪ್ರದರ್ಶನ ಶಾಲೆಯಾಗಿದೆ ಈ ಸಂಕಲನ.

ಛಂದಸ್ಸು ಲಯಗಳ ದೃಷ್ಟಿಯಿಂದ ಗಮನಿಸಿದರೂ ಇಲ್ಲಿನ ವೈವಿಧ್ಯ ನಮ್ಮ ಜಾನಪದ ಕಥನಗೀತೆಗಳ ಛಂದೋಲಯಗಳನ್ನು ಪ್ರತಿನಿಧಿಸು ವಂತಿದೆ. ಒಟ್ಟಿನಲ್ಲಿ ಈ ಸಂಗ್ರಹ ಕನ್ನಡದ ಜಾನಪದ ಕಥನಕವನಗಳ


ಶೀತಿ ವಿಸ್ತಾರಗಳಿಗೆ ಒಂದು ಮಾದರಿಯಾಗಿ ಅದನ್ನು ಹೊಗಳುವಂತಿದೆ.


ಇಷ್ಟಾದರೂ, ಕೊನೆಗೆ ಇಂಥದೊಂದು ಗ್ರಂಥವನ್ನು ಕೊಳ್ಳುವಾಗ ಯಾವ ಹೆಚ್ಚನ್ನು ಹಾರಯಿಸುತ್ತೇವೆಯೋ ಅದು ದೊರೆಯದೆ ಓದುಗರು ಅತೃಪ್ತರಾಗಬೇಕಾಗುತ್ತದೆ. ಒಟ್ಟಿನ ಈ ಕಾವ್ಯರಾಶಿಯಲ್ಲಿ ವಿಸ್ತಾರ ವಿದ್ದರೂ ಅದು ವಿರಲದೀಪ್ತವೆನ್ನಿಸುತ್ತದೆ. ಮೊದಲನೆಯದಾಗಿ, ಈ ಬಾಹುಲ್ಯದಲ್ಲಿ ಕೂಡ ನಮ್ಮ ಮಾರ್ಗಕಾವ್ಯದೊಂದಿಗೆ ಸರಿ ಸರಿ ನಿಲ್ಲಬಲ್ಲ–ಉದಾಹರಣೆಗೆ 'ಕೆರೆಗೆ ಹಾರ' ದಂಥ ಒಂದೂ ಗೀತೆ ಕಾಣಿಸದು. ಮಧುರ ಭಾವಗಳ ಅಭಿವ್ಯಕ್ತಿಯಲ್ಲಿ ಸಾಮಾನ್ಯ ಸೀಮೆ ದಾಟಿರುವ ಜಾನಪದ ಕವಿಗಳು 'ಹೂವು ಮಾರುವ ಚೆಲುವ 'ದಂಥ ವಸ್ತುವನ್ನು ಆಯ್ದುಕೊಂಡು ನಿರೀಕ್ಷೆಗೇರಲಿಲ್ಲವೆಂಬ ವಿಷಯ ಆಶ್ಚರ್ಯವುಂಟುಮಾಡುವಂಥದು. ಎರಡನೆಯದಾಗಿ, ಗೀತೆಗಳನ್ನು ಸಂಗ್ರಹಿಸುವಲ್ಲಿ, ಪರಿಷ್ಕೃತಿ ಸಾಲದೆನ್ನಿಸುತ್ತದೆ. ಆದರಿಂದಲೇ ಗೀತಪಾದಗಳಂತೆ ಪೂರ್ಣಗೀತಗಳು ಬಗೆಯಲುಗಿಸುವುದಿಲ್ಲ. ಹಲವು ಗೀತಭಾಗಗಳು ಅಸ್ಪಷ್ಟಾರ್ಥಕಗಳಾಗಿ ತೋರಿದರೆ ಇನ್ನು ಹಲವು ಉಂಟಾದ ಪರಿಣಾಮವನ್ನೂ ಮುಸುಳಿಸಿಬಿಡುವಂಥವಾಗಿವೆ. ಎಷ್ಟೋ ಪಾದಗಳು ಅಪೂರ್ಣವಾಗಿದ್ದು ಅಥವಾ ಸುವಿಭಕ್ತವಾಗದೆ ಗತಿಯ ಸೊಬಗನ್ನು ಕುಂದಿಸುತ್ತವೆ. ಗ್ರಂಥ ಒಂದು ಸಮಗ್ರ ಬಂಧವಾಗುವಂತೆ ಸುಸಂಭಾವ್ಯವಾಗುವಂತೆ ಕಲ್ಪಿಸದಿರುವುದು ಕೂಡ ಓದುಗನ ಮೇಲೆ ಆಗಬಹುದಾದ ಪರಿಣಾಮವನ್ನು ಕಡಿಮೆಗೊಳಿಸಿದೆ. ಗ್ರಂಥದುದ್ದಕ್ಕೂ ಪ್ರಸ್ತುತ ಸಂಪಾದಕರ ಶ್ರಮ ವಿಜ್ಞಾಪಿತವಾಗುತ್ತದೆಯಾದರೂ ಪರಿಷ್ಕಾರ ಕೌಶಲ್ಯ ಸಾಲದೆ ಆ ಶ್ರಮ ಸಾಕಷ್ಟು ಯಶಸ್ವಿಯಾಗಿಲ್ಲವೆನ್ನಿಸುತ್ತದೆ.

ಅನುಬಂಧಿಸಿರುವ ' ಉದ್ಧೃತಿ 'ಗಳು ಆಯಾ ಗೀತೆಗಳಿಗೆ ಹೊಂದುವಂತಿಲ್ಲದೆ ಹರಿದು ಅಂಟಿಸಿರುವಂತೆ ಭಾಸವಾಗುತ್ತದೆ.

ಒಟ್ಟಿನಲ್ಲಿ ವಿಸ್ತಾರಕ್ಕಾಗಿ ಹೆಸರಿಸಬೇಕಾದ ಗ್ರಂಥ ಇದು.

—ಶ್ರೀ ಕೆ. ವಿ. ಸುಬ್ಬಣ್ಣ : 'ಪ್ರಜಾವಾಣಿ'





ಸ್ಥಳಚಿತ್ರಗಳು

ಕಾವ್ಯದ ಗುರಿ ಸಂತೋಷ ಮತ್ತು ಸ್ಫೂರ್ತಿ ; ಉತ್ತಮ ಕವಿಗಳು ಪ್ರಕಟಿಸುವ ಕಲಾ ವೈಭವವನ್ನು ಗ್ರಾಮ್ಯ ಗೀತೆಗಳು ಸಣ್ಣ ಪ್ರಮಾಣದಲ್ಲಿ ಸಾಧಿಸುತ್ತವೆ...

ಈ ಗೀತೆಗಳಲ್ಲಿ ಕಂಡುಬರುವ ಅತ್ಯಂತ ಸ್ಪಷ್ಟವಾದ ತಂತ್ರವೆಂದರೆ, ಪ್ರಾಯಶಃ ಅವುಗಳ ಸಂಕೇತ ನಿಷ್ಠೆ ; ಇದು ಜನ ಸಾಮಾನ್ಯದ ಸ್ವಭಾವದ ಪದ್ಯರೂಪಾಂತರ ಮಾತ್ರ. ಏಕೆಂದರೆ ಜನ ಸದಾ ಸಂಕೇತಗಳಲ್ಲಿಯೇ ವ್ಯವಹರಿಸುವುದು...ಈ ಸಾಂಕೇತಿಕ ರೀತಿ ಭಾರತದ ಜಾನಪದ ಕಾವ್ಯದಲ್ಲಿ ಎಲ್ಲೆಡೆ ಕಾಣಸಿಗುತ್ತದೆ.

—ವೆರಿಯರ್ ಎಲ್ವಿನ್

('Folk-Songs of Chattsgarh
ಎಂಬ ಗ್ರಂಥದ ಪೀಠಿಕೆಯಲ್ಲಿ')

* * * *

ಜಾನಪದ ಸಾಹಿತ್ಯ, ಜಾನಪದ ನೃತ್ಯ ಮತ್ತು ಜಾನಪದ ಕಲೆಗಳು ನಮ್ಮ ಸಾಮಾನ್ಯ ಜನತೆಯ ಮುಗ್ಧವೂ, ಸರಳವೂ, ಕಲಾತ್ಮಕವೂ ಆದ ಬದುಕಿಗೆ, ಅದರ ಆಶೋತ್ತರಗಳಿಗೆ. ಭಾವನೆಗಳಿಗೆ ಮತ್ತು ಸೋಲು-ಗೆಲುವುಗಳಿಗೆ ಯಾವಾಗಲೂ ಕನ್ನಡಿಯಾಗಿವೆ. ಜಾನಪದ ಸಾಹಿತ್ಯವು ದೇಶದ ನೈಜವಾದ ಸಾಂಸ್ಕೃತಿಕ ಜೀವನಕ್ಕೆ ತೋರ್‌ಬೆರಳಾಗಬಲ್ಲುದು, ಏಕೆಂದರೆ ಸಾಮಾನ್ಯ ಜನ ದೂರದ ಮೂಲೆಗಳಲ್ಲಿ ಬಾಳುವುದರಿಂದ, ಅವರು ಮಾತ್ರ ವಿವಿಧ ಪ್ರಭಾವಗಳ ಪ್ರವಾಹಕ್ಕೆ ತುತ್ತಾಗದೆ ಇರತಕ್ಕವರು.

—ಶ್ರೀ ವೈ. ಬಿ. ಚವಾಣ್
ಮಹಾರಾಷ್ಟ್ರದ ಮುಖ್ಯಮಂತ್ರಿ

(ಸಂದೇಶದಿಂದ)



T.M.P. MYS.

“ ಅರಿಮೇಲೆ ಅಂದಾನಿ ಗಿರಿಮ್ಯಾಲೆ ಬೈರೂವ ಕೋಡುಗಲ್ಲ ಮೇಲೆ ಗವಿಸಿದ್ಧ ”



'ಗಿರಿ ಕಾಣೆ ಗಿರಿ ಆದಿಚುಂಚನಗಿರಿ...............'




‘ಕೋಡುಗಲ್ಲಿನ ಒಡೆಯ ಎಲ್ಲವನೋ’........




' ಅಲ್ಲಿ ಗವಿ ಸಿದ್ದೇಶ್ವರ ನೆಲೆಗೊಂಡ!




ಅಲ್ಲಿ ಚುಂಚನಗಿರಿ ಶಿಖರದ–ಭೈರುವನ ಸೊಲ್ಲು ಸೊಲ್ಲಿಗು ನೆನೆದೇವು!




"ವೇಗಚುಂಚನಗಿರಿಯ ಸಿರಿಮಠ ಕಟ್ಟೆಲೋ...."




"ಒಳ್ಳೆ ಗಿರಿಮೇಲೆ ಉರಿಗದ್ದಿಗೆಯವನೆಲ್ಲವನೋ...."




ದೂರದ ಗಿರಿ ದೃಶ್ಯ



ದೇಗುಲದ ಮತ್ತೊಂದು ನೋಟ



ತಾಯಿ ಕಂಬದಮ್ಮ



ದೇಗುಲದ ಗೋಪುರ




ಗಂಗಾಧರೇಶ್ವರ ದೇವಾಲಯ



ಗವಿಸಿದ್ಧನ ಗುಡಿ



ಗಳಿಗೆಗಲ್ಲು



ಗಳಿಗೆಗಲ್ಲಿಗೆ
ಹೋಗುವ ದಾರಿ.



ಚೇಳೂರು ಕಂಬ



ಕೂಗು ಬಂಡೆ

Photo By :

KARAKRU & JSP



' ಭೈರುವನ –ಪಾದಕೆ ಶರಣೆಂದು ಕೈಯ ಮುಗಿದೇವು !



'ಹೆಸರಿಗೆ ದೊಡ್ಡದು ಗುಡಿದೂರ ....'



'ಆಬೆಟ್ಟ ಈಬೆಟ್ಟ ನಡುವಿನ ಹೆಬ್ಬೆಟ್ಟ'........



'ನಾಗರ ಕಲ್ಲುತ್ತಿ ಹೂವ ಕುಯ್ಯುವರ್‍ಯಾರೊ'........



‘ ಚುಂಚನಗಿರಿ ದಾರೀಲಿ................ .. ’

Cover Printed at the Hosali Press, Bangalore-1.